೧೮. ರೂ. ೨,೦೦೦ ಮೂಲವೇತನ ತಲುಪುವವರೆಗೆ ತಮಿಳುನಾಡು ಸರ್ಕಾರದ ನೀಡಿರುವಂತೆ ವೇತನ ಶ್ರೇಣಿಯು ಗರಿಷ್ಠ ಮಿತಿಯಲ್ಲಿ ನಿಂತಾಗ ವಾರ್ಷಿಕ ಮುಂಬಡ್ತಿ ನೀಡುವುದು.

೧೯. ಈಗಿನ ಪರಿಸ್ಥಿತಿ ಮತ್ತು ಬೆಲೆಯ ಮಟ್ಟದಲ್ಲಿ ವಿಶೇಷ ವೇತನ ಮತ್ತಿತರ ಭತ್ಯಗಳ ಪುನರ್‌ವಿಮರ್ಶೆ ಮಾಡುವುದು.

೨೦. ಸರ್ಕಾರಿ ನೌಕರರ ಕಡ್ಡಾಯ ವಿಮೆಯಿಂದ ಪಡೆಯುವ ಸಾಲದ ಸೌಲಭ್ಯವನ್ನು ಸರಳಗೊಳಿಸಬೇಕು.

೨೧. ಖಾಲಿ ಇರುವ ೫೦,೦೦೦ ಹುದ್ದೆಗಳಿಗೆ ನೇಮಕಾತಿ ಮಾಡಿ, ನೌಕರರ ಅಧಿಕ ಕೆಲಸದ ಹೊರೆಯನ್ನು ಸಡಿಲಗೊಳಿಸಿ ಜನಸಾಮಾನ್ಯರ ಕೆಲಸಕ್ಕೆ ಆಗುತ್ತಿರುವ ವಿಳಂಬವನ್ನು ನಿವಾರಣೆ ಮಾಡುವುದು.

೨೨. ನಾಲ್ಕನೆಯ ದರ್ಜೆ ನೌಕರರಿಗೆ ಉತ್ತಮವಾದ ಬಟ್ಟೆಯಲ್ಲಿ ಸಮವಸ್ತ್ರವನ್ನು ಸಕಾಲದಲ್ಲಿ ನೀಡುವುದು.

೨೩. ಸಾಮೂಹಿಕ ವಿಮಾ ಯೋಜನೆ ಜಾರಿಗೆ ಬರುವ ಮುನ್ನ ಇದ್ದ ಕುಟುಂಬ ಕಲ್ಯಾಣ ನಿಧಿಯ ಹಣಕ್ಕೆ ಹೆಚ್ಚುವರಿ ಬಡ್ಡಿ ನೀಡುವುದು.

೨೪. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಮತ್ತು ಬೆಂಗಳೂರಿನಲ್ಲೂ ಉಪಹಾರ ಗೃಹಗಳನ್ನು ಮಂಜೂರು ಮಾಡುವುದು.

೨೫. ನಿವೃತ್ತಿ ವೇತನ ಆಯೋಗದ ರಚನೆಯಾಗಬೇಕು.

೨೬. ಸ್ವಇಚ್ಛೆಯಿಂದ ನಿವೃತ್ತಿಯಾಗುವವರಿಗೆ ೫ ವಾರ್ಷಿಕ ಮುಂಬಡ್ತಿ ನೀಡುವ ಸೌಲಭ್ಯ ಕಲ್ಪಿಸಿದರೆ ಅನೇಕರು ನಿವೃತ್ತಿ ಹೊಂದುತ್ತಾರೆ.

೨೭. ಸಾವು–ನಿವೃತ್ತಿ ಉಪದಾನ, ನಿವೃತ್ತಿಯಾಗುವಾಗ ಬರುವ ಮೂಲ ಸಂಬಳದ ೧೬.೫ ರಷ್ಟೆಂದೂ ಮತ್ತು ಈ ಮೊತ್ತದ ಗರಿಷ್ಠ ಮಿತಿ ೩೬,೦೦೦ ರೂ.ಗಳೆಂದೂ ನಿಗದಿಪಡಿಸುವುದು.

೨೮. ನಿವೃತ್ತಿಯಾಗುವಾಗ ಬಾಕಿ ಉಳಿದ ಎಲ್ಲಾ ತರಹದ ರಜದ ಬದಲು ಸಂಬಳ ನೀಡುವುದು.

೨೯. ಸ್ಥಳೀಯ ಅಭ್ಯರ್ಥಿಗಳ, ಸ್ಟೈಪಂಡರಿ ಪದವೀಧರರ ಮತ್ತಿತರರ ಸೇವೆಯನ್ನು ಖಾಯಂಗೊಳಿಸುವುದು.

೩೦. ದಿನಗೂಲಿ ನೌಕರರನ್ನು ಹಂತ ಹಂತವಾಗಿ ಖಾಯಂ ಕೆಲಸಕ್ಕೆ ನೇಮಕ ಮಾಡುವುದು.

೩೧. ಎಲ್ಲಾ ಇಲಾಖೆಗಳ ಪದವೃಂದ ಮತ್ತು ನೇಮಕಾತಿ ಕಾನೂನುಗಳನ್ನು ಅಮೂಲಾಗ್ರವಾಗಿ ವಿಮರ್ಶಿಸಿ, ಎಲ್ಲ ದರ್ಜೆಯ ನೌಕರರಿಗೂ ಸೇವಾವಧಿಯಲ್ಲಿ ಮೂರು ಪದೋನ್ನತಿ ದೊರೆಯುವಂತೆ ರಚಿಸಬೇಕು.

೩೨. ಸಂಯುಕ್ತ ಸಮಾಲೋಚನಾ ಸಮಿತಿಯನ್ನು ಕೇಂದ್ರ ಸರ್ಕಾರ ರಚಿಸಿರುವ ರೀತ್ಯ ರಚಿಸುವುದು.

ನಿಯಮ ೫೯ರ ಮೇರೆಗೆ ಚರ್ಚೆ

ರೈತರ ಚಳುವಳಿ ಬಗ್ಗೆ

ಅಧ್ಯಕ್ಷರು.—ಸುಮಾರು ೧೩ ಜನ ಸದಸ್ಯರು ಒಂದು ನಿಲುವಳಿ ಸೂಚನೆಯನ್ನು ಒಂದೇ ವಿಷಯದ ಮೇಲೆ ಕಳುಹಿಸಿಕೊಟ್ಟಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಬೇಕೆಂದು ನನಗೆ ಪತ್ರ ಬರೆದಿದ್ದಾರೆ. ಆದ್ದರಿಂದ ನಾನು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುವುದೇನೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟ ಮೇಲೆ ತಾವು ಇನ್ನಷ್ಟು ಹೆಚ್ಚು ಕ್ಲಾರಿಫಿಕೇಶನ್ಸ್ ಕೇಳುವುದಕ್ಕೆ ಅವಕಾಶವಾಗುತ್ತದೆಂದು ನನ್ನ ಭಾವನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ನಾವು ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಿದ ಮೇಲೆ ನಾವು ಕಳುಹಿಸಿಕೊಟ್ಟಂತಹ ನಿಲುವಳಿ ಸೂಚನೆಯ ಪ್ರಾಮುಖ್ಯತೆ ಹೊರಟು ಹೋಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರ ಹೇಳುತ್ತಾರೆಂದು ನಮಗೆ ಚೆನ್ನಾಗಿ ಗೊತ್ತಿದೆ.

ಅಧ್ಯಕ್ಷರು.—ಈಗ ಸುಮಾರು ೧೩ ಜನ ಮಾನ್ಯ ಸದಸ್ಯರು ಒಂದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ನೋಟೀಸ್ ಕೊಟ್ಟಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರೆ ಆಮೇಲೆ ಬೇಕಾದರೆ ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಹಾಯಕವಾಗಬಹುದೆಂದು ನನ್ನ ಅನಿಸಿಕೆ.

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಅಧ್ಯಕ್ಷರೇ, ವಿಷಯ ಒಂದೇ ಆಗಿರಬಹುದು. ಆದರೆ ಅಭಿಪ್ರಾಯಗಳು ಬೇರೆ ಬೇರೆಯಾಗಿವೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಕಳೆದ ನಾಲ್ಕು ದಿವಸಗಳಿಂದ ರಾಜ್ಯದಲ್ಲಿ ರೈತರ ಚಳುವಳಿ ನಡೆಯುತ್ತಿದೆ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ......

ಶ್ರೀ ರಾಮಕೃಷ್ಣ ಹೆಗಡೆ.—ಸ್ವಾಮಿ ನಾನು ಆ ಬಗ್ಗೆ ಸ್ಟೇಟ್‌ಮೆಂಟ್ ಮಾಡುತ್ತಿಲ್ಲ. ಸುಮಾರು ನಾಲ್ಕು ದಿವಸಗಳಿಂದ ರಾಜ್ಯದಲ್ಲಿ ರೈತರ ಚಳುವಳಿ ನಡೆಯುತ್ತಿದೆ. ಇದರ ಬಗ್ಗೆ ಸಾರ್ವಜನಿಕರಿಂದ ಕೂಡ ಅಭಿಪ್ರಾಯಗಳು ಬಂದಿವೆ. ಮತ್ತೆ ಪತ್ರಿಕೆಗಳಲ್ಲಿ ಕೂಡ ವರದಿಗಳು ಬರುತ್ತಿವೆ. ಈ ಸದನದ ಮಾನ್ಯ ಸದಸ್ಯರು ಕೂಡ ಈ ವಿಚಾರದಲ್ಲಿ ಚರ್ಚೆ ಮಾಡಲು ನೋಟೀಸ್‌ಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ಆದರೆ ಸರ್ಕಾರದ ಪರವಾಗಿ ನಾನು ಒಂದು ಹೇಳಿಕೆಯನ್ನು ಮಾಡುವುದು ನಮ್ಮ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಈ ವಿಚಾರದಲ್ಲಿ ಸರ್ಕಾರದ ಕರ್ತವ್ಯವನ್ನು ಯಾವ ರೀತಿಯಲ್ಲಿ ಪಾಲನೆ ಮಾಡಿದ್ದೇವೆ. ಮತ್ತು ನಮ್ಮ ನಿಲುವು ಏನು ಎನ್ನುವ ಬಗ್ಗೆ ಒಂದು ಹೇಳಿಕೆಯನ್ನು ಈ ಮನೆಯಲ್ಲಿ ಕೊಟ್ಟರೆ ಆ ಮೇಲೆ ಅದರ ಮೇಲೆ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಬಹುದು. ಆದ್ದರಿಂದ ನಾನು ಸಭಾಪತಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವು ನನಗೆ ಹೇಳಿಕೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಈ ಸದನದ ಸಮಯವನ್ನು ನಾವು ಉಳಿಸಿದಂತೆ ಆಗುತ್ತದೆಂದು ನನ್ನ ಭಾವನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾನಾಯಕರು ಹೇಳಿದ ಪ್ರಕಾರ ಈಗ ನಾವು ಕಳುಹಿಸಿಕೊಟ್ಟಿರತಕ್ಕಂಥ ವಿಚಾರ ಬಹಳ ಜರೂರಾಗಿರತಕ್ಕಂಥ ವಿಷಯ ಮತ್ತು ಸಾರ್ವಜನಿಕರಿಗೂ ಕೂಡ ಇದು ತಮ್ಮ ಗಮನವನ್ನು ಸೆಳೆದಿರತಕ್ಕಂಥ ವಿಚಾರ. ಆ ಬಗ್ಗೆ ಸರ್ಕಾರ ಹೇಳಿಕೆಯನ್ನು ಕೊಡುವುದಾದರೆ ನಮ್ಮ ಅಭಿಪ್ರಾಯವನ್ನು ತಿಳಿಸಿದ ನಂತರ ಹೇಳಿಕೆಯನ್ನು ಬೇಕಾದರೆ ಕೊಡಬಹುದು. ಇದರಿಂದ ಸರ್ಕಾರಕ್ಕೆ ನಾವು ಸ್ವಲ್ಪ ಸಹಾಯ ಮಾಡಿದಂತೆ ಆಗುತ್ತದೆಂದು ನನ್ನ ಭಾವನೆ. ನಾವು ಇಲ್ಲಿ ಯಾವುದೇ ಒಂದು ವಿಚಾರವನ್ನು ಎತ್ತಬೇಕಾದರೂ ಕೂಡ ಆ ಬಗ್ಗೆ ಅದರ ಅವಶ್ಯಕತೆಯನ್ನು ಸಹ ಮಾನ್ಯ ಮುಖ್ಯಮಂತ್ರಿಗಳು ಚೆನ್ನಾಗಿ ಮನಗಂಡಿದ್ದಾರೆ. ಅದ್ದರಿಂದ ಈಗ ನಾವು ಕಳುಹಿಸಿ ಕೊಟ್ಟಿರತಕ್ಕಂಥ ನಿಲುವಳಿ ಸೂಚನೆ ಚರ್ಚೆ ಮಾಡಲು ಬಹಳ ಯೋಗ್ಯವಾಗಿದೆ. ಈಗ ನಿಯಮ ೫೯ರ ಪ್ರಕಾರ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವ ಪ್ರಾಮುಖ್ಯತೆ ಕೂಡ ಇಲ್ಲಿ ಅಡಗಿದೆ. ಮತ್ತು ಅತಿ ಜರೂರಾಗಿರತಕ್ಕಂಥ ವಿಷಯ ಕೂಡ ಆಗಿದೆ. ನಾವು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ ನಂತರ ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯನ್ನು ಕೊಡಲಿ.

ಅಧ್ಯಕ್ಷರು.—ವಿಷಯ ಬಹಳ ಗಂಭೀರವಾಗಿದೆ. ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಕೂಡ ಇದು ಬಹಳ ಗಂಭೀರವಾಗಿದೆ. ಆದರೆ ಈ ವಿಷಯವನ್ನು ಯಾವ ರೀತಿಯಲ್ಲಿ ತೆಗೆದುಕೊಳ್ಳಬೇಕೆಂದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ದಿನಾಂಕ ೨೩ರಂದು ಮಾನ್ಯ ಸದಸ್ಯರಾದಂಥ ಶ್ರೀಮಾನ್ ಯಡಿಯೂರಪ್ಪನವರು ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮತ್ತೇ ೨೫ನೇ ತಾರೀಖಿನಂದು ಶ್ರೀಮಾನ್ ಮಹೇಶ್ವರಪ್ಪನವರು ಕೂಡ ಪ್ರಸ್ತಾಪ ಮಾಡಿದ್ದಾರೆ. ಆಗ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಹೇಳಿಕೆಯನ್ನು ಕೊಟ್ಟಿದ್ದರು. ಆದರೆ ಮಾನ್ಯ ಮುಖ್ಯ

ಮಂತ್ರಿಗಳು ಕೊಟ್ಟಂತಹ ಹೇಳಿಕೆಯನ್ನು ಕೇಳಿಕೊಂಡು ಕುಳಿತುಕೊಳ್ಳುವಂಥ ಪರಿಸ್ಥಿತಿಯಲ್ಲಿ ನಾವು ಇಂದು ಇದ್ದೇವೆ. ಆದ್ದರಿಂದ ತಾವು ದಯುವಿಟ್ಟು ಅವರಿಗೆ ಸ್ವಲ್ಪ ತಿಳಿವಳಿಕೆಯನ್ನು ಕೊಟ್ಟು ಈಗ ಉಂಟಾಗಿರತಕ್ಕಂಥ ಪರಿಸ್ಥಿತಿಯನ್ನು ಶಾಂತಿ ರೂಪಕ್ಕೆ ತರಲು ಪ್ರಯತ್ನಿಸಲು ಅನುಮತಿಯನ್ನು ಕೊಟ್ಟರೆ ಒಳ್ಳೆಯದು. ಅದರ ಜೊತೆಗೆ ನಾವು ಕೂಡ ಕೆಲವಾರು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದು ಸಹಕಾರಿಯಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಸಹಕಾರವನ್ನು ತೆಗೆದು ಕೊಂಡು ಯಾವರೀತಿಯಲ್ಲಿ ರೈತರಿಗೆ ತೊಂದರೆಯಾಗುತ್ತಿದೆಯೆಂದು ಸರ್ಕಾರ ತಿಳಿದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಮತ್ತೆ ನಾವು ಎಷ್ಟೋ ಸಾರಿ ನಿಲುವಳಿ ಸೂಚನೆಗಳನ್ನು ಕಳುಹಿಸಿಕೊಟ್ಟಾಗ ಅದನ್ನು ತಾವು ೩೩೪ಕ್ಕೆ ಕನ್‌ವರ್ಟ್ ಮಾಡಿದ್ದೀರಿ. ಆದರೆ ತಾವು ಮೊದಲಿನಂತೆ ಈ ನಿಲುವಳಿ ಸೂಚನೆಯನ್ನು ಮಾಡುವುದು ಬೇಡ. ತಾವು ಏನಾದರೂ ಆ ದೃಷ್ಟಿ ಯಲ್ಲಿ ಇದನ್ನು ನೋಡಿದರೆ ಅದರ ಪ್ರಾಮುಖ್ಯತೆ ಹೊರಟು ಹೋಗುತ್ತದೆ. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಾಮುಖ್ಯತೆ ಇದೆ ಎಂದು ಮಾನ್ಯ ಸಭಾ ನಾಯಕರು ಕೂಡ ಒಪ್ಪಿದ್ದಾರೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಸುಮಾರು ೫೦ ಸಾವಿರ ರೈತರನ್ನು ಬಂಧಿಸಿದ್ದಾರೆಂದು ನನಗೆ ವರದಿ ಗಳು ಬಂದಿವೆ. ಆದರೆ ಸರ್ಕಾರದವರು ಸುಮಾರು ೧೬–೧೭ ಸಾವಿರ ರೈತರನ್ನು ಮಾತ್ರ ಬಂಧಿಸಿ ದ್ದಾರೆಂದು ಹೇಳಿಕೆ ಕೊಟ್ಟಿದ್ದಾರೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ರೈತರನ್ನು ಹತೋಟಿಗೆ ತರು ವಂಥ ಒಂದು ಕೆಲಸದಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲಗೊಂಡಿದೆ. ಮತ್ತೆ ಪತ್ರಿಕೆಗಳಲ್ಲಿ ವರದಿಗಳು ಬಂದ ಪ್ರಕಾರ ಈ ಸರ್ಕಾರ ಶಂಡ ಸರ್ಕಾರವೆಂದು ಹೇಳಬೇಕಾಗುತ್ತದೆ. ಆದರೆ ಈ ಮಾತನ್ನು ನಾನು ಹೇಳುತ್ತಿಲ್ಲ. ಪತ್ರಿಕೆಗಳಲ್ಲಿ ಬಂದಿರುವುದನ್ನು ಮಾತ್ರ ನಾನು ಇಲ್ಲಿ ಹೇಳುತ್ತಿದ್ದೇನೆ. ಇವತ್ತು ರೈತರು ಈ ರೀತಿ ಚಳುವಳಿ ಮಾಡುವುದಕ್ಕೆ ಕಾರಣ ಏನೆಂದರೆ ಇವರು ಪತ್ರಿಕಾ ಹೇಳಿಕೆಗಳನ್ನು ಕೊಟ್ಟು ಈ ರೀತಿ ಪ್ರಚೋದನೆಯನ್ನುಂಟು ಮಾಡಿದ್ದಾರೆಂದು ನನಗನಿಸುತ್ತದೆ. ಸರ್ಕಾರ ನಡೆದು ಕೊಳ್ಳುವ ವರ್ತನೆಯಿಂದ ಚಳುವಳಿಗೆ ಒಂದು ರೀತಿಯಲ್ಲಿ ಪ್ರಚೋದನೆ ಸಿಕ್ಕಿದೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಯಾವ ಹೇಳಿಕೆಯನ್ನುಬೇಕಾದರೂ ಕೊಡುತ್ತಾರೆ. ಆದರೆ ಇದೇ ಹೇಳಿಕೆಯನ್ನು ಇವರು ಹೊರಗಡೆ ಕೊಟ್ಟರೆ ಅವರಿಗೆ ರಕ್ಷಣೆಯೇ ಇಲ್ಲದಂತಾಗುತ್ತದೆ. ಇವೊತ್ತು ರಾಜ್ಯದಲ್ಲಿ ಕಾನೂನಿನ ವ್ಯವಸ್ಥೆ ಸಂಪೂರ್ಣವಾಗಿ ವಿಫಲಗೊಂಡಿದೆಯೆಂದು ಹೇಳಿದರೆ ತಪ್ಪಾಗಲಾರದು.

ಇಡೀ ಕರ್ನಾಟಕ ರಾಜ್ಯದಲ್ಲಿ ಇಂತಹ ಒಂದು ಅಸ್ತವ್ಯಸ್ತ ಹಿಂದೆಂದೂ ಆಗಿರಲಿಲ್ಲ. ಸರ್ಕಾರ ನಿಷ್ಕ್ರಿಯತೆಯಿಂದ ಕಣ್ಣು ಮುಚ್ಚಿಕೊಂಡು ಇದೆ. ಒಂದು ರೀತಿಯ ಪ್ರಚೋದನೆ ಕೊಡತಕ್ಕ ಹೇಳಿಕೆಗಳನ್ನು ಹೇಳಿದ್ದಾರೆ. ಇದಕ್ಕೆ ರಾಜಕೀಯ ಸೇರಿಸಿದ್ದಾರೆ. ರೈತರ ಚಳುವಳಿಯಲ್ಲಿ ಕಾಂಗ್ರೆಸ್ (ಐ) ನವರು ಸೇರಿಸಿದ್ದಾರೆ, ಕಳ್ಳಬಟ್ಟಿ ತಯಾರು ಮಾಡತಕ್ಕವರು ಸೇರಿದ್ದಾರೆ ಎನ್ನುವ ಅವಹೇಳನಕರ ಹೇಳಿಕೆಗಳನ್ನು ನೀಡಿಕೊಂಡು, ಒಂದು ರೀತಿಯ ಪ್ರಚೋದನೆ ಕೊಡತಕ್ಕ ಹೇಳಿಕೆ ಗಳನ್ನು ಹೇಳಲಿಕ್ಕೆ ಮುಖ್ಯ ಮಂತ್ರಿಗಳಿಗೆ ನೈತಿಕ ಹಕ್ಕು ಎಲ್ಲಿದೆ? ಇವರಿಗೆ ನೈತಿಕ ಹಕ್ಕು ಇದೆಯೇ ಎಂದು ನಾನು ಕೇಳುತ್ತಿದ್ದೇನೆ. ಸರ್ಕಾರ ನಡೆಸತಕ್ಕವರು ಚಳುವಳಿ ಮಾಡತಕ್ಕವರಿಗೆ ಪ್ರಚೋದನೆ ಕೊಡತಕ್ಕ ವಿಚಾರಗಳನ್ನು ಹೇಳಿದರೆ, ರಾಜ್ಯದ ಜನತೆಗೆ ಏನಾಗಬಹುದು? ರೈತರು ಏನಾಗಬೇಕು?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕೇಂದ್ರ ಸರ್ಕಾರದ ಪ್ರಚೋದನೆ ಇದೆಯೆಂದು ಹೇಳಿ ಕೊಳ್ಳುತ್ತೀರಿ. ಈ ಸಂದರ್ಭದಲ್ಲಿ ಕ್ರಿಯಾಲೋಪ ಎಲ್ಲಿ ಬರುತ್ತದೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ನನ್ನದು ಒಂದು ಕ್ರಿಯಾಲೋಪ ಇದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಶೂನ್ಯ ವೇಳೆಯಲ್ಲಿ ಕ್ರಿಯಾಲೋಪ ಬರುತ್ತದೆಯೆ?

ಅಧ್ಯಕ್ಷರು.—ಜಿರೋ ಅವರ್ ಈಗ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲು ನಿಲುವಳಿ ಸೂಚನೆಯ ಮೇಲೆ ಸಭಾ ನಾಯಕರು ಹೇಳಿಕೆ ಕೊಡಲಿಕ್ಕೆ ಅವಕಾಶ ಮಾಡಿಕೊಡುವುದು ಇವತ್ತಿನ ಪ್ರಶ್ನೆಯಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಹೇಳುವುದಕ್ಕೆ ಬಹಳಷ್ಟು ಅವಕಾಶವಿದೆ. ಸಾರ್ವಜನಿಕ ಸಭೆಗಳಲ್ಲಿ ಹೇಳಬೇಕಾದ್ದನ್ನು ಈ ಮನೆಯಲ್ಲಿ ರಕ್ಷಣೆ ಪಡೆಯುವುದಕ್ಕೋಸ್ಕರ ಮುಖ್ಯ ಮಂತ್ರಿಗಳು ಹೇಳು

ತ್ತಿದ್ದಾರೆಂದು ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ರಾಜ್ಯದಲ್ಲಿ ಮುಖ್ಯ ಮಂತ್ರಿಗಳು ಎಷ್ಟು ಸಾರ್ವಜನಿಕ ಸಮಾರಂಭಗಳನ್ನು ಮಾಡಿದ್ದಾರೆ? ವಿರೋಧ ಪಕ್ಷದವರು ಎಷ್ಟು ಸಾರ್ವಜನಿಕ ಸಮಾರಂಭಗಳನ್ನು ಮಾಡಿದ್ದಾರೆಂಬುದು ರಾಜ್ಯದ ಜನತೆಗೆ ಗೊತ್ತಿದೆ. ಮುಖ್ಯ ಮಂತ್ರಿಗಳು ಎಲ್ಲಾ ಜಿಲ್ಲೆಗಳಲ್ಲೂ ಸಾರ್ವಜನಿಕ ಸಭೆಗಳನ್ನು ನಡೆಸಿದ್ದಾರೆ. ನೀವು ಒಂದೂ ಸಭೆಯನ್ನು ಮಾಡಿಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇದು ಯಾವ ಕ್ರಿಯಾಲೋಪ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸಾರ್ವಜನಿಕ ಸಭೆಗಳನ್ನು ಮಾಡತಕ್ಕ ಧೈರ್ಯ ನಿಮಗೆ ಇದೆಯೆ? ಅದು ಜನರಿಗೆ ಗೊತ್ತಿದೆ. ರೈತರಿಗೆ ನೀವೇನು ಮಾಡಿದ್ದೀರಿ? ಅದನ್ನು ಈಗ ಬಿಡಿ, ಮುಂದೆ ನೋಡೋಣ. ಇವತ್ತು ಸಭೆಯಲ್ಲಿ ಬಂದಿರತಕ್ಕ ಸನ್ನಿವೇಶ ಹಿಂದೆಯೂ ಬಂದಿದ್ದು ಹಿಂದೆ ಇಂತಹ ಒಂದು ಪ್ರಸಂಗದಲ್ಲಿ ಹಿಂದಿನ ಅಧ್ಯಕ್ಷರು ತಮ್ಮ ತೀರ್ಪು ಕೊಟ್ಟಿದ್ದಾರೆ. ಹಿಂದೆ ನಿಲುವಳಿ ಸೂಚನೆ ಬಂದಾಗ, ಸರ್ಕಾರ ತಾನೇ ಮೊದಲು ಉತ್ತರ ಕೊಡಲಿಕ್ಕೆ ಮುಂದೆ ಬಂದಾಗ, ಹಿಂದಿನ ಅಧ್ಯಕ್ಷರು ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಮಾನ್ಯ ಹಿರಿಯ ಸದಸ್ಯರಾದ ರಂಗನಾಥ್‌ರವರು ಈ ಸಭೆಯ ಅಧ್ಯಕ್ಷರಾಗಿದ್ದರು. ದಿನಾಂಕ ೯ನೇ ಫೆಬ್ರುವರಿ ೧೯೮೧ರ ಪ್ರೊಸಿಡಿಂಗ್ಸ್ ರೆಫರ್ ಮಾಡುತ್ತಿದ್ದೇನೆ. ಸರ್ಕಸ್ ದುರಂತದ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ಕೊಡಲಾಗಿತ್ತು. ಬೆಂಗಳೂರಿನಲ್ಲಿ ಸರ್ಕಸ್ ದುರಂತ ಆದಾಗ ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲೂ ಕೂಡ ಎಲ್ಲರೂ ಗಾಬರಿಗೊಂಡಿದ್ದರು. ಇಂತಹ ಒಂದು ಗಂಭೀರವಾದ ಪರಿಸ್ಥಿತಿಯ ಬಗ್ಗೆ ನಾವು ವಿರೋಧ ಪಕ್ಷದಲ್ಲಿದ್ದಾಗ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆವು. ಅಂದಿನ ಮುಖ್ಯ ಮಂತ್ರಿಗಳು ನಾವು ಹೇಳುವುದಕ್ಕೆ ಮೊದಲು ಹೇಳಿಕೆ ಕೊಡಲಿಕ್ಕೆ ಮುಂದಾದರು. ಅಂದಿನ ಅಧ್ಯಕ್ಷರು ಆ ದಿನದ ಪ್ರಶ್ನೋತ್ತರ ವೇಳೆಯನ್ನು ಮುಂದಕ್ಕೆ ಹಾಕಿ ಸರ್ಕಾರ ಹೇಳಿಕೆ ಕೊಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಈಗ ಗಂಭೀರವಾದ ಪ್ರಶ್ನೆ ಸಭೆಯ ಮುಂದೆ ಬಂದಿದೆ, ಬಂದಿರತಕ್ಕ ನಿಲುವಳಿ ಸೂಚನೆಗೆ ಸಭಾ ನಾಯಕರು ಉತ್ತರ ಕೊಡಲಿಕ್ಕೆ ಮುಂದೆ ಬಂದಾಗ, ಅವರಿಗೆ ಅವಕಾಶ ಮಾಡಿಕೊಡತಕ್ಕದ್ದು ನಡೆದು ಬಂದ ಸತ್‌ಸಂಪ್ರದಾಯ ಅದನ್ನು ಉಳಿಸಿಕೊಳ್ಳಿ.

ಅಧ್ಯಕ್ಷರು.—ವಿಷಯದ ಗಂಭೀರತೆಯಲ್ಲಾಗಲಿ, ಚರ್ಚೆಯ ವ್ಯಾಪ್ತಿಯಲ್ಲಾಗಲಿ ಮೊಟಕು ಮಾಡಬೇಕೆಂದು ನಾನು ಹೇಳುತ್ತಿಲ್ಲ. For the purpose of information I read : "Manner and scope of discussion : After the mover has spoken on the definite matter which he wants the House to consider, other Members speak followed by the Minister concerned. In special circumstances the Speaker, in his discretion, may permit the mover to move the motion without making a speech and ask the Minister concerned to speak and give informotion in his possession to the House to provide a basis for the debate to follow." That is exactly what I said.

SRI M. VEERAPPA MOILY.—That procedure could be followed.

MR. SPEAKER.—Let him make a statement and then we can debate. I do not want to curtail the scope.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಈ ನಿರ್ಣಯಕ್ಕೆ ತೀರ್ಪು ಕೊಡುವುದಕ್ಕೆ ಮೊದಲು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ನನ್ನದು ಅಡ್ಮಿಷಬಿಲಿಟಿಯ ಬಗ್ಗೆ ಕ್ರಿಯಾಲೋಪವಿದೆ. ಹೇಳಿಕೆ ಕೊಟ್ಟಮೇಲೆ ಪ್ರಶ್ನೆ ಏನು ಬರುತ್ತದೆ? ಮೊದಲು ನಿಲುವಳಿ ಸೂಚನೆಯನ್ನು......

ಅಧ್ಯಕ್ಷರು.—ಅವರು ಹೇಳಿಕೆ ಕೊಡಲಿ. If they want to discuss, they can.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಲುವಳಿ ಸೂಚನೆಯನ್ನು ಮೂವ್ ಮಾಡಬಹುದೆಂದು ತಾವು ಅನುಮತಿ ಕೊಟ್ಟಮೇಲೆ, ಮಾನ್ಯ ಕೈಗಾರಿಕಾ ಮಂತ್ರಿಗಳ ವ್ಯಾಖ್ಯಾನವೇನು?

ಶ್ರೀ ಎಸ್. ಆರ್. ಬೊಮ್ಮಾಯಿ.—ವ್ಯಾಖ್ಯಾನವಿದೆ, ಮಾನ್ಯ ಅಧ್ಯಕ್ಷರ ನಿರ್ಣಯಕ್ಕೆ ನಾನು ತಲೆಬಾಗುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ತಮ್ಮ ರೂಲಿಂಗ್ ಬಗ್ಗೆ ಮಾತನಾಡಬಹುದಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರಿಂದ ಸಲಹೆ ಬಂದಿದೆ ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ಮಾಡಬಹುದು ಎನ್ನುವ ಸಲಹೆ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—On your point of order the chair has given the verdict. The Hon. Speaker has allowed me to move this.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಸಲಹೆ.

SRI M. VEERAPPA MOILY.—I am sorry. The hon. Minister is misleading the House.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೂವ್ ಮಾಡಿದ ಮೇಲೆ ಆ ಪ್ರಶ್ನೆ ಬರುತ್ತದೆ. ತಾವು ತಂದಿರತಕ್ಕ ನಿಲುವಳಿ ಸೂಚನೆ is not admissible. Therefore, there is no question of moving the motion.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ಮಂಡಿಸಲಿಕ್ಕೆ ತಮ್ಮ ಸಮ್ಮತಿ ಇದೆಯೆಂದು ಹೇಳೀದ್ದೀರಿ. ತಾವು ಹಾಗೆ ಹೇಳಿದ ಮೇಲೆ ಮಾನ್ಯ ಮಂತ್ರಿಗಳ ಕ್ರಿಯಾಲೋಪ ಉಳಿಯುವುದಿಲ್ಲ. ಸಲಹೆ ಇದೆ, ನೀವು ಏನು ಹೇಳುತ್ತೀರಿ ಎಂದಿದ್ದೀರಿ, ವಿರೋಧ ಪಕ್ಷದ ನಾಯಕರು ಆಗಬಹುದೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಮಧ್ಯೆ ಮಧ್ಯೆ ಪ್ರಸ್ತಾಪ ಮಾಡತಕ್ಕದ್ದು ಸರಿಯಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಸಲಹೆ ಕೊಟ್ಟಿದ್ದಾರೆ.

SRI K. H. RANGANATH.—The point of order is disposed of.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಆಗಿಲ್ಲ.

ಅಧ್ಯಕ್ಷರು.—ನಾನೇ ಹೇಳಿಬಿಡುತ್ತೇನೆ. ವಿಷಯವನ್ನು ಎರಡು ಭಾಗ ಮಾಡೋಣ. ತಾಂತ್ರಿಕ ಕಾರಣಗಳಿಂದ ವಿಷಯದ ಪ್ರಸ್ತಾಪ ಮೊಟಕು ಆಗಬಹುದು ಎನ್ನುವುದು ನನ್ನ ಉದ್ದೇಶ. ಅದನ್ನು ತಾವು ಒಪ್ಪುತ್ತೀರಿ, ಸರ್ಕಾರ ಕೂಡ ಒಪ್ಪುತ್ತದೆ. ವಿಷಯದ ಗಂಭೀರತೆಯನ್ನು ಗಮನ ದಲ್ಲಿಟ್ಟು ಒಂದು ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡಬಹುದು. ಮಯಾ-ಮಿಡಿಯಾ ನಿಲುವಳಿ ಸೂಚನೆಯನ್ನು ಓದಿ, ಅದರ ಮೇಲೆ ಉತ್ತರ ಹೇಳಲಿಕ್ಕೆ ಅವಕಾಶವಿದೆ. ವಿವರಣೆಗೆ ಅವಕಾಶವಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ನಿಲುವಳಿ ಸೂಚನೆಯನ್ನು ಓದಿದ ಮೇಲೆ, ಅದರ ಮೇಲೆ ಒಂದು ಹೇಳಿಕೆ ಕೊಟ್ಟ ಮೇಲೆ, ಈ ಸಭೆಯಲ್ಲಿ ನಿಲುವಳಿ ಸೂಚನೆಯ ಮೇಲೆ ಪ್ರಸ್ತಾಪ ಮಾಡಲಿಕ್ಕೆ ಬರುತ್ತದೆ. ಅದು ಬೇರೆ ರೂಪದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ನಿಲುವಳಿ ಸೂಚನೆಯ ಮೇಲೆ ಪ್ರಸ್ತಾಪ ಮಾಡಲಿಕ್ಕೆ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ನಿಲುವಳಿ ಸೂಚನೆಯನ್ನು ಮೂವ್ ಮಾಡಿದ ಮೇಲೆ, ಅದು ನಿಲುವಳಿ ಸೂಚನೆಯಾಗುತ್ತದೆ ಬೇರೇನೂ ಆಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಪ್ರಾಮುಖ್ಯವಾದ ನಿರ್ದಿಷ್ಟವಾದ ವಿಷಯವನ್ನು ಚರ್ಚಿಸುವ ಉದ್ದೇಶದಿಂದ ಈ ಸಭೆಯ ಕಾರ್ಯಕಲಾಪಗಳನ್ನು ಮುಂದಕ್ಕೆ ಹಾಕಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ನಿಲುವಳಿ ಸೂಚನೆಯ ಪತ್ರವನ್ನು ಕೊಡುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ......

ಅಧ್ಯಕ್ಷರು.—Let him read the motion. There is nothing wrong.

ಶ್ರೀ ಎಂ. ವೀರಪ್ಪ ಮೊಯಿಲಿ.—ಸರ್ಕಾರದ ವರ್ತನೆಯಿಂದ ಪ್ರಚೋದನೆ ಪಡೆದು ತಾರೀಕು ೨೬–೧–೧೯೮೧ರಿಂದ ಸತತವಾಗಿ ನಡೆಯುತ್ತಿರುವ ರಸ್ತೆ ಮತ್ತು ರೈಲು ತಡೆಯಿಂದ ರೈತರಿಗೆ, ರೈತ ಕಾರ್ಮಿಕರಿಗೆ, ಸಾರ್ವಜನಿಕರಿಗೆ ತೊಂದರೆ ಉದ್ಭವಿಸಿರುವುದರಿಂದ ಇದು ಸಾರ್ವಜನಿಕ ಹಿತ ದೃಷ್ಟಿಯಿಂದ ಜರೂರಾದ ವಿಷಯವಾಗಿದೆ ಮತ್ತು ನಿಲುವಳಿ ಸೂಚನೆಯು ನಿಯಮಕ್ಕೆ ಬದ್ಧವಾಗಿದೆ.

ಅಧ್ಯಕ್ಷರು.—ಕೃಷ್ಣನ್‌ರವರೇ ನೀವು ಕೂಡ ಓದಿಬಿಡಿ.

ಶ್ರೀ ಎಂ.ಎಸ್. ಕೃಷ್ಣನ್.—ನಮ್ಮದನ್ನೂ ಕೂಡ ಓದಿಬಿಡುತ್ತೇನೆ.

ಅಧ್ಯಕ್ಷರು.—ಆಗಬಹುದು.

SRI M.S. KRISHNAN.—I move :

"That this House be adjourned to discuss about the statewide agitation of peasants, which has led to large scale arrests, disruption of traffic, lathi charge and beating of peasants by the police and created a serious situation."

ಶ್ರೀ ಜಿ. ನಾರಾಯಣ ಕುಮಾರ್.—ದಿನಾ ಹೇಳುತ್ತಿದ್ದೇವೆ ಕನ್ನಡದಲ್ಲಿ ಹೇಳಿ ಅಂತ. ಆದರೂ ಕೂಡ ಇಂಗ್ಲಿಷಿನಲ್ಲಿ ಹೇಳುತ್ತಿದ್ದೀರಲ್ಲ ?

ಅಧ್ಯಕ್ಷರು.—ಬಂಗಾರಪ್ಪನವರು ಕನ್ನಡದಲ್ಲಿ ಹೇಳುತ್ತಾರೆ. ನೀವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ರೈತರು ತಮ್ಮ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಬೇಕೆಂದು ಸರ್ಕಾರಕ್ಕೆ ಹಲವಾರು ಬಾರಿ ಒತ್ತಾಯ ಮಾಡಿದರೂ ಕೂಡ, ಈ ವಿಚಾರದಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಕೆಲವು ಮಂತ್ರಿಗಳು ರೈತರ ಬೇಡಿಕೆಗಳನ್ನು ಈಡೇರಿಸಿಕೊಡುವುದನ್ನು ಬಿಟ್ಟು ಅವರ ಮೇಲೆ ಆಧಾರರಹಿತ ಆಪಾದನೆ ಮಾಡಿರುವುದರಿಂದ ರೈತರು ಚಳುವಳಿ ನಡೆಸಲು ಅನಿವಾರ್ಯ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಈ ಚಳುವಳಿ ಪ್ರಾರಂಭವಾದಾಗಿನಿಂದಲೂ ಈವರೆಗೆ ಇಪ್ಪತ್ತೈದು ಸಾವಿರ ರೈತರನ್ನು ಬಂಧಿಸಿರುವ ಸರ್ಕಾರದ ಈ ರೈತವಿರೋಧಿ ಮನೋಭಾವನೆಯನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಸರ್ಕಾರ ಬಂಧಿತರಿಗೆ ವಸತಿ ಇನ್ನಿತರ ಕನಿಷ್ಟ ಸೌಲಭ್ಯಗಳನ್ನು ಸಹಿತ ದೊರಕಿಸಿಕೊಡಲು ವಿಫಲಗೊಂಡಿದೆ. ಹಾಗೂ ಪೋಲೀಸಿನವರ ಮುಖಾಂತರ. ಈ ಚಳುವಳಿಯನ್ನು ಹತ್ತಿಕ್ಕಲು ಸಂಚನ್ನು ನಡೆಸಲಾಗಿದೆ ಎಂದು ಕೂಡ ನಮಗೆ ತಿಳಿದುಬಂದಿದೆ. ಈ ವಿಚಾರ ಸಾರ್ವಜನಿಕವಾಗಿ ಬಹಳ ಪ್ರಾಮುಖ್ಯತೆಯುಳ್ಳದ್ದು ಆಗಿರುವುದರಿಂದ ಸದನದ ಎಲ್ಲಾ ಕಾರ್ಯಕಲಾಪಗಳನ್ನು ನಿಲ್ಲಿಸಿ ಈ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯನ್ನು ಕೊಡಲಿ.

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳಿಕೆ ಕೊಡುವ ಮೊದಲು ತಾವು 'ಪ್ರಸ್ತಾವ ಮಂಡಿಸಲಾಗಿದೆ' ಎಂದು ಹೇಳಬೇಕಿತ್ತು.

MR. SPEAKER.—Let us not go again into the technicalities.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈಗ ತಾವು ೫೯ನೇ ನಿಯಮಾವಳಿಯ ಪ್ರಕಾರ ಓದಿರತಕ್ಕಂಥಾದ್ದು ಮತ್ತು ಅದರ ಪ್ರಕಾರವಾಗಿಯೇ ನಾವು ನಿಲುವಳಿ ಸೂಚನೆಯನ್ನು ಕಳಿಸಿರತಕ್ಕಂಥಾದ್ದು.

MR. SPEAKER.—I have called the Hon. Chief Minister to make a statement. You can speak then.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರು ಈನಿಲುವಳಿ ಸೂಚನೆಯನ್ನು ಸಭೆಯ ಮುಂದಿಡಲಾಗಿದೆ ಎಂದು ಹೇಳಬೇಕಾಗುತ್ತದೆ. ಅವರು ಹಾಗೆ ಹೇಳದೇ ಇದ್ದರೆ ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯನ್ನು ಕೊಡುವುದಕ್ಕೆ ಬರುವುದಿಲ್ಲ.

SRI M.S. KRISHNAN.—Rule 59 says,

"Subject to the provisions of these rules a motion for an adjournment of the business of the House for the purposes of discussing a definite matter of urgent public importance may be made with the consent of the Speaker."

SRI S. BANGARAPPA.—I also agree......

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ನೀಡಿದ ಮೇಲೆ ವಿಷಯಗತವಾಗಿ ನೀವು ಪ್ರಸ್ತಾಪ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ಮನೆಯ ಸನ್ಮಾನ್ಯ ಸದಸ್ಯರಿಗೆ ಕಳೆದ ನಾಲ್ಕು ದಿವಸಗಳಲ್ಲಿ ನಮ್ಮ ರಾಜ್ಯದಲ್ಲಿ ರೈತಸಂಘದ ಪರವಾಗಿ ನಡೆದಂತಹ ಚಳುವಳಿ ಮತ್ತು ಅದರಿಂದಾಗಿ ಸಾರ್ವಜನಿಕರಿಗೆ ಆದಂತಹ ತೊಂದರೆ ಮತ್ತು ಅನಾನುಕೂಲನೆ ಹಾಗೂ ಈ ಚಳುವಳಿಯಲ್ಲಿ ಭಾಗವಹಿಸಿದ್ದವರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ, ಅವರ ಸ್ಥಿತಿ ಏನು ? ಈ ಎಲ್ಲಾ ವಿಚಾರಗಳಲ್ಲಿ ಕಳವಳ ಆಗಿರತಕ್ಕಂಥಾದ್ದು ಸ್ವಾಭಾವಿಕ. ಮತ್ತು ನಾನು ಇದನ್ನು ಅರ್ಥ ಮಾಡಿಕೊಳ್ಳಬಲ್ಲೆ. ತಾವು ಮಾನ್ಯ ವಿರೋಧಪಕ್ಷದ ನಾಯಕರು, ಶ್ರೀಮಾನ್ ಎಂ.ಎಸ್. ಕೃಷ್ಣನ್ ಮತ್ತು ಮಾನ್ಯ ಬಂಗಾರಪ್ಪನವರಿಗೆ ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಅನುಮತಿಯನ್ನು ಕೊಟ್ಟಿರಿ. ಅದೇರೀತಿ ಶೃಂಗೇರಿ ಮತಕ್ಷೇತ್ರದಿಂದ ಆರಿಸಿಬಂದಂತಹ ಶ್ರೀಮಾನ್ ಗೋವಿಂದ ಗೌಡರು ಒಂದು ಸೂಚನೆಯನ್ನು ಕಳಿಸಿಕೊಟ್ಟಿದ್ದರು. ಅಲ್ಲಿ ನಿನ್ನೆ ನಡೆದಂಥ ಘಟನೆ ವಿಚಾರದಲ್ಲಿ ನಾನು ಇದನ್ನು ಕೂಡ ಗಮನದಲ್ಲಿಟ್ಟುಕೊಂಡು ಈ ಹೇಳಿಕೆಯನ್ನು ಕೊಡಲಿಕ್ಕೆ ಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

೧. ಮಾನ್ಯ ಸದಸ್ಯರೆಲ್ಲರಿಗೂ ತಿಳಿದಿರುವಂತೆ ರಾಜ್ಯ ರೈತ ಸಂಘವು ದಿನಾಂಕ ೨೬ನೇ ಜನವರಿ ೧೯೮೪ರಿಂದ ಚಳುವಳಿ ಯನ್ನು ಹೂಡಿದೆ. ಇದರಿಂದಾಗಿ ರಾಜ್ಯದ ಹಲವೆಡೆಗಳಲ್ಲಿ ರಸ್ತೆ ಮತ್ತು ರೈಲು ಸಂಚಾರಕ್ಕೆ ತಡೆ ಯುಂಟಾಗಿದೆ. ಈ ಚಳುವಳಿಯು ಬೆಳಗಾಂ, ಹಾಸನ, ಮಂಡ್ಯ, ಗುಲ್ಬರ್ಗ, ಮೈಸೂರು, ತುಮಕೂರು ಜಿಲ್ಲೆಗಳಿಗೆ ಹೆಚ್ಚಾಗಿ ಸೀಮಿತವಾಗಿದ್ದು, ಬೀದರ್, ಚಿಕ್ಕಮಗಳೂರು, ಚಿತ್ರದುರ್ಗ, ಕೊಡಗು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಪ್ರಾದೇಶಿಕ ಮಟ್ಟದಲ್ಲಿ ಸೀಮಿತವಾಗಿದೆ. ಮುಕ್ತ ಸಾಗಾಣಿಕೆ ಮತ್ತು ಸಾಮಾನ್ಯ ಜನಜೀವನಕ್ಕೆ ಅಡಚಣೆಯುಂಟಾಗುವುದನ್ನು ಪ್ರತಿಬಂಧಿಸಲು ಸರ್ಕಾರವು ಸ್ವಾಭಾವಿಕವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಬೇಕಾಗಿ ಬಂತು. ಕಳೆದ ನಾಲ್ಕು ದಿನಗಳಲ್ಲಿ ೨೬,೧೭೫ ರೈತರನ್ನು ಬಂಧಿಸಲಾಗಿದ್ದು ಅವರಲ್ಲಿ ಈಗಾಗಲೇ ೫,೫೭೩ ರೈತರನ್ನು ಬಿಡುಗಡೆ ಮಾಡಲಾಗಿದೆ. ಉಳಿದವರನ್ನು ನ್ಯಾಯಾಂಗದ ನಿಯಂತ್ರಣಕ್ಕೆ ಒಳಪಡಿಸಿ ರಾಜ್ಯದ ಅನೇಕ ಸೆರೆಮನೆಗಳಲ್ಲಿ ಹಾಗೂ ಈ ಉದ್ದೇಶಕ್ಕೆಂದೇ ತಾತ್ಕಾಲಿಕವಾಗಿ ಪಡೆದಿರುವ ಕಟ್ಟಡಗಳಲ್ಲಿ ಬಂಧಿಸಿಡಲಾಗಿದೆ. ರೈತರಿಗಾಗಿ ಅಡಿಗೆ, ನೀರು ಪೂರೈಕೆ ಮತ್ತು ಇತರ ಸೌಲಭ್ಯಗಳಿಗಾಗಿ ವಿಶೇಷ ವ್ಯವಸ್ಥೆಗಳನ್ನು ಕೂಡ ಈ ತಾತ್ಕಾಲಿಕ ಸ್ಥಳಗಳಲ್ಲಿ ಮಾಡಲಾಗಿದೆ. ಅನೇಕ ಪೋಲೀಸರಿಗೆ ಕಲ್ಲೆಸತದಿಂದ ಗಾಯಗಳಾಗಿದ್ದರೂ ಕೂಡ ಅವರು ಅತ್ಯಂತ ತಾಳ್ಮೆಯಿಂದ ಕಾರ್ಯನಿರ್ವಹಿಸಬೇಕೆಂದು ಆದೇಶಿಸಲಾಗಿದೆ. ಕೆಲವೊಂದು ವಿರಳ ಪ್ರಕರಣಗಳ ಹೊರತು ಸಾಮಾನ್ಯವಾಗಿ ಪರಿಸ್ಥಿತಿಯು ಶಾಂತಿಯುತವಾಗಿದೆ.

೨. ರೈತ ಚಳುವಳಿಯಿಂದಾಗಿ ಬಾಧಿತ ಪ್ರದೇಶಗಳಲ್ಲಿ ಖಾಯಿಲೆಯಿಂದ ನರಳುತ್ತಿರುವವರಿಗೆ ಮತ್ತು ಗಾಯಗೊಂಡ ವ್ಯಕ್ತಿಗಳಿಗೆ ಶೀಘ್ರ ವೈದ್ಯಕೀಯ ಪರಿಹಾರವನ್ನು ನೀಡದೇ ಇರುವುದು ಸೇರಿದಂತೆ ಸಾರ್ವಜನಿಕರಿಗೆ ಗಣನೀಯವಾದ ಪ್ರಮಾಣದಲ್ಲಿ ಅನಾನುಕೂಲ ಉಂಟಾಗಿದೆ. ಈ ಚಳುವಳಿಯಿಂದಾಗಿ ಹಾಸನ ಮತ್ತು ಮಂಡ್ಯ ಮೊದಲಾದ ಪಟ್ಟಣಗಳಲ್ಲಿ ಅವಶ್ಯಕ ವಸ್ತುಗಳು ಮತ್ತು ತರಕಾರಿಗಳ ಕೊರತೆಯುಂಟಾಗಿದೆ. ಈ ಕೊರತೆಯಿಂದಾಗಿ ಅಗಾಧವಾದ ಬೆಲೆ ಏರಿಕೆ ಉಂಟಾಗಿದೆ.

೩. ಸರ್ಕಾರವು ಯಾವಾಗಲೂ ರೈತರ ನ್ಯಾಯಬದ್ಧ ಬೇಡಿಕೆಗಳಿಗೆ ಸಹಾನುಭೂತಿ ತೋರುತ್ತಿದೆಯಷ್ಟೇ ಅಲ್ಲದೆ ಸದಾಕಾಲ ನಿರ್ದಿಷ್ಟ ಸಮಸ್ಯೆಗಳನ್ನು ಪರಿಹರಿಸಲು ಮುಕ್ತವಾಗಿ ಚರ್ಚೆ ನಡೆಸಿದೆ. ಅಲ್ಲದೆ ಕರ್ನಾಟಕ ರಾಜ್ಯ ರೈತ ಸಂಘದ ಪ್ರತಿನಿಧಿಗಳನ್ನು ಜನವರಿ ೬ರಂದು ನಡೆಯುವ ಸಭೆಗೆ ಆಹ್ವಾನಿಸಿದ್ದೆವು. ಆದರೆ ಸಂಘದ ಪ್ರತಿನಿಧಿಗಳು ಇದನ್ನು ಮುಂದೂಡಬೇಕೆಂದು ಕೋರಿದ್ದರು. ೧೩ನೇ ತಾರೀಕು ಸಭೆಯನ್ನು ಕರೆಯಬೇಕೆಂದು ಸೂಚನೆಯನ್ನು ಮಾಡಿದ್ದೆವು. ಆದರೆ ಆಗಲೂ ಕೂಡ ಆ ದಿನ ಅನುಕೂಲ ಇಲ್ಲವೆಂದು ಹೇಳಿದರು. ೧೬ನೇ ತಾರೀಕಿಗೂ ಕೂಡ ಸಭೆಯನ್ನು ಇಟ್ಟುಕೊಳ್ಳಬಹುದೆಂದು ಅವರನ್ನು ಕರೆದಿದ್ದೆವು. ಒಂದಲ್ಲ ಒಂದು ಕಾರಣ ಕೊಟ್ಟು ಅವರು ಅದರಲ್ಲಿ ಭಾಗವಹಿಸಲಿಲ್ಲ. ಸ್ವಲ್ಪ ಕಾಲದ ನಂತರ ಒಂದು ಸಭೆಗೆ ದಿನಾಂಕ ನಿಗಧಿ ಮಾಡಬೇಕೆಂದು ಮತ್ತೊಮ್ಮೆ ವಿಚಾರಿಸಲಾಯಿತು. ಆದರೆ ಅವರು ಸಮ್ಮತಿ ಸೂಚಕ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಿಲ್ಲ. ಮತ್ತೊಮ್ಮೆ ನಾನು ಅವರನ್ನು ಜನವರಿ ೨೩ರಂದು ಸಭೆ ನಡೆಸಲು ಆಹ್ವಾನಿಸಿದೆ. ಆದರೆ ಅವರು ಬರಲು ಒಪ್ಪಲಿಲ್ಲ. ಅವರ ಬೇಡಿಕೆಗಳ ಬಗ್ಗೆ ಚರ್ಚಿಸಲು ನಾವು ಸಿದ್ಧರಿರುವಾಗ ಕರ್ನಾಟಕ ರಾಜ್ಯ ರೈತ ಸಂಘವು ಪ್ರಸಕ್ತ ನಡೆಸುತ್ತಿರುವ ಚಳುವಳಿ ನ್ಯಾಯಬದ್ಧವಲ್ಲವೆಂದು ನನಗೆ ಕಂಡುಬರುತ್ತಿದೆ. ಅಲ್ಲದೆ ರಾಜ್ಯದ ಎಲ್ಲಾ ರೈತರು ಪ್ರಸಕ್ತ ಚಳುವಳಿಗೆ ಬೆಂಬಲ ನೀಡುತ್ತಿಲ್ಲವೆಂದು ಸಹ ನಾನು ಹೇಳ ಬಯಸುತ್ತೇನೆ. ಕೆಲವು ಇತರ ರೈತ ಸಂಘಗಳು ಸಾರ್ವಜನಿಕವಾಗಿ ಈ ಚಳುವಳಿಯನ್ನು ವಿರೋಧಿಸಿವೆ. ಅಲ್ಲದೆ ಉಳಿದ ಕೆಲವರು ನಮ್ಮೊಡನೆ ಕೂತು ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಲು ಸಹ ಬಯಸಿದ್ದಾರೆ.

೪. ಈಗಿನ ಸರ್ಕಾರವು ರೈತರಿಗೆ ನೀಡಿದ ವಿವಿಧ ರಿಯಾಯಿತಿಗಳನ್ನು ಮಾನ್ಯ ಸದಸ್ಯರು ತಿಳಿದೇ ಇದ್ದಾರೆ. ೧೯೮೩–೮೪ರ ಬಜೆಟ್‌ನ್ನು ಮಂಡಿಸುವ ಸಮಯದಲ್ಲಿ ಕೃಷಿ ವಲಯಕ್ಕೆ ಮುಖ್ಯವಾಗಿ ಅನುಕೂಲವಾಗುವ ವಿವಿಧ ರಿಯಾಯಿತಿಗಳನ್ನು ನಾನು ವ್ಯಕ್ತಪಡಿಸಿದ್ದೇನೆ. ತರುವಾಯ ಮತ್ತೂ ಕೆಲವು ರಿಯಾಯಿತಿಗಳನ್ನು ಘೋಷಿಸಲಾಗಿದೆ.

ಇವುಗಳನ್ನು ಕೆಳಗೆ ಸಂಕ್ಷಿಪ್ತವಾಗಿ ಕೊಡಲಾಗಿದೆ :—

೧) ಗೊತ್ತುಪಡಿಸಿದ ದಿನಾಂಕದೊಳಗೆ ಬಾಕಿಯನ್ನು ಸಂದಾಯ ಮಾಡಿದ ರೈತರಿಗೆ ಬಡ್ಡಿ ಮೇಲಣ ಸಹಾಯಧನ.

೨) ಸಾಲ ನೀಡುವ ಹಣಕಾಸು ಸಂಸ್ಥೆಗಳು ನಿಗಧಿಪಡಿಸಿದ ಅಲ್ಪಾವಧಿ. ಮಧ್ಯಮ ಅವಧಿಯ ಮತ್ತು ದೀರ್ಘಾವಧಿ ಸಹಕಾರ ಸಾಲಗಳ ಮೇಲಿನ ಚಾಲ್ತಿ ಸಾಲಗಳನ್ನು ಗೊತ್ತುಪಡಿಸಿದ ಅವಧಿಯೊಳಗೆ ಸಂದಾಯ ಮಾಡಿದ ರೈತರಿಗೆ ಸಹಾಯಧನ.

೩) ಕೃಷಿ ಉತ್ಪನ್ನಗಳನ್ನು, ಸಹಕಾರ ಸಾಲಗಳನ್ನು ತೀರಿಸಲು ಉಪಯೋಗಿಸಿದರೆ ಪ್ರಮುಖ ಕೃಷಿ ಸಾಲ ನೀಡಿಕೆ ಸಂಘಗಳ ಮೂಲಕ, ರೈತರು ಮಾರುಕಟ್ಟೆಗೆ ಹಾಕಿದ ಅವರ ಸ್ವಂತ ಕಾಫಿ ಉತ್ಪನ್ನಗಳ ಮೌಲ್ಯದ ಮೇಲೆ ಶೇಕಡ ೫ರಷ್ಟು ಪ್ರೋತ್ಸಾಹಕ ಸಹಾಯಧನ.

೪) ರೈತರಿಂದ ಬಾಕಿ ಇರುವ ಬಡ್ಡಿ ಮತ್ತು ದಂಡ ರೂಪದ ಬಡ್ಡಿಗಳು ಸೇರಿದಂತೆ ಸರ್ಕಾರದ ವಿವಿಧ ಸಾಲಗಳ ಬಾಕಿಯನ್ನು ಮನ್ನಾ ಮಾಡುವುದು.

೫) ನೀರು ಬೀಳದ ಬಾವಿಗಳಿಗೆ ರಿಯಾಯಿತಿಯಲ್ಲಿ ಮತ್ತಷ್ಟು ರಿಯಾಯಿತಿ.

೬) ಗ್ರಾಮಗಳಲ್ಲಿ ಗೊಬ್ಬರಗಳನ್ನು ದಾಸ್ತಾನು ಮಾಡಲು ನೀಡುವ ಸಾಲಗಳಿಗೆ ಪ್ರೋತ್ಸಾಹಕಧನ.

೭) ಪ್ರಾಯೋಗಿಕ ಬೆಳೆ ವಿಮಾ ಯೋಜನೆಯ ವಿಸ್ತರಣೆ.

೮) ಬಾಕಿಯನ್ನ ಮೂರು ವಾರ್ಷಿಕ ಸಮ ಕಂತುಗಳಲ್ಲಿ ಮರುಸಂದಾಯ ಮಾಡಬೇಕೆಂಬ ಷರತ್ತುಗೊಳಪಟ್ಟು ಸಣ್ಣ ಮತ್ತು ಅತಿಸಣ್ಣ ರೈತರ ವಿಷಯದಲ್ಲಿ ಬಾಕಿ ಇರುವ ಎಲ್ಲಾ ಮೊತ್ತವನ್ನು ಮತ್ತು ಇತರ ವರ್ಗದ ಎಲ್ಲಾ ರೈತರ ವಿಷಯದಲ್ಲಿ ಶೇಕಡಾ ೫೦ರಷ್ಟನ್ನು ಮನ್ನಾ ಮಾಡುವುದು.

೯) ಸಹಕಾರ ಸಾಲಗಳ ಬಗ್ಗೆ ನೀಡುತ್ತಿರುವ ರೀತಿಯಲ್ಲೇ ವಾಣಿಜ್ಯ ಬ್ಯಾಂಕುಗಳು ನೀಡಿದ ಸಾಲಗಳ ಮೇಲೆ ಸ್ಟಾಂಪ್ ಶುಲ್ಕ ವಿನಾಯಿತಿ.

೧೦) ವಾಸ್ತವವಾಗಿ ನೀರು ಒದಗಿಸಲಾದ ದಿನಾಂಕದಿಂದ ೫ ವರ್ಷಗಳ ಅವಧಿಯವರೆಗೆ ನೀರು ದರ ಸಂದಾಯದಲ್ಲಿ ವಿನಾಯಿತಿ.

೧೧) ನೇಗಿಲುಗಳು, ಗುದ್ದಲಿಗಳು, ಪಂಪ್‌ಸೆಟ್ ಮತ್ತು ಬೀಜ ಉತ್ತುವ ಹಾಗು ಗೊಬ್ಬರ ಬೆರೆಸುವಂತಹ ಕೃಷಿ ಪರಿಕರಗಳ ಮೇಲೆ ಮಾರಾಟ ತೆರಿಗೆ ವಿನಾಯಿತಿ.

೧೨) ಗೊಬ್ಬರಗಳ ಮೇಲಿನ ಮಾರಾಟ ತೆರಿಗೆಯನ್ನು ಶೇಕಡ ೩ರಿಂದ ೨ಕ್ಕೆ ಇಳಿಸುವುದು.

೧೩) ಕಬ್ಬು ಬೆಳೆಗಾರರಿಗೆ, ಒಂದು ಟನ್‌ಗೆ ರೂ. ೧೨ರಂತೆ ಸಹಾಯ ಧನದ ಏರಿಕೆ.

೫. ಈ ರಿಯಾಯಿತಿಗಳ ಮೌಲ್ಯವು ರೂ. ೬೦ ರಿಂದ ೭೦ ಕೋಟಿಗಳವರೆಗೆ ಇರಬೇಕೆಂದು ಅಂದಾಜು ಮಾಡಲಾಗಿದೆ.

೬. ಸರ್ಕಾರಕ್ಕೆ ರೈತರ ಬಗ್ಗೆ ಸಂಪೂರ್ಣ ಸಹಾನುಭೂತಿ ಇದೆ. ಅಲ್ಲದೆ ರಾಜ್ಯದ ಆರ್ಥಿಕ ಸಾಮರ್ಥ್ಯ ಮತ್ತು ಅಭಿವೃದ್ಧಿಯ ವಿವಿಧ ವಲಯಗಳಿಗೆ ಅಗತ್ಯವಾದ ನಿಧಿಗಳಿಗೆ ಇರುವ ಒತ್ತಾಯ ಪೂರ್ವಕ ಬೇಡಿಕೆಗಳನ್ನು ಗಮನಕ್ಕೆ ತೆಗೆದುಕೊಂಡು ಅವರಿಗೆ ಇನ್ನಷ್ಟು ಪರಿಹಾರಾತ್ಮಕ ನೆರವನ್ನು ನೀಡಲು ಸಹ ಸಿದ್ಧವಿದೆ. ಸಣ್ಣ ಮತ್ತು ಅತಿಸಣ್ಣ ರೈತರಿಗೆ ರಕ್ಷಣೆ ನೀಡುವ ಬಗ್ಗೆ ವಿಶೇಷ ಗಮನ ಕೊಟ್ಟು ಕೆಲವು ಗರಿಷ್ಠ ಮಿತಿಗೆ ಒಳಪಟ್ಟು ಸರ್ಕಾರಕ್ಕೆ ಸೇರಿದ ಒತ್ತುವರಿ ಭೂಮಿಯನ್ನು ಕ್ರಮ ಬದ್ಧಗೊಳಿಸುವ ಪ್ರಶ್ನೆಯನ್ನು ತೀವ್ರವಾಗಿ ಪರಿಶೀಲಿಸುತ್ತಿದೆ. ನಾಬಾರ್ಡ್ ಸಂಸ್ಥೆಯೊಂದಿಗೆ ಸಮಾಲೋಚನೆ ನಡೆಸಿ ರೈತರಿಗೆ ಸಹಕಾರಿ ಸಾಲಗಳ ಸಂಬಂಧದಲ್ಲಿ ರಿಯಾಯಿತಿಗಳ ಒಂದು ಮಾದರಿ ಯನ್ನು ಸಹ ರೂಪಿಸಲು ರಾಜ್ಯ ಸರ್ಕಾರ ಪ್ರಯತ್ನಿಸುತ್ತಿದೆ. ವಾಣಿಜ್ಯ ಬ್ಯಾಂಕುಗಳಿಂದ ಪಡೆದ ಸಾಲಗಳ ಸಂಬಂಧದಲ್ಲಿ ಸಹ ಇದೇ ರೀತಿಯ ಕ್ರಮ ಕೈಗೊಳ್ಳಲು ಪ್ರಯತ್ನಿಸಲಾಗುತ್ತಿದೆ. ರೈತರ ಕೃಷಿ ಉತ್ಪನ್ನದಲ್ಲಿ, ಅಧಿಕ ಪ್ರಮಾಣವನ್ನು ರಾಜ್ಯದಲ್ಲಿನ ಇತರ ಜಿಲ್ಲೆಗಳಲ್ಲಿ ಮಾರಾಟ ಮಾಡುವ ಸಲುವಾಗಿ ಸಾಗಿಸಲು ರೈತರಿಗೆ ಅಗತ್ಯವಾದ ವಿವಿಧ ರೀತಿ ನೀತಿಗಳ ಬಗ್ಗೆ ಚರ್ಚೆ ನಡೆಸಲು ಸಹ ಸರ್ಕಾರ ಸಿದ್ಧವಿದೆ. ಅಗತ್ಯವಿದ್ದ ಸಂದರ್ಭಗಳಲ್ಲಿ ಮುಕ್ತ ಮಾರುಕಟ್ಟೆ ಕಾರ್ಯಾಚರಣೆಯ ಮೂಲಕ ಕೃಷಿ ವಸ್ತುಗಳ ಬೆಲೆಯ ಮಟ್ಟಕ್ಕೆ ಬೆಂಬಲ ನೀಡಲು ಸಹ ನಾವು ಕ್ರಮ ಕೈಗೊಂಡಿದ್ದೇವೆ.

೭. ಬೆಲೆ ಆಯೋಗವೊಂದನ್ನು ರೂಪಿಸುವುದು ಕರ್ನಾಟಕ ರಾಜ್ಯ ರೈತ ಸಂಘದ ಬೇಡಿಕೆಗಳಲ್ಲಿ ಒಂದಾಗಿದೆ. ಪ್ರಮುಖ ಬೆಳೆಗಳ ಬೆಂಬಲ ಬೆಲೆ ನಿರ್ಧಾರವನ್ನು ಭಾರತ ಸರ್ಕಾರವು ನೇಮಿಸಿರುವ ಕೃಷಿ ಬೆಲೆ ಆಯೋಗವು ಮಾಡುತ್ತಿದೆ ಎಂಬುದನ್ನು ಮಾನ್ಯ ಸದಸ್ಯರಿಗೆ ನಾನು ಮತ್ತೊಮ್ಮೆ ತಿಳಿಸ ಬಯಸುತ್ತೇನೆ. ಇಂತಹ ಜಟಿಲ ಸಮಸ್ಯೆಯ ಬಗ್ಗೆ ರಾಜ್ಯ ಸರ್ಕಾರಗಳು ಸ್ವಇಚ್ಛೆಗನುಸಾರವಾಗಿ ಎಷ್ಟರಮಟ್ಟಿಗೆ ಕ್ರಮ ಕೈಗೊಳ್ಳಬಹುದು ಎಂಬುದು ಇನ್ನೂ ಅಸ್ಪಷ್ಟ. ಆದರೆ ಈ ಸಂಬಂಧದಲ್ಲಿ ನಾವು ಎಲ್ಲಾ ಸಾಧ್ಯತೆಗಳನ್ನು ಪರಿಶೀಲಿಸಲು ಸಿದ್ಧರಿದ್ದೇವೆ.

೮. ಸರ್ಕಾರವು ರೈತರ ಬಗ್ಗೆ ಸಹಾನುಭೂತಿಯನ್ನು ಇನ್ನು ಮುಂದೆಯೂ ತೋರುವುದೆಂದು ಮತ್ತು ನಿರ್ದಿಷ್ಟ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡುವು ದೆಂದು ನಾನು ಮತ್ತೊಮ್ಮೆ ಸ್ಪಷ್ಟಪಡಿಸಬಯಸುತ್ತೇನೆ. ಈ ಕ್ಷಣದಲ್ಲೂ ಸಹ ರೈತರ ಪ್ರತಿನಿಧಿ ಗಳೊಂದಿಗೆ ಚರ್ಚೆ ನಡೆಸಲು ನಾವು ಸಿದ್ಧರಿದ್ದೇವೆ. ನಾನು ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘವು ತನ್ನ ಚಳುವಳಿಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಪೂರ್ವಕ ಮನವಿ ಮಾಡಿ ಕೊಳ್ಳುತ್ತೇನೆ. ಸದನದ ಎಲ್ಲಾ ಸದಸ್ಯರು ಇದರ ಬಗ್ಗೆ ಸಂಪೂರ್ಣ ಬೆಂಬಲ ನೀಡುವುದರಲ್ಲಿ ಯಾವ ಸಂಶಯವೂ ಇಲ್ಲ.

೧೨ ೩೦—ಪಿ.ಎಂ

ಮಾನ್ಯ ಅಧ್ಯಕ್ಷರೇ, ನಿನ್ನೆ ತಾನೇ ಈ ಒಂದು ಅಹಿತಕರವಾದ ಘಟನೆ ಏನು ನಡೆದಿದೆ ಅದು ನನ್ನ ಲಕ್ಷ್ಯಕ್ಕೆ ಬಂದಿದೆ. ಈ ನರಸಿಂಹರಾಜಪುರದ ಘಟನೆ ಬಗ್ಗೆ ಬೆಳಗಿನ ಪತ್ರಿಕೆಯಲ್ಲಿ ಬಂದಿರುವ ವರದಿಯನ್ನು ನೋಡಿದ್ದೇನೆ. ಒಬ್ಬ ಪೋಲೀಸ್ ಆಫೀಸರ್ ಶಾಂತಿಯುತವಾಗಿ ಚಳುವಳಿ ಮಾಡುತ್ತಾ ಇದ್ದಂಥಾ ರೈತರ ಮೇಲೆ ಲಾಠಿಚಾರ್ಜು ಮಾಡಿದ್ದಾರೆ ಅನ್ನುವ ವಿಚಾರ ಬಂದಿದೆ. ಈ ಬಗ್ಗೆ ಮಾನ್ಯ ಗೋವಿಂದಗೌಡರು ತಮಗೂ ಒಂದು ಪತ್ರ ಬರೆದಿದ್ದಾರೆ, ನನಗೂ ಕೂಡ ಒಂದು ಪತ್ರವನ್ನು ಬರೆದಿದ್ದಾರೆ. ಈ ವಿಚಾರದಲ್ಲಿ ಕೂಡಲೇ ಜಿಲ್ಲಾ ಮ್ಯಾಜಿಸ್ಟ್ರೇಟರು ತನಿಖೆ ನಡೆಸ ಬೇಕೆಂದು ನಾನು ಈಗಾಗಲೇ ಆಜ್ಞೆ ಮಾಡಿದ್ದೇನೆ.

ಮಾನ್ಯ ಅಧ್ಯಕ್ಷರೇ, ಈ ಚಳುವಳಿ ಪ್ರಾರಂಭವಾಗುವುದಕ್ಕಿಂತ ಮೊದಲು ನಾನು ಒಂದು ಟೆಲಿಗ್ರಾಂ ಅನ್ನು ರೈತ ಸಂಘದ ಅಧ್ಯಕ್ಷರಿಗೆ ಕಳುಹಿಸಿಕೊಟ್ಟಿದ್ದೇನೆ. ನಾನು ಕಳುಹಿಸಿಕೊಟ್ಟಂಥಾ ಟೆಲಿಗ್ರಾಂ ವಿಷಯವನ್ನು ಇಲ್ಲಿ ಓದತಕ್ಕಂಥಾದ್ದು ಅಗತ್ಯ ಎಂದು ನಾನು ಆಶಿಸುತ್ತೇನೆ. ಮಾನ್ಯ ರುದ್ರಪ್ಪನವರಿಗೆ ನಾನು ಕಳುಹಿಸಿಕೊಟ್ಟಿರುವ ಟೆಲಿಗ್ರಾಂ ಈ ರೀತಿ ಇದೆ:—

"Refer representation addressed to me concerning farmers demand on behalf of your association. I had asked Industries Minister to contact you to find out a convenient date for the meeting. The Industries Minister had tentatively scheduled the meeting on 6th instant to discuss the farmers demands made by you in consultation with Prof. Nanjunda Swamy and Sri Sundareshan who had agreed to inform you also. Later both of them asked for post-ponement and suggested to fix the meeting after 16th instant as they were to.ring the State. Industries Minister again tried to contact them on the 16th and 17th to know the date of meeting and had telephoned discussion with them and you to suggest a convenient date for the meeting. However, no particular date was suggested. When Industries Minister contacted you over phone on the 20th you had suggested to hold the meeting after the 26th instant. It is better that a meeting is held before 26th to discuss the demands of farmers. Hence I request you to participate in the meeting to be held on 23rd at 9 A.M. in the Conference Hall, Vidhana Soudha with 15 representatives of your Association. I seek your co-operation".

ಮಾನ್ಯ ಅಧ್ಯಕ್ಷರೇ. ಜನವರಿ ೨೧ ರವರೆಗೆ ಅವರ ಜೊತೆಯಲ್ಲಿ ಏನು ಮಾತನಾಡಿದೆನೋ ಅದರ ಬಗ್ಗೆ ಸಭೆ ಯಾವಾಗ ಸೇರಬೆ.ಕೆಂಬುದರ ಬಗ್ಗೆ ಅವರಿಂದ ನನ್ನ ಹೆಸರಿಗೆ ಒಂದು ಟೆಲಿಗ್ರಾಂ ಅನ್ನು ಕಳುಹಿಸಿದ್ದಾರೆ. ಮೊದಲು ಈ ವಿಚಾರದಲ್ಲಿ ಸಭೆಯನ್ನು ೧೩ಕ್ಕೆ ಸೇರೋಣ ಅಂತ ಗೊತ್ತು ಮಾಡಿದೆವು, ನಂತರ ೧೫ಕ್ಕೆ ಸೇರೋಣ ಅಂತ ಮಾತನಾಡಿದೆವು ಅದಕ್ಕೆ ಅವರು ಆಗುವುದಿಲ್ಲ, ೧೬ರ ನಂತರ ಸೇರೋಣ ಅಂದರು, ಅನಂತರ ಆ ಸಭೆಯನ್ನು ೨೩ಕ್ಕೆ ಸೇರೋಣ ಅಂತ ಸೂಚನೆ ಮಾಡಿದೆ. ಅದಕ್ಕೆ ಉತ್ತರವಾಗಿ ಮಾನ್ಯ ನಂಜುಂಡಸ್ವಾಮಿಯವರು, ಮಾನ್ಯ ಸುಂದರೇಶ್ ರವರು ಮತ್ತು ಮಾನ್ಯ ರುದ್ರಪ್ಪನವರು ಈ ಮೂವರ ಹೆಸರಿನಿಂದ ನನಗೆ ಒಂದು ಟೆಲಿಗ್ರಾಂ ಈ ರೀತಿ ಬಂದಿದೆ. ಅದನ್ನು ಈಗ ತಮ್ಮ ಮುಂದೆ ಓದಬಯಸುತ್ತೇನೆ. ಅದು ಈ ರೀತಿ ಇದೆ.

"Your T legram Received. Our year long discussion with your Government farmers denied rights both of the B lly and the Mind. Democracy for farmers denied using police power as precursor to talks proposed for January 23rd by you atleast abolish firing and cane charges on Sathyagraphis. Abolish summoning and arrest without warrant except for grave offences. Abolish attachment of movable property of farmers. Abolish fragmentation act. R gularise encroachment by landless and small farmers without penalty. Remove restrictions on movements of foodgrains and levy procurement, Appoint price commission to investigate Industrial and Agricultural cost of production to achieve priority in prices and suspend police Officers responsible for police Barbarism in Chickmagalur District and to express regret to Chickmagalur District farmers These can be done without expenses as minimum duty to farmers before the R public Day. Ryot Sangha is always prepared for talks over other Major issues after you start respecting rights of farmers".

ಇದು ೨೪ರ ಸಾಯಂಕಾಲ ಬಂದಿರಬಹುದು. ನಾವು ೨೩ನೇ ತಾರೀಖು ಮೀಟಿಂಗ್‌ನ್ನು ಕರೆದರೂ ೨೪ರ ಸಾಯಂಕಾಲ ನಮಗೆ ಟೆಲಿಗ್ರಾಂ ಬಂತು. ಮಾನ್ಯ ಅಧ್ಯಕ್ಷರೇ, ಇದರಲ್ಲಿರತಕ್ಕ ಬೇಡಿಕೆಯನ್ನು ನಾವು ನೋಡಿದಾಗ ಅವರು ಹೇಳುತ್ತಾರೆ ಅವರ ಬೇಡಿಕೆಗಳಿಂದ ಸರ್ಕಾರಕ್ಕೆ ಯಾವುದೇ ಖರ್ಚು ಇಲ್ಲ, ಖರ್ಚು ಇಲ್ಲದೆ ಮಾಡಬಹುದು ಎಂದು. ಕೆಲವೊಂದು ಬೇಡಿಕೆಗಳನ್ನು ನಾವು ಖರ್ಚು ಇಲ್ಲದೆ ಮಾಡಬಹುದು. ಆದರೆ ಇದರಲ್ಲಿ ಕೆಲವೊಂದನ್ನು ನಾವು ಆಗಲೇ ತೀರ್ಮಾನ ತೆಗೆದುಕೊಂಡು ಪರಿಹಾರ ಮಾಡಿದ್ದೇವೆ. ಕೆಲವನ್ನು ನಾವು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಏಕೆಂದರೆ ಅವು ರಾಜ್ಯ ಸರ್ಕಾರದ ವ್ಯಾಪ್ತಿಗೆ ಮಿಕ್ಕಿರತಕ್ಕವುಗಳು. ಉದಾಹರಣೆಗಾಗಿ "Firing and cane charges on Sathygraphis". ಮಾನ್ಯ ಅಧ್ಯಕ್ಷರೇ ಈ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ತನ್ನ ನೀತಿ ಏನು ಎಂದು ಪ್ರಕಟಣೆ ಮಾಡಿದೆ. ಇದರಲ್ಲಿ ರೈತರ ಮೇಲೆ, ವಿದ್ಯಾರ್ಥಿಗಳ ಮೇಲೆ, ಕಾರ್ಮಿಕರ ಮೇಲೆ, ದಲಿತರ ಮೇಲೆ ಅವರು ಯಾವುದೇ ಸಂದರ್ಭದಲ್ಲಿ ಚಳುವಳಿ ಮಾಡಲಿ, ಮಾಡುವಂತಹ ಹಕ್ಕು ಅವರಿಗೆ ಇದೆ. ಅವರು ಶಾಂತಿಯುತವಾದ ಚಳುವಳಿಯನ್ನು ಮಾಡಿದಾಗ ಎಂದೆಂದು ನಾವು ಅವರ ಮೇಲೆ ಗುಂಡು ಹಾರಿಸುವುದಿಲ್ಲವೆಂದು ನಮ್ಮ ನೀತಿಯನ್ನು ಪ್ರಕಟಣೆ ಮಾಡಿದ್ದೇವೆ. ಲಾಟಿ ಚಾರ್ಜ್ ಕೂಡಾ ಅಷ್ಟೆ, ಸತ್ಯಾಗ್ರಹಿಗಳು ನಿಜವಾಗಿಯೂ ಸತ್ಯಾಗ್ರಹಿಗಳಾಗಿದ್ದರೆ ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಹಾನಿಯನ್ನುಂಟು ಮಾಡದಿದ್ದರೆ ಲಾಟಿ ಚಾರ್ಜ್ ಮಾಡತಕ್ಕಂಥ ಪ್ರಶ್ನೆ ಉದ್ಭವವಾಗುವುದಿಲ್ಲ. ಮೊನ್ನೆ ೪ ದಿವಸಗಳಲ್ಲಿ ನಡೆದಂಥ ಘಟನೆಯಲ್ಲಿ ಕೆಲವು ಕಡೆ ಲಾಟಿ ಚಾರ್ಜ್ ಆಗಿದೆ. ಆಗ ಸಾರ್ವಜನಿಕರಿಗೆ ಆಗಿರತಕ್ಕ ತೊಂದರೆಯ ಬಗ್ಗೆ ನಾನು ಇಲ್ಲಿ ವಿವರವಾಗಿ ಹೇಳಲಿಕ್ಕೆ ಬಯಸುವುದಿಲ್ಲ. ಮೊನ್ನೆ ೨೫ನೇ ತಾರೀಖಿನ ದಿವಸ ಮಾನ್ಯ ಸದಸ್ಯರಾದ ಶ್ರೀ ಕೆ.ಜಿ. ಮಹೇಶ್ವರಪ್ಪನವರು ಈ ಪ್ರಶ್ನೆಯನ್ನು ಎತ್ತಿದಾಗ ಮತ್ತು ಅದಕ್ಕಿಂತ ಎರಡು ದಿವಸ ಮೊದಲು ಶ್ರೀ ಯಡಿಯೂರಪ್ಪನವರು ಈ ಪ್ರಶ್ನೆಯನ್ನು ಎತ್ತಿದಾಗ ನಾವು ನಮ್ಮ ಭಯವನ್ನು ವ್ಯಕ್ತಮಾಡಿದ್ದೇವೆ. ರೋಗಿಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ, ವ್ಯಾಪಾರಸ್ಥರು, ಬೇರೆ ರಾಜ್ಯಗಳಿಂದ ಬಂದಂಥ ಜನರಿಗೆ ತೊಂದರೆಯಾಗಬಹುದೆಂದು ನಮ್ಮ ಭಯವನ್ನು ವ್ಯಕ್ತ ಮಾಡಿದ್ದೇವೆ. ಒಬ್ಬರು ಪರಾಲಿಸಿಸ್ ಇದ್ದಂಥ ರೋಗಿ ಬಸ್‌ನಲ್ಲಿ ಆಸ್ಪತ್ರೆಗೆ ಹೋಗುವಾಗ ಆ ಬಸ್ಸನ್ನು ಅಲ್ಲಿಯೇ ನಿಲ್ಲಿಸಿದರು. ಬೇರೆ ಯಾವುದೇ ಅವರಿಗೆ ವಾಹನ ಇಲ್ಲದೇ ಇದ್ದುದರಿಂದ ಅವರು ಅಲ್ಲಿಯೇ ತೀರಿಕೊಂಡರು, ಇದಕ್ಕೆ ಹೊಣೆಯಾರು? ಅದೇ ರೀತಿ ಮತ್ತೊಂದು ಕೇಸಿನಲ್ಲಿ ಒಬ್ಬ ರೋಗಿಯನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗತಕ್ಕಂಥ ಸಂದರ್ಭದಲ್ಲಿ ಆ ಬಸ್ಸನ್ನು ನಿಲ್ಲಿಸಿದಾಗ ಅವರು ಅಲ್ಲಿಯೇ ಅಸು ನೀಗಿದರು. ಮತ್ತು ಪೇಪರಿನಲ್ಲಿ ಟ್ರೇನಿನಲ್ಲಿ ಬರುತ್ತಿದ್ದ ಒಬ್ಬ ಗರ್ಭವತಿ, ಟ್ರೇನಿನಲ್ಲಿಯೇ ಹೆರಿಗೆ ಹೆರತಕ್ಕಂಥ ಪ್ರಸಂಗ ಬಂತು ಎಂದು ಬಂದಿದೆ. ದೇವರ ದಯೆಯಿಂದ ಅವರಿಗೆ ಯಾವುದೇ ರೀತಿಯ ತೊಂದರೆ ಆಗಲಿಲ್ಲ ಅದೇ ರೀತಿ ಇನ್ನೂ ಅನೇಕ ಕಡೆ ಸಾರ್ವಜನಿಕರಿಗೆ ಇದರಿಂದ ಬಹಳಷ್ಟು ತೊಂದರೆಯಾಗಿದೆ. ಹಾಸನದಲ್ಲಿ ಮಂಡ್ಯದಲ್ಲಿ ತರಕಾರಿ ಮಾರುಕಟ್ಟೆಗೆ ಬರಲಿಲ್ಲ ಇದರಿಂದ ತೊಂದರೆ ನಾಗರೀಕರಿಗೆ ಅಷ್ಟೇ ಅಲ್ಲ, ಯಾರು ರೈತರು ತರಕಾರಿಯನ್ನು ಬೆಳೆಯುತ್ತಾರೋ ಅವರಿಗೂ ಕೂಡ ಇದರಿಂದ ತೊಂದರೆಯಾಗಿದೆ. ಈ ಸಂದರ್ಭದಲ್ಲಿ ಸಾರ್ವಜನಿಕರಿಗೆ ಆದಂಥ ತೊಂದರೆಗಳ ಬಗ್ಗೆ ನಾನು ಬೇಕಾದಷ್ಟು ಮಾಹಿತಿಯನ್ನು ಸಂಗ್ರಹ ಮಾಡಿದ್ದೇನೆ. ಅದನ್ನು ಇಲ್ಲಿ ವಿವರವಾಗಿ ಹೇಳಲಿಕ್ಕೆ ಹೋಗುವುದಿಲ್ಲ ಆದರೆ ಒಂದು ಮಾತನ್ನು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇಂದು ರೈತ ಸಂಘ ಯಾರು ಚಳುವಳಿಯನ್ನು ನಡೆಸುತ್ತಿದ್ದಾರೆ ಅವರು ರಾಜ್ಯದಲ್ಲಿ ಎಲ್ಲಾ ರೈತರನ್ನು ಪ್ರತಿನಿಧಿಸತಕ್ಕ ಸಂಘದವರಲ್ಲ. ಇದರ ಹೊರತಾಗಿ ಬೇರೆ ಬೇರೆ ನಾಲ್ಕೈದು ಸಂಘದವರು ಸರ್ಕಾರದ ಜೊತೆಗೆ ಮಾತುಕತೆ ನಡೆಸಿದ್ದಾರೆ. ಮಾನ್ಯ ಕೈಗಾರಿಕಾ ಮಂತ್ರಿಗಳಾದ ಬೊಮ್ಮಾಯಿಯವರು ೧೬ ಮತ್ತು ೧೭ನೇ ತಾರೀಖು ಜಾಥಾದಲ್ಲಿ ಬಂದಂಥ ರೈತರ ಜೊತೆ ಮಾತನಾಡಿದ್ದಾರೆ. ನಾನೂ ಕೂಡ ಅವರನ್ನು ಭೇಟಿ ಮಾಡಿದ್ದೇನೆ. ೧೦–೧೨ ಸಾವಿರ ಜನ ರೈತರು ಬಂದು ಕಬ್ಬನ್‌ಪಾರ್ಕಿನಲ್ಲಿ ಮೂರು ದಿವಸ ಇದ್ದರು. ಅವರ ಜೊತೆ ಮಾತುಕತೆ ಕೂಡಾ ನಡೆಸಿದ್ದೇವೆ. ಸರ್ಕಾರ ಅಸ್ತಿತ್ವಕ್ಕೆ ಬಂದ ತಕ್ಷಣ ಮಾಡಿದಂಥ ಮೊದಲನೆಯ ಕೆಲಸವೆಂದರೆ ರೈತ ಪ್ರತಿನಿಧಿಗಳನ್ನು ಕರೆಯಿಸಿ ಅವರ ಬೇಡಿಕೆಗಳ ಬಗ್ಗೆ ಚರ್ಚೆ ಮಾಡಿರುವುದು. ಇದರ ಉದ್ದೇಶವೆಂದರೆ ಸಮಾಜದಲ್ಲಿ ರೈತರು ದೇಶದ ಬೆನ್ನೆಲುಬು ಇದನ್ನು ನಾವು ಮರೆಯುವುದಿಲ್ಲ. ಕಷ್ಟಪಟ್ಟು ಬೆಳೆಯತಕ್ಕ ಅವನಿಗೆ ಪ್ರತಿಯೊಂದು ವಸ್ತುವಿಗೂ ಸಾಕಷ್ಟು ಬೆಲೆ ಸಿಕ್ಕಬೇಕು. ಇದನ್ನು ನಾವು ಮೊದಲಿನಿಂದಲೂ ಕೂಡಾ ಪ್ರತಿಪಾದನೆ ಮಾಡುತ್ತಾ ಬಂದಿದ್ದೇವೆ. ಆದರೆ ಅವರು ಬೆಳೆಯತಕ್ಕಂಥ ವಸ್ತುಗಳಿಗೆ ಬೆಲೆಯನ್ನು ನಿಗಧಿ ಮಾಡತಕ್ಕ ಅಧಿಕಾರ ನಮಗಿಲ್ಲ. ಆದ್ದರಿಂದ ಅವರ ಮನಸ್ಸಿಗೆ ತೃಪ್ತಿಯಾಗುವ ರೀತಿಯಲ್ಲಿ ಸರ್ಕಾರದ ನಿರ್ಣಯ ಆಗತಕ್ಕದ್ದು ಇವೊತ್ತು ಸಾಧ್ಯವಿಲ್ಲ. ಅವರು ಹೇಳಿದಂಥ

ಎರಡನೆಯ ಬೇಡಿಕೆ "Abolish summoning and arrest without warrant except for grave offences". ರೈತರ ಮೇಲೆ ಅನಾವಶ್ಯಕವಾಗಿ ಲಾಠಿ ಚಾರ್ಜ್ ಮಾಡುವುದಾಗಲೀ, ಕಳೆದ ಒಂದು ವರ್ಷದಲ್ಲಿ ನಡೆದಂಥ ಒಂದು ಘಟನೆಯೂ ಇಲ್ಲ. ಇದಕ್ಕೆ ಬದಲಾಗಿ ಕೆಲವು ರೈತರು ನಮ್ಮ ಅಧಿಕಾರಿಗಳ ಮೇಲೆ ದೌರ್ಜನ್ಯದಿಂದ ವರ್ತಿಸಿರುವ ಉದಾಹರಣೆಗಳು ಬೇಕಾದಷ್ಟಿವೆ. ತುಮಕೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ಮುಂತಾದ ಕಡೆಗಳಲ್ಲಿ ಆಗಿದೆ. ಅಧಿಕಾರಿಗಳು ಊರಿಗೆ ಹೋದರೆ ಅವರ ಹತ್ತಿರ ದಂಡವನ್ನು ವಸೂಲ್ಮಾಡುವುದು, ರೈತರ ಕೆಲಸವೇ? ಜೀಪು ಹತ್ತುಕೊಂಡು ಹೋದರೆ ಆ ಜೀಪು ನಿಮ್ಮದಲ್ಲ, ನಿಮ್ಮಪ್ಪನದಲ್ಲ, ಬಿಟ್ಟು ಹೋಗಿ ಎಂದು ಹೇಳತಕ್ಕದ್ದು ರೈತರ ಕೆಲಸವೇ? ಈ ರೀತಿಯ ದೌರ್ಜನ್ಯವಾದರೂ ಕೂಡಾ ಕಳೆದ ಒಂದು ವರ್ಷದಲ್ಲಿ ಯಾವುದೇ ಒಂದು ಪ್ರತಿಕಾರ ರೂಪವಾಗಿಯೇ ಆಗಲೀ ಅಥವಾ ಉಗ್ರ ಕ್ರಮವನ್ನಾಗಲೀ ನಮ್ಮ ಸರ್ಕಾರಿ ಅಧಿಕಾರಿಗಳು ಯಾರೇ ಆಗಲೀ ಕೈಗೊಂಡಿಲ್ಲ. ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ, Then, "attachment of movable property of farmers". ಇದರ ಬಗ್ಗೆಯೂ ಕೂಡಾ ನಾವು ಈಗಾಗಲೇ ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ. ಈ ಆಜ್ಞೆಯ ಪ್ರಕಾರ ದೈನಂದಿಕಬಳಕೆ ವಸ್ತುಗಳನ್ನು ನಾವು ಎಂದು ಜಫ್ತಿ ಮಾಡಕೂಡದು ಅಷ್ಟೆ ಅಲ್ಲ ಇನ್ನು ಯಾವುದೇ ಆಗಲೀ ಭತ್ತ ಇರಬಹುದು, ರಾಗಿ ಇರಬಹುದು ಗೋಧಿ ಇರಬಹುದು, ಜೋಳ ಇರಬಹುದು ಮತ್ತೊಂದು ಇರಬಹುದು, ರೈತರಿಗೆ ಒಂದು ವರ್ಷಕ್ಕೆ ಎಷ್ಟು ಅಗತ್ಯವಿದೆಯೋ ಅಷ್ಟು ವಸ್ತುಗಳನ್ನು ಬಿಟ್ಟು ಬಾಕಿಯದ್ದನ್ನು ಜಫ್ತಿ ಮಾಡಬಹುದೆಂದು ಹಿಂದೆ ಇದ್ದಂತಹ ಆಜ್ಞೆಯನ್ನು ತಿದ್ದುಪಡಿ ಮಾಡಿದ್ದೇವೆ. ಯಾವುದೇ ಒಬ್ಬ ಸಾಮಾನ್ಯ ರೈತನ ಸ್ವಾಭಾವ ಎಂದರೆಸಾಲ ತಂದರೆ ಅದನ್ನು ತಾವಾಗಿಯೇ ಕೊಡುತ್ತಾರೆ, ಆದರೆ ಕೆಲವು ರೈತರು ಯಾರು ಸ್ವಲ್ಪ ಮಟ್ಟಿಗೆ ಆರ್ಥಿಕವಾಗಿ ಉತ್ತಮವಾಗಿರುತ್ತಾರೋ ಅವರು ಬ್ಯಾಂಕಿನಿಂದ ಸಾಲ ತೆಗೆದುಕೊಂಡಿರಲಿ ಸರ್ಕಾರದಿಂದ ತೆಗೆದುಕೊಂಡಿರಲಿ ಅಥವಾ ಟ್ರಾಕ್ಟರ್ ಮೇಲೆ ತೆಗೆದುಕೊಂಡಿರಲಿ ಅದನ್ನು ಕೊಡತಕ್ಕಂಥ ಶಕ್ತಿ ಇದ್ದರೂ ಕೂಡಾ ಕೊಡಲಿಕ್ಕೆ ಸಿದ್ಧರಿರುವುದಿಲ್ಲ. ಇದನ್ನು ನಾನು ಬಹಳ ವಿಷಾದದಿಂದ ಹೇಳುತ್ತೇನೆ.

ಅಂಥ ಸಂದರ್ಭಗಳಲ್ಲಿ ಕೆಲವು ಉಗ್ರ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದೇ ಹೋದರೆ ಬೇರೆ ರೈತರಿಗೆ ಸಾಲ ಸಿಗುವುದು ತಪ್ಪುತ್ತೆ. Abolish Fragmentation Act ಎನ್ನುವ ಬೇಡಿಕೆಯನ್ನು ಇಟ್ಟಿದ್ದಾರೆ. ಇದರ ಬಗ್ಗೆ ಇದೇ ಸಭೆಯಲ್ಲಿ ಚರ್ಚೆಯಾಗಿ ಒಂದು ತಿದ್ದುಪಡಿಯನ್ನು ಪಾಸು ಮಾಡಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಆಗಿದೆ. ಬೇರೆ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಮೊದಲು ಕ್ಲಿಷ್ಟವಾಗಿದ್ದಂಥ ರೈತನಿಗೆ ಅನಾನುಕೂಲವಾಗುವಂತೆ ಇದ್ದಂಥ ರೂಲ್ಸ್‌ಗಳನ್ನು ತಿದ್ದುಪಡಿ ದಾಡಿದ್ದೇವೆ. ಒಬ್ಬ ಸಣ್ಣ ಹಿಡುವಳಿದಾರ ತನ್ನ ಜಮೀನು ಮಾರಾಟ ಮಾಡಬೇಕಾಗಿದ್ದರೆ, ಆತನ ಜಮೀನಿನ ಹಾಜುಬಾಜಿನಲ್ಲಿರುವವರನ್ನು ಕೇಳಬೇಕಾಗಿತ್ತು. ಪ್ರತಿ ಸಲವೂ ತಹಶೀಲ್ದಾರ್‌ರವರ ಹತ್ತಿರ ಹೋಗಬೇಕಾಗಿತ್ತು. ಹೀಗಾಗಿ ಆತನಿಗೆ ೨-೩ ವರ್ಷವಾದರೂ ಪರ್ಮಿಷನ್ ಸಿಗುತ್ತಿರಲಿಲ್ಲ. ಇವತ್ತು ಸಣ್ಣ ಹಿಡುವಳಿದಾರ ಜಮೀನು ಮಾರಾಟ ಮಾಡಬೇಕಾದರೆ, ಕನಿಷ್ಟ ಒಂದು ತಿಂಗಳೊಳಗೆ ಅನುಕೂಲವಾಗುವ ಹಾಗೆ ತಿದ್ದುಪಡಿ ಮಾಡಿದ್ದೇವೆ. ಈಗಾಗಲೇ ಈ ಬೇಡಿಕೆಯನ್ನು ಮಾನ್ಯ ಮಾಡಲಾಗಿದೆ. ಇನ್ನು Encroachment by landless and small farmers without penalty. ಈ ಒಂದು ಬೇಡಿಕೆಯನ್ನು ಇಟ್ಟಿದ್ದಾರೆ. ಇದರಲ್ಲಿ ಅವರಿಗೆ ತಪ್ಪು ತಿಳುವಳಿಕೆ ಇರಬಹುದು. ಎನ್‌ಕ್ರೋಚ್‌ಮೆಂಟ್ ಯಾವುದು ? ಅನಾಥರೈಸ್ಡ್ ಕಲ್ಟಿವೇಷನ್ ಯಾವುದು ಎಂಬುದನ್ನು ಅವರು ತಿಳಿದುಕೊಳ್ಳಬೇಕು. ಜಮೀನು ಇಲ್ಲದ ಜನ ಹಾಗೂ ಸಣ್ಣ ಹಿಡುವಳಿದಾರರು ಎನ್‌ಕ್ರೋಚ್‌ಮೆಂಟ್ ಮಾಡುವುದು ಸಾಧ್ಯವಿಲ್ಲ. ಹಾಲಿ ಇರತಕ್ಕ ಜಮೀನಿನ ಪಕ್ಕದಲ್ಲಿ ಸರ್ಕಾರಿ ಭೂಮಿ ಇದ್ದರೆ ಅಂಥ ಜಮೀನನ್ನು ಎನ್‌ಕ್ರೋಚ್‌ಮೆಂಟ್ ಮಾಡುತ್ತಾರೆ. ಇವತ್ತು ಅನಾಥರೈಸ್ ಆಗಿ ಕಲ್ಟಿವೇಷನ್ ಮಾಡುತ್ತಿರುವಂಥ ಹರಿಜನ ಗಿರಿಜನರಿಗೆ ಸಣ್ಣ ಹಿಡುವಳಿದಾರರಿಗೆ ಬಹಳ ಕಡಿಮೆ ದರದಲ್ಲಿ ಜಮೀನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅವರವರ ಜಮೀನನ್ನು ಅವರಿಗೇ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಜಮೀನು ಇಲ್ಲದವರು ಎನ್‌ಕ್ರೋಚ್‌ಮೆಂಟ್ ಮಾಡಿದ್ದರೂ ಅವರಿಗೂ ಜಮೀನು ರೆಗ್ಯೂಲರೈಸ್ ಮಾಡುತ್ತೇವೆ. ಇನ್ನು ಅವರು ಇಟ್ಟಿರುವ ಬೇಡಿಕೆ Remove restriction on movment of foodgrains and levy procurement. ಮಾನ್ಯ ಸದಸ್ಯರುಗಳಿಗೆ ತಿಳಿದಿರುವ ಹಾಗೆ ಇದು ನಮ್ಮ ಕೈಯಲ್ಲಿ ಇಲ್ಲ. ಅಂತರ್ ಜಿಲ್ಲಾ ನಿರ್ಬಂಧವನ್ನು ತೆಗೆಯತಕ್ಕ ಅಧಿಕಾರ ನಮ್ಮ ಕೈಯಲ್ಲಿ ಇದೆ. ಒಂದು ವರ್ಷದಲ್ಲಿ ಸುಮಾರು ೩ ಲಕ್ಷ ಟನ್ ಅಕ್ಕಿಯನ್ನು ಸಂಗ್ರಹಣೆ ಮಾಡಬೇಕು. ೨ ಲಕ್ಷ ಟನ್ ಖಾರೀಫ್ ಸೀಸನ್‌ನಲ್ಲಿ ಇನ್ನೊಂದು ಲಕ್ಷ ಟನ್ ಬೇರೆ ಸೀಸನ್‌ನಲ್ಲಿ ಮಾಡಬೇಕಾಗಿದೆ. ಇದನ್ನು

ಮಾಡದಿದ್ದರೆ ಪಟ್ಟಣದಲ್ಲಿರತಕ್ಕ ನಾಗರೀಕರಿಗೆ, ಪಡಿತರ ವ್ಯವಸ್ಥೆಯಲ್ಲಿ ಬರತಕ್ಕ ಸಾಮಾನ್ಯ ನಾಗರೀಕರಿಗೆ ದವಸ ಒದಗಿಸುವುದಕ್ಕೆ ತೊಂದರೆಯಾಗುತ್ತದೆ. ಕೇಂದ್ರ ಸರ್ಕಾರದವರು ಲೆವಿ ಪ್ರಕ್ಯೂರ್‌ಮೆಂಟ್ ಗುರಿ ಮುಟ್ಟದಿದ್ದರೆ, ನಮಗೆ ಬೇಕಾದಷ್ಟು ಅಕ್ಕಿಯನ್ನಾಗಲೀ ಇತರ ವಸ್ತುಗಳನ್ನಾಗಲೀ ಕೊಡುವುದಿಲ್ಲ. ಹೋದಸಲ ಏನಾಗಿದೆ ಅಂದರೆ ಮಾನ್ಯ ವಿರೋಧಪಕ್ಷದ ನಾಯಕರಿಗೂ ಗೊತ್ತಿರಬಹುದು, ೮೨ನೇ ಇಸವಿಯಲ್ಲಿ ಅವರ ಗುರಿ ೨ ಲಕ್ಷ ಟನ್ ಇತ್ತು. ಅವರು ಸಾಧನೆ ಮಾಡಿದ್ದು ೨೫,೦೦೦ ಟನ್‌ಗೂ ಸ್ವಲ್ಪ ಕಡಿಮೆ. ಅದರಿಂದ ಅಕ್ಕಿ ಬೆಲೆ ಹೆಚ್ಚಾಯಿತು. ಇದರಿಂದ ಪಟ್ಟಣದಲ್ಲಿರತಕ್ಕ ನಾಗರೀಕರಿಗೆ ಅಕ್ಕಿಯನ್ನು ಸಾಕಷ್ಟು ಪ್ರಮಾಣದಲ್ಲಿ ಕೊಡುವುದಕ್ಕಾಗಲಿಲ್ಲ. ಇನ್ನು ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಲೆವಿ ತೆಗೆದುಕೊಳ್ಳಲಾಗುವುದು. ಟ್ರೇಡರ್ಸ್‌ಗಳಿಂದ ಮತ್ತು ಮಿಲ್ ಮಾಲೀಕರಿಂದ ಮಾತ್ರ ಮಾಡುತ್ತಿದ್ದೇವೆ. ರೈತರಿಂದ ಮಾಡುತ್ತಿಲ್ಲ. ಅಕ್ಕಿಯನ್ನು ತೆಗೆದುಕೊಂಡು ಹೋಗುವುದಕ್ಕೆ ಪರವಾನಗಿ ಕೊಟ್ಟರೆ, ರೈತರ ಹೆಸರಿನಲ್ಲಿ ಅನೇಕ ಜನ ವ್ಯಾಪಾರಸ್ಥರು, ಶಿವಮೊಗ್ಗ, ಮಂಡ್ಯ, ಹಾಸನ ಹಾಗೂ ಸೌತ್ ಕೆನಾರಾ ದಿಂದ ಕೇರಳಕ್ಕೆ ಅಕ್ಕಿಯನ್ನು ಸಾಗಿಸುತ್ತಿರುವುದು ಕಂಡು ಬಂದಿದೆ. ಹೆಸರು ರೈತರದ್ದು ಇರುತ್ತೆ. ವ್ಯಾಪಾರಸ್ಥರು ಮತ್ತು ಮಿಲ್ ಮಾಲೀಕರು ಅಕ್ಕಿಯನ್ನು ಸಾಗಿಸುತ್ತಾರೆ. ರೈತರು ತಮ್ಮ ಸ್ವಂತಕ್ಕೆ ಬಳಕೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಒಂದು ಕ್ವಿಂಟಾಲ್ ಇದ್ದುದನ್ನು ೫ ಕ್ವಿಂಟಾಲಿಗೆ ಏರಿಸಿದ್ದೇವೆ. ಇದಕ್ಕೆ ಯಾವುದೇ ರೀತಿಯ ಲೆವಿಯನ್ನು ಕೊಡಬೇಕಾಗಿಲ್ಲ, ಪ್ರತಿ ತಿಂಗಳು ೫ ಕ್ವಿಂಟಾಲ್ ಅಕ್ಕಿಯನ್ನು ಮಾಡಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇನ್ನು ಅವರ ಬೇಡಿಕೆ Price Commission to investigate industrial and agricultural cost production. ಮಾನ್ಯ ಅಧ್ಯಕ್ಷರೇ ಇದನ್ನು ಒಪ್ಪಿಕೊಳ್ಳುವುದರಲ್ಲಿ ನನಗೆ ಯಾವ ಆತಂಕವೂ ಇಲ್ಲ. ಆದರೆ ಇದರಿಂದ ಏನೂ ಉಪಯೋಗವಾಗುತ್ತದೆನ್ನುವುದನ್ನು ಕೂಡ ನಾವು ತಿಳಿದುಕೊಳ್ಳಬೇಕು. ಕೇಂದ್ರ ಸರ್ಕಾರದವರು ಅಗ್ರಿಕಲ್ಚರ್ ಪ್ರೈಸ್ ಕಮಿಷನ್ ಮಾಡುತ್ತಾರೆ. ಪ್ರತಿ ವರ್ಷವೂ ಈ ಒಂದು ಕಮಿಷನ್ ನೇಮಕ ಮಾಡುತ್ತಾರೆ, ಹೆಸರಿಗೆ ಮಾತ್ರ ರಾಜ್ಯ ಸರ್ಕಾರವನ್ನು ಕೂಡ ಕೇಳುತ್ತಾರೆ ಇವರು ಯಾವ ಯಾವ ವಸ್ತುಗಳ ಬೆಲೆ ಯಾವ ರೀತಿ ಇರಬೇಕೆಂಬುದನ್ನು ಗೊತ್ತು ಮಾಡುತ್ತಾರೆ. ನಾನು ಈ ಸಾರಿ ದೆಹಲಿಗೆ ಹೋಗಿದ್ದಾಗ, ರಾವ್ ಬಿರೇಂದ್ರ ಸಿಂಗ್ ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಚರ್ಚೆ ಸಂದರ್ಭದಲ್ಲಿ ಅವರು ಏನು ಹೇಳಿದರು ಅಂದರೆ ನೀವು ಮಾಡಬಹುದು ಏನು ಪ್ರಯೋಜನ ಅದಕ್ಕೆ ಯಾವ ಅಧಿಕಾರವು ಇರುವುದಿಲ್ಲವೆಂದು ಹೇಳಿದರು, ಅದಕ್ಕೆ ರಾಜ್ಯಾಂಗಬದ್ಧವಾದ ಯಾವ ಸ್ಥಾನ ಮಾನವೂ ಇರುವುದಿಲ್ಲ. ರೈತರ ಮನಸ್ಸಿಗೆ ಸಮಾಧಾನವಾಗುವುದಾದರೆ ನಿಮ್ಮ ಮನಸ್ಸಿಗೆ ಸಮಾಧಾನವಾಗುವುದಾದರೆ ಮಾಡಿಕೊಳ್ಳಿ ಎಂದು ಹೇಳಿದರು. ನಾನು ಒಂದು ವಿಚಾರವನ್ನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಪ್ರಧಾನ ಮಂತ್ರಿಗಳಿಗೆ ಈ ವಿಚಾರದಲ್ಲಿ ಒಂದು ಪತ್ರ ಬರೆಯುತ್ತಿದ್ದೇನೆ. ಇನ್ನು ಮುಂದೆ ಪ್ರತಿ ವರ್ಷವೂ ವ್ಯವಸಾಯಕ್ಕೆ ಸಂಬಂಧಪಟ್ಟ ವಸ್ತುಗಳ ದರವನ್ನು ನಿಗದಿ ಮಾಡುವುದಕ್ಕೆ ಮೊದಲು ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆಯನ್ನು ಕರೆದು ಇದರ ಬಗ್ಗೆ ಚರ್ಚೆ ಮಾಡಿ ನಿರ್ಣಯ ಮಾಡಬೇಕು ಎಂದು ಹೇಳುವ ವಿನಂತಿಯನ್ನು ಪತ್ರದ ಮುಖಾಂತರ ಮಾಡುತ್ತಿದ್ದೇನೆ. ಅದೇ ರೀತಿ ಎಕ್ಸ್‌ಪೋರ್ಟ್ ಮಾಡುವ ವಿಚಾರದಲ್ಲಿಯೂ ಚರ್ಚೆ ಮಾಡಬೇಕಾಗಿದೆ. ಇವತ್ತು ಲಾಂಗ್ ಸ್ಟೇಪಲ್ ಕಾಟನ್ ಎಕ್ಸ್‌ಪೋರ್ಟ್ ಇದ್ದಕ್ಕಿದ್ದ ಹಾಗೆ ನಿಲ್ಲಿಸಿದರು. ಇದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳಾದ ಶ್ರೀ ವಿ.ಪಿ. ಸಿಂಗ್ ರವರ ಹತ್ತಿರ ಹೋಗಿ ಚರ್ಚೆ ಮಾಡಲಾಗಿದೆ. ಇದರ ಬಗ್ಗೆ ಪುನಃ ವಿಮರ್ಶೆ ಮಾಡುತ್ತಿದ್ದೇವೆಂದು ಹೇಳಿದರು. ಇವತ್ತು ಚೈನಾದಿಂದ ರೇಷ್ಮೆ ತರಿಸುತ್ತಿರುವುದರಿಂದ ನಮ್ಮಲ್ಲಿ ರೇಷ್ಮೆ ವ್ಯವಸಾಯ ಮಾಡತಕ್ಕ ರೈತರಿಗೆ ಬಹಳ ತೊಂದರೆಯಾಗಿದೆ. ಒಂದು ಕಡೆ ಹೆಚ್ಚು ಬೆಳೆಯಿರಿ ಎಂದು ರೈತರ ಬೆನ್ನು ಚಪ್ಪರಿಸುವುದು. ಇನ್ನೊಂದು ಕಡೆ ಹೊರಗಡೆಯಿಂದ ವಸ್ತುಗಳನ್ನು ತರಿಸುವುದು ಸರಿಯಲ್ಲ. ಇವತ್ತು ಹತ್ತಿ ಬೆಲೆ ೯೦೦ ನಿಂದ ೬೦೦ ರೂಪಾಯಿಗಳಿಗೆ ಇಳಿಯಿತು ಇವತ್ತು ಪೂರಾ ಹತ್ತಿ ಬೆಲೆ ಇಳಿದು ಹೋಗಿರುವುದರಿಂದ ರೈತರಿಗೆ ತೊಂದರೆಯಾಗಿದೆ. ಯಾವ ಕಾರಣಕ್ಕೋಸ್ಕರ ಎಕ್ಸ್‌ಪೋರ್ಟ್ ನಿಲ್ಲಿಸಿದರೋ ನಮಗೆ ಗೊತ್ತಿಲ್ಲ. ಪ್ರಧಾನ ಮಂತ್ರಿಯವರಿಗೆ ವ್ಯವಸಾಯ ವಸ್ತುಗಳ ಬೆಲೆ ನಿಗದಿ ಮಾಡುವಮುನ್ನ ಮತ್ತು ವಸ್ತುಗಳನ್ನು ಆಮದು ಮತ್ತು ರಫ್ತು ಮಾಡುವ ಮುನ್ನ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆದು ಚರ್ಚೆ ಮಾಡಿ ಅವರ ಸಲಹೆಗಳನ್ನು ಪಡೆದು ನಂತರ ಗೊತ್ತುಮಾಡಬೇಕೆಂಬ ವಿಚಾರದಲ್ಲಿ ವಿನಂತಿ ಮಾಡುವ ಪತ್ರ ಬರೆಯುತ್ತಿದ್ದೇನೆ. ಆದಕಾರಣ ಪ್ರೈಸ್ ಕಮೀಷನ್ ಮಾಡಿದ ತಕ್ಷಣ ರೈತರಿಗೆ ಅನುಕೂಲ ವಾಗುತ್ತದೆಂದು ತಿಳಿದುಕೊಂಡಿದ್ದರೆ ಅದು ಸರಿಯಲ್ಲ. ಮಾಡಬೇಕೆಂದರೆ, ಮಾಡುವುದಕ್ಕೆ ಸಿದ್ಧನಿದ್ದೇನೆ. ಇನ್ನು ಅವರು Suspend police officers responsible for barbarism in Chickmagalur District and

to express regret to Chickmagalur farmers. ಮಾನ್ಯ ಅಧ್ಯಕ್ಷರೇ, ಇವರು ಯಾವ ಪಾಪ ಮಾಡಿದ್ದಾರೆಂದು ಸಸ್ಪೆಂಡ್ ಮಾಡಬೇಕು. ಕಳೆದ ನಾಲ್ಕು ದಿವಸಗಳಲ್ಲಿ ಮತ್ತು ಅದಕ್ಕೆ ಮೊದಲು, ಕಳೆದ ಒಂದು ವರ್ಷದಲ್ಲಿ ನಮ್ಮ ಪೋಲೀಸ್ ಖಾತೆಯವರು, ರೆವಿನ್ಯೂ ಖಾತೆಯವರು ಹಾಗೂ ಇತರೆ ಖಾತೆಯ ಸರ್ಕಾರಿ ಸಿಬ್ಬಂದಿ ವರ್ಗದವರು ಯಾವ ಅಪರಾಧವನ್ನು ರೈತರ ವಿಚಾರವಾಗಿ ಮಾಡಿಲ್ಲವೆಂದು ಅತ್ಯಂತ ಅಭಿಮಾನದಿಂದ ಹೇಳಬಯಸುತ್ತೇನೆ.

೧—ಪಿ.ಎಂ.

ಈ ಹಿಂದೆ ದುರ್ಘಟನೆ ಆಯಿತು, ರೈತರ ಮೇಲೆ ಗೋಲಿಬಾರ್ ಆಯಿತು. ಅನೇಕ ದುಷ್ಕೃತ್ಯಗಳು ನಡೆಯಿತು ಮತ್ತು ದೌರ್ಜನ್ಯ ನಡೆಯಿತು. ಆದರೆ ಕಳೆದ ಒಂದು ವರ್ಷದಲ್ಲಿ ಯಾವುದೇ ರೀತಿಯ ದೌರ್ಜನ್ಯ ಆಗಿಲ್ಲ. ಕೇವಲ ಒಂದು ಕಡೆ ಮಾತ್ರ ನರಸಿಂಹರಾಜಪುರದಲ್ಲಿ ನಡೆದಿದೆ ಎಂಬ ಸುದ್ದಿ ಬಂದಿದೆ. ಆದರೆ ನಿಜವಾದ ಸಂಗತಿ ಗೊತ್ತಿಲ್ಲ. ಅದರ ಬಗ್ಗೆ ತನಿಖೆ ಮಾಡಿಸುತ್ತಿದ್ದೇನೆ. ಅದನ್ನು ಬಿಟ್ಟರೆ ಯಾವುದೇ ಸಂದರ್ಭದಲ್ಲಿ ರೈತರ ಮೇಲೆ ಪೋಲೀಸರು ದೌರ್ಜನ್ಯ ಮಾಡಲಿಲ್ಲ. ಇದು ಬಾರ್‌ಬಾರಿಸಂ ಎಂದು ಹೇಳತಕ್ಕದ್ದು.........

ಒಬ್ಬ ಸದಸ್ಯರು.—ಬಳ್ಳಾರಿ ಜೈಲಿನಲ್ಲಿ ಆಗಿದೆ ನೋಡಿ ಸ್ವಾಮಿ.

ಶ್ರೀ ರಾಮಕೃಷ್ಣ ಹೆಗಡೆ.—ತಾವು ಹೇಳಿದ್ದು ಬೇರೆ ವಿಚಾರ ಆಯಿತು. ಬಾರ್‌ಬಾರಿಸಂ ಎಂದು ನೀವು ಹೇಳತಕ್ಕಂಥಾದ್ದು ಸತ್ಯಕ್ಕೆ ದೂರವಾಗಿದ್ದು. ಇದು ಅತಿಶಯೋಕ್ತಿಯಿಂದ ಕೂಡಿದಂಥ ಮಾತು. ಚಿಕ್ಕಮಗಳೂರು ರೈತರಿಗೆ ರಿಗ್ರೇಟನ್ನು ಎಕ್ಸ್‌ಪ್ರೆಸ್ ಮಾಡಬೇಕೆಂದು ಹೇಳಿದರು. ನಾನು ವೈಯಕ್ತಿಕವಾಗಿ ಅಪಾರ ಮನಸ್ಸಿನಲ್ಲಿ ಯಾವುದೇ ರೀತಿಯಲ್ಲಿ ಯಾವುದೇ ಒಬ್ಬ ರೈತನಿಗೆ ಅಂದರೆ ಮನಸ್ಸಿಗೆ ಬೇಜಾರು ಆಗುವಂಥದನ್ನು ಅಧಿಕಾರಿಗಳು ಮಾಡಿದ್ದರೆ ಅದನ್ನು ನಾನು ಒಪ್ಪುವುದಕ್ಕೆ ಸಿದ್ಧನಿಲ್ಲ. ಆದರೆ ಅವರು ಮಾಡಿರತಕ್ಕ ತಪ್ಪು ಆದರೂ ಏನು ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ನಾನು ಈಗಾಗಲೇ ಹೇಳಿದೆ, ಒಂದು ರೈತ ಸಂಘ ಇದೆ, ಆ ರೈತ ಸಂಘದ ಧೋರಣೆಯೇ ಬೇರೆಯಾಗಿದೆ. ಇದನ್ನು ನಾನು ಬಹಳ ಖೇದದಿಂದ ಮತ್ತು ವಿಷಾದದಿಂದ ಈ ಮಾತನ್ನು ಹೇಳುತ್ತಿದ್ದೇನೆ. ರೈತರು ಎಂದರೆ ಬೇರೆ ಬೇರೆ ಸಂಘದಲ್ಲಿರತಕ್ಕವರು ಪ್ರತಿನಿಧಿಸುತ್ತಾರೆ. ಎಲ್ಲಾ ರೈತ ಸಂಘದ ಪ್ರತಿನಿಧಿಗಳೂ ಕೂಡ ಸೇರಿ ಈ ಚಳುವಳಿಗೆ ಕರೆಕೊಟ್ಟಿಲ್ಲ. ಅದರ ಅರ್ಥ ಏನು ? ಎಲ್ಲಾ ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಮಾತುಕತೆ ಆಡೋಣ, ಅದರ ಬಗ್ಗೆ ಚರ್ಚೆ ಮಾಡೋಣ, ಹಂತ ಹಂತವಾಗಿ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಹೇಳಿದ್ದರೂ ಕೂಡ ಈ ರೈತ ಸಂಘದವರು ಕನ್‌ಫ್ರಾಂಟೇಶನ್ ನಿಲುವನ್ನು ತೆಗೆದುಕೊಂಡಿದ್ದಾರೆಂದು ಹೇಳುವುದಕ್ಕೆ ಬಯಸುತ್ತೇನೆ. ಕನ್‌ಫ್ರಾಂಟೇಶನ್ ಜೊತೆ, ಈ ಕನ್‌ಫ್ರಂಟೇಶನ್ ಪರಿಸ್ಥಿತಿಯನ್ನು ಉಂಟು ಮಾಡಿದರೆ ಅದಕ್ಕೆ ನಾವು ಸಿದ್ಧರಾಗಬೇಕಾಗುತ್ತದೆ. ಅದಕ್ಕಾಗಿ ಮೊನ್ನೆ ನಾನು ಕೈ ಮುಗಿದು ಕೇಳಿಕೊಂಡೆ, ಅದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಸರ್ಕಾರದ ಪ್ರಚೋದನೆಯಿಂದ ಇದು ಆಗುತ್ತದೆ ಎಂದು, ಕೈ ಮುಗಿದು ಬೇಡಿಕೊಂಡರೂ ಅದು ಪ್ರಚೋದನೆ ಆಗುತ್ತದೆ ಎಂದು ಹೇಳುವುದಾದರೆ ಇನ್ನು ಯಾವ ರೀತಿ ಹೇಳಬೇಕೋ ನನಗೆ ಅರ್ಥವಾಗುವುದಿಲ್ಲ. ರೈತ ಸಂಘದ ಮುಖಂಡರಿಗೆ ಕೈ ಮುಗಿದು ನಾನು ಪ್ರಾರ್ಥನೆ ಮಾಡಿಕೊಂಡೆ, ಈ ರೀತಿ ಮಾಡಿದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ಅನಾನುಕೂಲ ವಾಗುತ್ತದೆ. ಇದರಿಂದ ರೈತರಿಗೆ ಕಷ್ಟವಾಗುತ್ತದೆ ಮತ್ತು ನಷ್ಟವಾಗುತ್ತದೆ ಎನ್ನತಕ್ಕಂಥ ಮಾತನ್ನು ಪರಿಪರಿಯಾಗಿ ಈ ಮನೆಯ ಮುಖಾಂತರವಾಗಿ ನಾನು ಕೇಳಿಕೊಂಡೆ. ಕೈ ಮುಗಿದು ಪ್ರಾರ್ಥನೆ ಮಾಡಿಕೊಂಡೆ. ಆದರೆ ಅದರ ಪರಿಣಾಮ ಬೀರಲಿಲ್ಲ. ಈ ರೀತಿಯ ಧೋರಣೆ ಇದ್ದರೆ, ನಾನು ವಿನಯದಿಂದ ಹೇಳಬಯಸುತ್ತೇನೆ. ಕನ್‌ಫ್ರಂಟೇಷನ್ ಮಾಡುವುದಾದರೆ ಮಾಡಿಕೊಳ್ಳಲಿ, ಅದನ್ನು ಎದುರಿಸುವುದಕ್ಕೆ ನಾವು ಸಿದ್ಧರಿದ್ದೇವೆ. ಎಷ್ಟೇ ಪ್ರಕೋಪಕ್ಕೆ ಪರಿಸ್ಥಿತಿ ಬಂದಾಗ್ಯೂ ಅಂಥಾ ಸಂದರ್ಭ ಬಂದಾಗ್ಯೂ ನಾನು ಹೇಳುತ್ತೇನೆ. ಕೆಲವು ಕಡೆ ಪ್ರಚೋದನೆ ಎಷ್ಟೇ ದೊಡ್ಡದಾಗಿ ಬಂದರೂ ಕೂಡ ಕಳೆದ ೪ ದಿವಸಗಳಿಂದ ಈ ಚಳುವಳಿಯಲ್ಲಿ ಸುಮಾರು ೩೦ ಸಾವಿರ ಭಾಗವಹಿಸಿರ ಬಹುದು. ೨೦ ಸಾವಿರ ಭಾಗವಹಿಸಿರಬಹುದು, ಆ ರೈತರನ್ನೆಲ್ಲಾ ಸರ್ಕಾರ ಬಂಧಿಸತಕ್ಕ ಪ್ರಸಂಗ ಬಂದರೂ ಕೂಡ ಸರ್ಕಾರದ ಸಿಬ್ಬಂದಿ ವರ್ಗ ಸಂಯಮದಿಂದ, ತಾಳ್ಮೆಯಿಂದ ಅವರ ಜೊತೆಯಲ್ಲಿ ವರ್ತನೆ ಮಾಡಿದೆ ಮತ್ತು ಒಬ್ಬರ ಮೇಲೆ ಗುಂಡನ್ನು ಹಾರಿಸತಕ್ಕಂಥ ಅಥವಾ ಅನಾವಶ್ಯಕವಾಗಿ ಯಾರಿಗೂ ಹೊಡೆಯತಕ್ಕಂಥ ಟಿಯರ್‌ಗ್ಯಾಸನ್ನು ಬಿಡತಕ್ಕಂಥ ಕೆಲಸ ಈ ಸಿಬ್ಬಂದಿ ವರ್ಗ ಮಾಡಿಲ್ಲ.

ಪೋಲೀಸಿನವರು ಇವತ್ತು ಕ್ಷಮೆ ಕೇಳುವುದಕ್ಕೆ ಬದಲಾಗಿ ಅವರಿಗೇ ನಾನು ಅಭಿನಂದಿಸುತ್ತೇನೆ. ಇಲ್ಲದಿದ್ದರೆ ಹಿಂದೆ ಇಂಥಹ ಒಂದು ಬೇರೆ ಯಾವುದೇ ಸಂದರ್ಭದಲ್ಲಿ ಆಗಿದ್ದರೆ ಗೋಲಿಬಾರ್ ಮಾಡತಕ್ಕಂಥ ಪ್ರಸಂಗ ಬರುತ್ತಿತ್ತೊ ಏನೋ ಈಗ ಸಾರ್ವಜನಿಕರು ಟೀಕೆ ಮಾಡುತ್ತಿದ್ದಾರೆ. ಈ ಸರ್ಕಾರ ಏನು ಮಾಡುತ್ತಿದೆ ದಮನ ಮಾಡತಕ್ಕಂಥ ಆಸಕ್ತಿ ಇಲ್ಲವೆ ಎಂದು. ನಾವು ಈ ದಮನ ಶಕ್ತಿಯನ್ನು ರೈತರ ವಿರುದ್ಧ ಉಪಯೋಗ ಮಾಡುವುದಕ್ಕೆ ತಯಾರಿಲ್ಲ. ದಮನ ಮಾಡಬಹುದು ಅದರಿಂದ ರೈತರು ಮತ್ತು ಸರ್ಕಾರಕ್ಕೆ ಖಾಯಂ ಆಗಿ ದ್ವೇಷ ಭಾವನೆ ಉಳಿದುಬಿಡುತ್ತದೆ. ಅದಕ್ಕಾಗಿ ಯಾವುದೇ ಒಂದು ದಮನ ನೀತಿಯನ್ನು ಅನುಸರಿಸಲಿಲ್ಲ. ಆದತ ಇವತ್ತು ಕೂಡ ನಾನು ರೈತರ ಮುಖಂಡರಿಗೆ ಹೇಳುತ್ತೇನೆ. ರೈತರ ಮುಖಂಡರ ಜೊತೆಯಲ್ಲಿ ಪೀರಿಯಾಡಿಕಲ್ ಆಗಿ ಚರ್ಚೆ ನಡೆಯುತ್ತಿದೆ. ಆದರೆ ಇವರು ಏನು ಧೋರಣೆ ತಾಳುತ್ತಿದ್ದರು ಎನ್ನುವುದನ್ನು ನಾನು ಇಲ್ಲಿ ಹೇಳಿದರೆ ಅಪ್ರಸ್ತುತ ಆಗಲಿಕ್ಕಿಲ್ಲ, ಮಾನ್ಯ ಅಧ್ಯಕ್ಷರೇ, ಮೊದಲನೆಯ ಸಲ ನಾವು ಎಲ್ಲಾ ರೈತ ಸಂಘದ ಪ್ರತಿನಿಧಿಗಳನ್ನು ಕರೆದಾಗ ಈ ರೈತ ಸಂಘದ ಪದಾಧಿಕಾರಿಗಳು ಬೇರೆ ಸಂಘದ ಪದಾಧಿಕಾರಿಗಳ ಜೊತೆಯಲ್ಲಿ ಭಾಗವಹಿಸುವುದಿಲ್ಲವೆಂದು ಹೇಳಿದರು. ಕಾರ್ಮಿಕ ವರ್ಗದಲ್ಲಿ ಬೇರೆ ಬೇರೆ ಟ್ರೇಡ್ ಯೂನಿಯನ್‌ಗಳು ಇರುತ್ತವೆ. ನಾವು ಕೆಲವು ಸಂದರ್ಭಗಳಲ್ಲಿ ಒಬ್ಬರನ್ನೇ ಕರೆಯಬೇಕಾಗುತ್ತದೆ. ಯಾವುದಾದರೂ ಒಂದು ಕಾರ್ಖಾನೆಗೆ ಸಂಬಂಧಪಟ್ಟ ಜಗಳ ಇದ್ದರೆ ಅಥವಾ ಯಾವುದೇ ವಾದವಿವಾದಗಳೂ ಇದ್ದರೆ ಆಗ ಸಂಬಂಧಪಟ್ಟ ಎಲ್ಲಾ ವಿಚಾರವನ್ನು ನಾವು ಚರ್ಚೆ ಮಾಡುವಂಥ ಅಗತ್ಯ ಇದ್ದಾಗ ಎಲ್ಲಾ ಕಾರ್ಖಾನೆಗಳ ಸಂಘಗಳ ಪ್ರತಿನಿಧಿಗಳನ್ನು ಕರೆಸುತ್ತೇವೆ. ಅದೇ ರೀತಿ ಎಲ್ಲಾ ರೈತ ಸಂಘಗಳ ಪ್ರತಿನಿಧಿಗಳು ರೈತ ಸಂಘದ ಪದಾಧಿಕಾರಿಗಳನ್ನು ಕರೆಸುತ್ತೇವೆ. ಆದರೆ ಇವರ ಧೋರಣೆ ಏನು ಎನ್ನುವ ಬಗ್ಗೆ ಜನರೇ ಇದನ್ನು ತಿಳಿದುಕೊಳ್ಳಬೇಕು ಬೇರೆ ಸಂಘದ ಪದಾದಿಕಾರಿಗಳಿದ್ದಾಗ ಅವರು ಈ ಸಭೆಗೆ ಬರಲಿಕ್ಕೆ ಆಗುವುದಿಲ್ಲವೆಂದೂ ಹೇಳಿದಾಗ ಅವರನ್ನು ಪ್ರತ್ಯೇಕವಾಗಿ ಕರೆಸಿ ಮಾತನಾಡುತ್ತೇನೆ ಎಂದು ಹೇಳಿದೆ. ರೈತರ ಬಗ್ಗೆ ಮಾತನಾಡುವಾಗ ಸಂಬಂಧಪಟ್ಟ ಮಂತ್ರಿಗಳು ಇರುತ್ತಾರೆ. ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗಳು ಇರುತ್ತಾರೆ, ಯಾವುದೇ ಒಂದು ಇಲಾಖೆಗೆ ಸಂಬಂಧಪಟ್ಟ ಕಾರ್ಯದರ್ಶಿ ಅಥವಾ ರಿಜಿಸ್ಟ್ರಾರ್‌ಗಳು ಇರುತ್ತಾರೆ. ಪ್ರತಿಯೊಂದು ಸಂಬಂಧಪಟ್ಟ ಮಂತ್ರಿಗಳಿಗೆ ಗೊತ್ತಿರುವುದಿಲ್ಲ. ನಾವೇನು ಬೃಹಸ್ಪತಿ ಎಂದು ಹೇಳಿಕೊಳ್ಳುವುದಿಲ್ಲ. ರೈತಸಂಘದ ಪದಾಧಿಕಾರಿಗಳು ಮತ್ತು ಅಧಿಕಾರಿಗಳು ಕೂತಂಥ ಸಂದರ್ಭದಲ್ಲಿ ಅಧಿಕಾರಿಗಳ ಮುಖಕ್ಕೆ ಈ ಸಂಬಳದವರನ್ನು ಹೊರಗಡೆ ಕಳುಹಿಸಿ, ಈ ಸಂಬಳದವರು ಹೊರಗೆ ಹೋಗುವವರಿಗೆ ನಾವು ಮಾತನಾಡಲಿಕ್ಕೆ ಸಾಧ್ಯವಿಲ್ಲ ಎಂದು ಎಷ್ಟೇ ಪ್ರೊವೊಕೇಟಿವ್ ಆಗಿ ಮಾತನಾಡಿದರೂ ಕೂಡ ನಾನು ಅಧಿಕಾರಿಗಳಿಗೆ ನೀವು ಹೊರಗಡೆ ಹೋಗಿ. ನಿಮ್ಮ ಮುಖ ಕಂಡರೆ ಅವರಿಗೆ ಆಗುವುದಿಲ್ಲ ಎಂದು ಹೇಳಿ ಅವರನ್ನೇ ಹೊರಗಡೆ ಕಳುಹಿಸಿದ್ದೆ. ಈ ಮಾತನ್ನು ಹೇಳಿದರೆ ಅವರಿಗೆ ಅಪವಚನ ಆಗಬಹುದು. ಇಂತಹ ಅನೇಕ ಉದಾಹರಣೆಗಳನ್ನು ಹೇಳಬಲ್ಲೆ. ಇವತ್ತು ಸಾರ್ವಜನಿಕರಿಂದ ಟೀಕೆ ಬಂದಿದೆ. ಈ ಸರ್ಕಾರಕ್ಕೆ ಗಂಡಸುತನ ಇಲ್ಲವೇ ಎಂದು, ನಮ್ಮ ಗಂಡಸುತನವನ್ನು ರೈತರ ಮೇಲೆ ತೋರಿಸತಕ್ಕ ಸರ್ಕಾರವಲ್ಲ............

ಶ್ರೀ ಕೆ. ಹೆಚ್. ರಂಗನಾಥ್.—ಹಾಗೆಂದು ಹೇಳಲಿಲ್ಲ. ಸಂಡತನದ ಸರ್ಕಾರ ಎಂದು ಹೇಳಿದ್ದು ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಅದು ಅನ್‌ಪಾರ್ಲಿಮೆಂಟ್ ಪದವಾದ್ದರಿಂದ ಅದನ್ನು ಉಪಯೋಗಿಸಲಿಲ್ಲ. ನಮ್ಮ ಗಂಡಸುತನವನ್ನು ತೋರಿಸುವುದು ಬರೀ ರೈತರ ಮೇಲಲ್ಲ. ಸಾರಾಂಶವಲ್ಲಿ ಇದನ್ನು ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ರೈತರ ಸಂಘದವರ ಮನೋಭಾವವನ್ನು ನೋಡಿದರೆ ಅವರು ಸಹಕಾರದಿಂದ ತಮ್ಮ ಈ ಸಮಸ್ಯೆಗಳನ್ನು ಬಗೆಹರಿಸಬೇಕೆನ್ನುವ ಹಾಗೆ ಕಾಣುತ್ತಿಲ್ಲ. ಸನ್ಮಾನ್ಯ ಅಧ್ಯಕ್ಷರೇ. ಮೊದಲೇ ಹೇಳಿದ ಹಾಗೆ ಇವತ್ತು ಕೂಡ ನಾವು ಅವರೊಡನೆ ಚರ್ಚೆ ಮಾಡಲು ಸಿದ್ಧರಿದ್ದೇವೆ. ನಮ್ಮ ಕೈಯ್ಯಲ್ಲಿ ಎಷ್ಟು ಸಾಧ್ಯವೊ ಅಷ್ಟನ್ನು ಆರ್ಥಿಕ ಇತಿಮಿತಿಯೊಳಗೆ ಎಷ್ಟು ಸಾಧ್ಯವಿದೆಯೋ ಅಷ್ಟನ್ನು ರೈತರ ಬಗ್ಗೆ ಮಾಡುವುವಕ್ಕೆ ಸರ್ಕಾರ ಹಿಂದು ಮುಂದು ನೋಡುವುದಿಲ್ಲ. ಕೆಲವು ನಮ್ಮ ಆರ್ಥಿಕ ಶಕ್ತಿಯಿಂದ ಹೊರತಾಗಿರಬಹುದು. ಇಂತಹ ವಿಚಾರದಲ್ಲಿ ನಾವು ಅವರು ಕೇಳಿದೆನ್ನೆಲ್ಲಾ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಇವತ್ತು ಇಡೀ ರಾಜ್ಯದ ರೈತರ ಮನಸ್ಸಿನಲ್ಲಿ ಒಂದು ನೆಮ್ಮದಿ ವಾತಾವರಣ ಉಂಟಾಗಿತ್ತು ಅದನ್ನೆಲ್ಲಾ ಕಲಕಿದ್ದಾರೆ ನನಗೆ ಗೊತ್ತುಂಟು ೨೦, ೨೫. ೩೦ ಸಾವಿರ ಜನ ರೈತರು ಯಾವ ರೀತಿಯಾಗಿ ಬಂದಿದ್ದಾರೆ ಎಂಬುದು. ಅದು ರೈತರಿಗೆ

ಗೊತ್ತುಂಟು. ರೈತರು, ಇವತ್ತು ನಿಜವಾದ ರೈತರು. ಈಗೇನು ಅವರ ಮೇಲೆ ಪ್ರೆಜರ್ ಬೀಳುತ್ತಿದೆ, ಆ ಒತ್ತಡವನ್ನು ಅವರೇ ವಿರೋಧಿಸತಕ್ಕಂತಹ ಕ್ಷಣ ಇವತ್ತು ಬಂದಿದೆ. ಆ ಒತ್ತಡವನ್ನು ರೈತರೇ ವಿರೋಧ ಮಾಡತಕ್ಕಂತಹ ಕ್ಷಣ ಇವತ್ತು ಬಂದಿದೆ. ಆದುದರಿಂದ ರೈತ ಸಂಘದವರಿಗೆ ಇದರಿಂದ ಬಹಳ ಹಾನಿಯಾಗಬಹುದು. ಮಾನ್ಯ ಅಧ್ಯಕ್ಷರೇ, ಕೊನೆಗೆ ಇಷ್ಟು ಹೇಳುತ್ತೇನೆ. ನಮ್ಮ ಸಹಕಾರದ, ಮಿತ್ರತ್ವದ ಮತ್ತು ಸಹಾನುಭೂತಿಪರವಾದಂಥ ಕೈ ಇವತ್ತು ನಾವು ಮುಂದೆ ಚಾಚಿದ್ದೇವೆ. ಅವರೆಲ್ಲರಿಗೂ ಆ ಕೈ ಬೇಕಾದರೆ ಸ್ವೀಕಾರ ಮಾಡಬಹುದು. ಬೇಡದೇ ಇದ್ದರೆ, ಕನ್‌ಫ್ರಂಟೇಷನ್ ಮಾಡಲೇ ಬೇಕೆಂದು ತೀರ್ಮಾನ ಮಾಡಿದರೆ ಅದನ್ನು ಎದುರಿಸತಕ್ಕಂಥದನು ಸರಕಾರ ತೀರ್ಮಾನ ಮಾಡುತ್ತದೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಾನು ಮತ್ತು ಅನೇಕ...

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಚೋದನೆ ಮಾಡತಕ್ಕಂಥ ಭಾಷಣ ಮಾಡಬಾರದೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷರೇ, ಒಂದು ಕ್ಲಾರಿಫಿಕೇಷನ್ ಮಾನ್ಯ ಮುಖ್ಯಮಂತ್ರಿಗಳು ಗೊಬ್ಬರದ ಮೇಲೆ ೩ ಪರ್ಸೆಂಟ್ ಇದ್ದುದನ್ನು ೨ ಪರ್ಸೆಂಟ್ ಮಾಡಿದ್ದೇವೆಂದು ಹೇಳಿದರು.

ಉಪಾಧ್ಯಕ್ಷರು.—ಅದು ಆಮೇಲೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ. ಈಗ ಈ ನಿಲುವಳಿ ಸೂಚನೆಯನ್ನು ಈ ಸದನದಲ್ಲಿ ಮಂಡಿಸಲಿಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಿಶೇಷವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ದೊಡ್ಡ ಬೋರೇಗೌಡರೇ ತಮ್ಮ ಹಸಿರ ರುಮಾಲು ಎಲ್ಲಿ ಹೋಯಿತು ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನೀವೇ ಇವತ್ತು ಬೇಡ ಎಂದು ಬಿಟ್ಟಿದ್ದೀರೋ, ಅಥವಾ ನೀವು ರೈತ ಸಂಘದವರಲ್ಲ ಎಂದು ಕಸಿದುಕೊಂಡು ಹೋಗಿದ್ದಾರೋ.

ಶ್ರೀ ದೊಡ್ಡಬೋರೇಗೌಡ.—ನಿಜವಾದ ರೈತ ಎಂದರೆ ನಾನೇ, ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥವನು. ಇವತ್ತು ಶ್ರೀಮಾನ್ ಶ್ರೀಕಂಠಯ್ಯನವರು, ಮಾನ್ಯ ಚೌಡಯ್ಯನವರು ಅಥವಾ ಮಾನ್ಯ ಮಂಚೇಗೌಡರು ರೈತರಲ್ಲ. ಇದನ್ನು ನಾನು ನಿಜವಾಗಿ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ದೊಡ್ಡಬೋರೇಗೌಡರನ್ನು ನಾವು ರೈತರಲ್ಲ ಎಂದು ಹೇಳಲಿಲ್ಲ. ಹಸಿರು ಶಾಲು ಟವೆಲ್ ಎಲ್ಲಿ ಹೋಯಿತು ಎಂದು ಕೇಳಿದೆವು.

ಶ್ರೀ ಎಂ, ವೀರಪ್ಪ ಮೊಯಿಲಿ.—ಮಾನ್ಯ ದೊಡ್ಡಬೋರಗೌಡರು ಇಲ್ಲಿ ಮಾತನಾಡುವ ಬದಲು ರೈತರ ಮಧ್ಯೆ ಹೋಗಿ ಚರ್ಚೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ಕಾಣುತ್ತದೆ. ಯಾರು ನಿಜವಾದ ರೈತರು ಯಾರು ನಿಜವಾದ ರೈತರಲ್ಲ ಎಂದು ಗೊತ್ತಾಗುತ್ತಿತ್ತು. ಬಹುಶಃ ಅದನ್ನು ಮಾಡಲಿಲ್ಲ. ಇಲ್ಲಿ ಏಕೆ ಮಾತನಾಡುತ್ತೀರಿ.

ಉಪಾಧ್ಯಕ್ಷರು.—ಶ್ರೀಮಾನ್ ಮೊಯಿಲಿಯವರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ತಾವು, ನಾನು ಮತ್ತು ನನ್ನ ಸ್ನೇಹಿತರು ನಿಲುವಳಿ ಸೂಚನೆಯನ್ನು ಮುಂದೆ ತಂದಾಗ ಅದರ ಮಂಡನೆಗೆ ಅವಕಾಶ ಕೊಟ್ಟದ್ದಕ್ಕಾಗಿ ವಿಶೇಷವಾದಂಥ ಅಭಿನಂದನೆಗಳನ್ನು ತಮಗೆ ಸಲ್ಲಿಸುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಇದು ನಿಲುವಳಿ ಸೂಚನೆ ಅಲ್ಲ, ಪ್ರಸ್ತಾವನೆ,

ಶ್ರೀ ಎಂ. ವೀರಪ್ಪಮೊಯಿಲಿ.—ಈಗ ಈ ಪ್ರಸ್ತಾವನೆ ಈ ಸದನದ ಮುಂದೆ ಬಂದಕೂಡಲೇ ಮಾನ್ಯ ಮುಖ್ಯ ಮಂತ್ರಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಹೇಳಿಕೆಯ ವಿವರ ಕೊಡುವಾಗ ನಮ್ಮ ಸದಸ್ಯರಾದಂತಹ ಶ್ರೀ ಭೀಮಣ್ಣ ಖಂಡ್ರೆಯವರು ಹೇಳಿದ ಪ್ರಕಾರ, ಈಗಿನ ಸರಕಾರ ರೈತರ ಪರವಾಗಿ ಏನು ಸಾಧನೆ ಅಥವಾ ಯಾವ ವಿನಾಯಿತಿಗಳನ್ನು ಕೊಟ್ಟಿದೆ ಎಂದು ವಿವರ ಕೊಟ್ಟಂತಹ ಅನೇಕ ಸಂದರ್ಭಗಳಲ್ಲಿ ಹಿಂದಿನ ಸರಕಾರ ಕೊಟ್ಟಂತಹ ಸವಲತ್ತನ್ನು ಸೇರಿಸಿ ಕೊಟ್ಟಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಏನೇನು ಸೇರಿಸಿದ್ದೀನಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಫರ್ಟಿಲೈಸರ್ಸ್ ಬಂದಿದೆ, ಪೈಲಟ್ ಕ್ರಾಪ್ ಇನ್‌ಷ್ಯೂರೆನ್ಸ್ ಸ್ಕೀಮ್ ಬಂದಿದೆ, ಕಾಂಟೂರ್ ಬಂಡಿಂಗ್ ಡ್ಯೂಸ್ ಬಂದಿದೆ, Please check-up your records. Reduction of Sales tax from 3% to 2% ಇದೆಲ್ಲಾ ಹಿಂದಿನ ಸರಕಾರ ಮಾಡಿದ್ದು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಅನೌನ್ಸ್ ಮಾಡಿದ್ದೀನಿ ಅದನ್ನು.

ಶ್ರೀ ಎಂ. ವೀರಪ್ಪಮೊಯಿಲಿ.—ನೀವು ಅನೌನ್ಸ್ ಮಾಡಿರಬಹುದು. ಇದು ಹೊಸದೇನಲ್ಲ. ಆದರೆ ಅದನ್ನು ಹಿಂದಿನ ಸರಕಾರ ಮಾಡಿತ್ತು. You have done it, but we have also done it, Please check-up ಇಂಟರೆಸ್ಟ್ ಸಬ್ಸಿಡಿ ಹಿಂದೆ ಕೂಡಾ ನಾವು ಮಾಡಿದ್ದೆವು. ಅದನ್ನು ತಾವು ಮುಂದುವರಿಸಿರಬಹುದು. Increase in subsidy to Sugarcane growers ಗೆ ನಮ್ಮ ಸಂದರ್ಭದಲ್ಲಿ ಎಂಟು ರೂಪಾಯಿ ಕೊಟ್ಟಿದ್ದೇವು. ನೀವು ಇನ್ನೊಂದು ಮೂರು ನಾಲ್ಕು ರೂಪಾಯಿ ಜಾಸ್ತಿ ಕೊಟ್ಟಿದ್ದೀರಿ. ಅದೇ ಪ್ರಕಾರ write off arrears of variety of loans ಪ್ರತಿ ಸರಕಾರ ಕೂಡಾ ಬರುವಾಗ ಕೆಲವು ರಿಯಾಯತಿಗಳನ್ನು ಕೊಡುವಂತೆ ತಾವೂ ಕೊಟ್ಟಿದ್ದೀರಿ. ಮಾನ್ಯ ಅಧ್ಯಕ್ಷರೇ. ಈಗ ಇವರು ಅಧಿಕಾರಕ್ಕೆ ಬರುವ ಮೊದಲು ಸ್ವಲ್ಪ ದೃಷ್ಟಿಹರಿಸುವುದು ಒಳ್ಳೆಯದು. ರೈತರು ಯಾವ ಬೇಡಿಕೆಯನ್ನು ಮುಂದಿಟ್ಟಿದ್ದಾರೆ, ಅದರಲ್ಲಿ ಯಾವ ಬೇಡಿಕೆಯನ್ನು ರಾಜ್ಯ ಸರಕಾರ ಅಥವಾ ಕೇಂದ್ರ ಸರಕಾರ ಮಾಡಬೇಕು ಎನ್ನುವ ಪ್ರಶ್ನೆ ಪ್ರತ್ಯೇಕ. ಆದರೆ ತಾವು ಈ ಸರಕಾರ ರಚನೆ ಆಗುವ ಮೊದಲು ಈ ಕರ್ನಾಟಕ ರಾಜ್ಯದಲ್ಲಿ ಕೆಲವು ಪಾಪ್ಯುಲರ್ ಮೂವ್‌ಮೆಂಟ್ಸ್ ಇದ್ದವು. ಅದು ತಾತ್ಕಾಲಿಕವಾಗಿ ರಾಜಕೀಯ ಲಾಭ ಮಾಡಿಕೊಳ್ಳಲಿಕ್ಕೆ ತಾವು ಎಷ್ಟು ಉಪಯೋಗ ಮಾಡಿಕೊಳ್ಳಬೇಕೋ ಅದನ್ನು ತಾವು ಮಾಡಿದಿರಿ ಅದು ರೈತ ಸಂಘ ಇರಬಹುದು. ಕನ್ನಡ ಚಳುವಳಿ ವಿಚಾರ ಇರಬಹುದು. ನಾವು ರಾಜಕೀಯದಲ್ಲಿ ಇಲ್ಲವೆಂದು ಹೇಳಿ, ಕರ್ನಾಟಕ ರಾಜ್ಯ ರೈತ ಸಂಘದವರು, ಯಾರು ಇವತ್ತು ಅಧ್ಯಕ್ಷರಿದ್ದಾರೆ, ಪ್ರಧಾನ ಕಾರ್ಯದರ್ಶಿ ಇದ್ದಾರೆ, ಅವರೆಲ್ಲಾ ಡಿಸೆಂಬರ್ ೨೩ನೇ ತಾರೀಖಿನ ದಿವಸ್ಥ ಚುನಾವಣಾ ಕಣಕ್ಕೆ ಇಳಿದರು. ಜನತಾ ಪಕ್ಷದ ಪರವಾಗಿ, ಕಾಂಗ್ರೆಸ್ ಪಕ್ಷಕ್ಕೆ ವಿರೋಧವಾಗಿ ಚುನಾವಣಾ ಕೆಲಸ ಮಾಡಬೇಕೆಂದು ಅವರು ನಿರ್ಧಾರ ಮಾಡಿದರು. ಚುನಾವಣೆಯಲ್ಲಿ ತಮಗೂ ಕೂಡಾ ಸಹಾಯ ಮಾಡಿದರು. ಅದೇ ಶಕ್ತಿಗೆ ತಾವು ಏನು ಹೇಳುತ್ತಿದ್ದೀರಿ. ತಮಗೆ ತಾತ್ಕಾಲಿಕವಾಗಿ ರಾಜಕೀಯ ಲಾಭ ಆಗಬೇಕೆಂಬ ಉದ್ದೇಶವನ್ನಿಟ್ಟುಕೊಂಡು. ಅದು ದೇಶ ಹೋಗಲೀ, ರಾಜ್ಯ ಹೋಗಲೀ, ಆದರೆ ಅಧಿಕಾರಕ್ಕೆ ಬಂದರೆ ಸಾಕು ಎಂಬ ಉದ್ದೇಶವನ್ನು ತಾವು ಇಟ್ಟುಕೊಂಡು......

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ ಮಾನ್ಯ ಅಧ್ಯಕ್ಷರೇ......

ಶ್ರೀ ಎಂ.ವೀರಪ್ಪ ಮೊಯಿಲಿ.—ನಾನು ಈಲ್ಡ್ ಆಗುವುದಿಲ್ಲ. ಮುಖ್ಯಮಂತ್ರಿಯವರು ಮಾತನಾಡುವಾಗ ನಾನು ಸ್ವಲ್ಪವೂ ಕೂಡಾ ಅವರಿಗೆ ಅಂತಕ ಮಾಡಲಿಲ್ಲ, ತೊಂದರೆ ಮಾಡಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ಅವರು ಮತ ಹಾಕಬಾರದು ಹೋಗಬೇಡಿ ಎಂದು ಹೇಳಿದರು.

ಶ್ರೀ ಎಂ.ವೀರಪ್ಪ ಮೊಯಿಲಿ.—ಮಾನ್ಯ ಚೌಡಯ್ಯನವರು ಇಲ್ಲಿದ್ದಾರೆ, ಮಾನ್ಯ ಶ್ರೀಕಂಠಯ್ಯನವರು ಇಲ್ಲಿದ್ದಾರೆ. ಎಲ್ಲಾ ಇದ್ದಾರೆ. ೨೩ ಡಿಸೆಂಬರ್ ೧೯೮೩ ಎಲ್ಲಾ ಕಡೆ ಕೂಡಾ ಕಾಂಗ್ರೆಸ್ ಐ ಪಕ್ಷಕ್ಕೆ ವಿರೋಧ ಮಾಡಿ, ಜನತಾ ಪಕ್ಷಕ್ಕೆ ಬೆಂಬಲ ಕೊಡಿ, ಜನತಾ–ಕ್ರಾಂತಿರಂಗಕ್ಕೆ ಬೆಂಬಲ ಕೊಡಿ ಎಂದು ಹೇಳಿದರು.

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ತಾಳ್ಮೆ ಇರಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮಹೇಶ್ವರಪ್ಪನವರು ಪ್ರಚೋದನೆಗೆ ಅವಕಾಶ ಕೊಡಬಾರದು ಎಂದು ಹೇಳಿದರು. ಪ್ರಚೋದನೆ ನೀವೂ ಮಾಡಬೇಡಿ. ಈಗ ಏನು ಇವರ ಧೋರಣೆಗಳು. ರೈತರು ಯಾವ ಚಾರ್ಟರ್ ಆಫ್ ಡಿಮ್ಯಾಂಡ್ಸ್ ಹೇಳುತ್ತಾರೆ, ಆ ಡಿಮ್ಯಾಂಡ್ಸನ್ನು ವಿರೋಧ ಪಕ್ಷದ ಮುಖೇನ ನಮ್ಮ ಸರಕಾರ ಇರುವಾಗ ತಂದರು. ಹಿಂದಿನ ಕಡತಗಳ ಕಡೆಗೆ ತಾವು ಸ್ವಲ್ಪ ದೃಷ್ಟಿಹರಿಸಬೇಕು. ಅಧಿಕಾರದ ಮಂಪು ಬಂದಿದೆಯಲ್ಲಾ ಆ ಅಧಿಕಾರದ ಮಂಪಿನಿಂದ ತಾವು ಕುರುಡರಾಗಬೇಡಿ. ಮಂಕು ಬಂದು ಬಿಟ್ಟದೆ ನಿಮಗೆ. ಆದುದರಿಂದ ಇವತ್ತು ಹಿಂದೆ ಯಾವ ಚಾರ್ಟರ್ ಆಫ್ ಡಿಮ್ಯಾಂಡ್ಸನ್ನು ಮುಂದಿಟ್ಟರು ಅದಕ್ಕೆ ತಾವು ಸಂಪೂರ್ಣ ಬೆಂಬಲ ಕೊಟ್ಟಿರಿ. ಯಾಕೆ ಎಂದು ಹೇಳಿದರೆ, ನಿಮಗೆ ದೇಶ ಬೇಕಾಗಿರಲಿಲ್ಲ, ರಾಜ್ಯದ ಜನತೆಯ ಹಿತಾಸಕ್ತಿ ಬೇಕಾಗಿರಲಿಲ್ಲ ಜನರ ರಕ್ಷಣೆ ಬೇಕಾಗಿರಲಿಲ್ಲ ಅಧಿಕಾರ ಪೀಠವನ್ನು ಯಾವುದೇ ರೀತಿಯಲ್ಲಿ ನೀವು ಆಕ್ರಮಿಸ ಬೇಕಾಗಿತ್ತು ಅದಕ್ಕೆ ಯಾವ ಅಸ್ತ್ರ ಕೂಡಾ ಆಗಬಹುದಾಗಿತ್ತು. ರಾಷ್ಟ್ರವಿರೋಧಿ ಅಸ್ತ್ರ. ರಾಜ್ಯವಿರೋಧಿ ಅಸ್ತ್ರ ಕೂಡಾ ಆಗಬಹುದು. Any weapon was sufficient for you for your good as well as on your attack on the last Goveinmentwas concerned ಆದುದರಿಂದ ಅದರ ಬಗ್ಗೆ ಬೆಂಬಲ ಕೊಟ್ಟಿರಿ. ಮಾನ್ಯ ಬೊಮ್ಮಾಯಿ ಯವರು ಈಗ ಸದನದಲ್ಲಿ ಇಲ್ಲ. ಅವರೂ ಕೂಡ ಹಾರಿ ಹಾರಿ ಮಾತನಾಡುತ್ತಿದ್ದರು. ಈಗ ಕುಳಿತುಕೊಂಡು ಮಾತನಾಡುತ್ತಿದ್ದಾರೆ ಅಷ್ಟೇ ವ್ಯತ್ಯಾಸ. ಆಗ ಎದ್ದೆದ್ದು ಕುಣಿಯುತ್ತಿದ್ದರು. ಈಗ ಅಧಿಕಾರ ಪೀಠದಲ್ಲಿ ಕುಳಿತುಕೊಂಡಿದ್ದಾರೆ ಅಷ್ಟೆ. ಈಗ ಕುಳಿತುಕೊಂಡೇ ಮಾತನಾಡುತ್ತಿದ್ದಾರೆ ಅಷ್ಟೇ ವ್ಯತ್ಯಾಸ. ಶ್ರೀಮಾನ್ ಬೊಮ್ಮಾಯಿ ಯವರ ವರದಿ ಕೂಡ ಇಲ್ಲೇ ಇದೆ. ಹಿಂದೆ ಇದ್ದಂತಹ ಸರ್ಕಾರವು ಮಾನ್ಯ ಶ್ರೀ ಬೊಮ್ಮಾಯಿ ಯವರೇ ಇದರ ಬಗ್ಗೆ ವಿಚಾರಣೆ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಡಿ ಎಂಬುದಾಗಿ ಹೇಳಿತ್ತು. ಅದರಂತೆ ಅವರೊಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದರು. ಅದರಲ್ಲೂ ಕೂಡ ಕೆಲವನ್ನು ಜಾರಿಗೆ ಕೊಡಲಾಗಿದೆ. ಅದೇ ಪ್ರಕಾರವಾಗಿ ಶ್ರೀಮಾನ್ ಬಂಗಾರಪ್ಪನವರ ಅಧ್ಯಕ್ಷತೆಯಲ್ಲಿ ಒಂದು ರಚನೆ ಮಾಡಿದಂತಹ ಸಮಿತಿಯು ಕೂಡ ಸರ್ಕಾರಕ್ಕೆ ಕೊಟ್ಟಂತಹ ವರದಿಯನ್ನೂ ಕೂಡ ಜಾರಿಗೆ ಕೊಟ್ಟಿದ್ದೇವೆ. ಇದಾದನಂತರ ಬಂದಂತಹ ಚುನಾವಣೆಯಲ್ಲಿ ಮಾತನಾಡುವಾಗ ಜನಗಳಿಗೆ ಏನು ಹೇಳಿದ್ದೀರಿ? ರೈತರಿಗೆ ಏನು ಹೇಳಿದ್ದೀರಿ ಎಂಬುದು ಗೊತ್ತಿದೆ. ನಿಮ್ಮ ಚುನಾವಣೆಯ ಮ್ಯಾನಿಫೆಸ್ಟೋ ಕೂಡ ಇಲ್ಲಿದೆ. ಮೊನ್ನೆ ರೈತರಿಗೆ ನ್ಯಾಯಬೆಲೆ ಮತ್ತು ಇತರೆ ಸೌಕರ್ಯಗಳನ್ನು ಒದಗಿಸಿಕೊಡುವ ಬಗ್ಗೆ ಹೇಳಿದ್ದೀರಿ. ಯಾವುದನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಗೊತ್ತಿದ್ದರೂ ಕೂಡ ಹೇಗೆ ತಮ್ಮ ಚಾಣಾಕ್ಷತನವನ್ನು ಈಗ ತೋರಿಸುತ್ತಿದ್ದೀರೋ, ಇದು ಏಕೆ ಆ ಸಂದರ್ಭದಲ್ಲಿ ಬಹಳ ವಿಶಾಲತೆ ಆಗಿತ್ತು? ಆಕಾಶದ ಕೆಳಗಡೆ ಏನು ಹೇಳಿದರೂ ಕೂಡ ಸರಿ. ಆವಾಗ ಇದರ ಯಾವ ವಿಮರ್ಶೆಯೂ ಕೂಡ ಹೋಗಲಿಲ್ಲ, ಈ ರೈತರ ಬಗ್ಗೆ. ಏಕೆಂದರೆ ಆವಾಗ ಓಟು ಬೇಕಿತ್ತು. ಆಗ ನಿಮಗೆ ಚೀಫ್ ಪಾಪ್ಯುಲಾರಿಟಿ ಬೇಕಾಗಿತ್ತು. ಅಂತಹ ಒಂದು ಹಿಪ್ಪೋಕ್ರಸಿಯನ್ನು ಕರ್ನಾಟಕ ರಾಜ್ಯದ ಜನತೆ ನೋಡ ಬೇಕು. ಅದು ತಮ್ಮ ಮೇಲೆ ತಿರುಗುಬಾಣವಾಗಿದೆ. ಯಾವ ಉದ್ದೇಶಗಳನ್ನು, ಹಾಗೂ ಯಾವ ಆಕಾಂಕ್ಷೆಗಳನ್ನು ನೀವು ಹೇಳಿಕೊಟ್ಟಿದ್ದೀರೋ ಅದೇ ಅಭ್ಯಾಸದಿಂದ, ಇಂದು ಅದೇ ಜ್ವಾಲಾಮುಖಿ ಯಾಗಿ ನಿಮ್ಮನ್ನು ನಾಶಗೊಳಿಸುತ್ತದೆ. ಏಕೆಂದರೆ ಆವಾಗ ನೀವು ಅಧಿಕಾರದಲ್ಲಿ ಇರಲಿಲ್ಲ. ಆವತ್ತು ಅವರ ಒಂದು ಸಹಕಾರದಿಂದ ನೀವು ಇವತ್ತು ಅಧಿಕಾರಕ್ಕೆ ಬಂದಿದ್ದೀರಿ. ಆ ರೀತಿ ಅಧಿಕಾರಕ್ಕೆ ಬಂದ ಮೇಲೆ ಜವಾಬ್ದಾರಿ ಮಾತುಗಳನ್ನು ಹೇಳತಕ್ಕಂತಹದ್ದು, ಯಾವ ಒಂದು ಪ್ರವೃತ್ತಿ ಇದೆ ಅದನ್ನು ನೀವು ಪರಿಪಾಲಿಸಿಲ್ಲ. ಅಂದು ನೀವು ಬೆಂಕಿಯನ್ನು ನಮ್ಮನ್ನು ಸುಡಲಿ ಎಂದು ಹಚ್ಚಿಬಿಟ್ಟಿರಲ್ಲಾ, ಅದೇ ಬೆಂಕಿ ಇವತ್ತು ನಿಮ್ಮನ್ನು ಸುಡುತ್ತಿದೆ. ಈ ಬೆಂಕಿಯ ವಿಚಾರದಲ್ಲಿ ಆ ಸಂದರ್ಭದಲ್ಲಿ ಏನು ಹೇಳಿಕೆ ಕೊಟ್ಟಿದ್ದಾರೆಂಬುದೂ ತಮಗೂ ಗೊತ್ತಿದೆ ಮಾನ್ಯ ಅಧ್ಯಕ್ಷರೆ, ೧೯೮೦ನೇ ಇಸವಿಯಲ್ಲಿ ನಾವು ಅಧಿ ಕಾರಕ್ಕೆ ಬಂದ ಮೇಲೆ ಪ್ರಾರಂಭವಾಯಿತು. ಅದು ಎರಡು ವರ್ಷಗಳ ಕಾಲ ೧೯೮೧ ಹಾಗೂ ೧೯೮೨ರಲ್ಲಿ ಆದಂತಹದ್ದು ನಿಮಗೂ ಗೊತ್ತಿದೆ. ಶ್ರೀಮಾನ್ ಬೊಮ್ಮಾಯಿಯವರು ಈಗ ಸದನದಲ್ಲಿಲ್ಲ. ಅದು ಬೆಂಕಿಯಾಗಿ ಉರಿಯುತ್ತಿದ್ದರೂ ಕೂಡ ಅನೇಕ ಬೇಡಿಕೆಗಳನ್ನು ಸಾಧನೆ ಮಾಡುವಾಗ ನಾನೇ ಸ್ವತಃ ನನ್ನ ಜೊತೆಯಲ್ಲಿ ಅಡಿಷನಲ್ ಚೀಫ್ ಸೆಕ್ರೆಟರಿ ಒಬ್ಬರು ಬಂದಿದ್ದರು, ಶಿವಮೊಗ್ಗದಲ್ಲಿ ರಸ್ತೆ ರೋಕೋ ಚಳುವಳಿ ನಡೆಯುತ್ತಿದ್ದಾಗ ನಮ್ಮನ್ನು ಯಾರೂ ಆ ಕಡೆ ಹೋಗಬಾರದು ಅಂತ ಹೇಳುತ್ತಿದ್ದರೂ ಕೂಡ ಅಂಜದೆ ಅವರ ಮಧ್ಯದಲ್ಲಿ ಹೋಗಿ ಅವರ ಬೇಡಿಕೆಗಳನ್ನು ವಿಚಾರಿಸಿದ್ದೆ. ನಾನೂ ಆ ಸಂದರ್ಭ ದಲ್ಲಿ ಹಣಕಾಸಿನ ಮಂತ್ರಿಯಾಗಿದ್ದೆ. ಅಂದಿನ ಮುಖ್ಯಮಂತ್ರಿಗಳು ನನ್ನನ್ನು ಶಿವಮೊಗ್ಗಕ್ಕೆ ಕಳುಹಿ

ಸಿದ್ದರು. ಅಂದು ನಾನು ಅವರ ಜೊತೆಯಲ್ಲಿ ಬೆಳಿಗ್ಗೆ ೫ ಗಂಟೆತನಕ ಮಾತುಕತೆಯನ್ನು ಮಾಡಿದೆವು. ಕರ್ನಾಟಕ ರಾಜ್ಯದಲ್ಲಿ ಒಂದು ದೊಡ್ಡ ಚಳುವಳಿ ಮಾಡಬೇಕು ಎಂದು ಇದ್ದಂತಹವರು ನಾವು ಅವರ ಜೊತೆಯಲ್ಲಿ ಮಾತುಕತೆ ಮಾಡಿದ ನಂತರ, ಹಾಗೆ ಮಾಡದೆ ಅದನ್ನು ನಿಲ್ಲಿಸಿಬಿಟ್ಟರು. ಅದು ಒಂದು ಇತಿಹಾಸ. ಇದನ್ನು ಯಾರೂ ಮರೆಯಬಾರದು. ಅವರ ಜೊತೆಯಲ್ಲಿ ಮಾತನಾಡಿಕೊಂಡು, ಚರ್ಚೆ ಮಾಡಿಕೊಂಡು ರೈತರ ಮನೆ ಬಾಗಿಲಿನಲ್ಲೇ ಅನೇಕ ಸಮಸ್ಯೆಗಳನ್ನು ಪರಿಹಾರ ಮಾಡಿದ್ದೆವು. ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವುದು ಸಾಧ್ಯವಿಲ್ಲವೆಂಬುದನ್ನು ಅವರಿಗೆ ಮನದಟ್ಟಾಗುವಂತೆ ತಿಳಿಸಿದ್ದೆವು. ಅನಂತರ ಬೆಳಗಾಂ ಮತ್ತು ಧಾರವಾಡ ಕಡೆಯಿಂದ ಆ ಚಳುವಳಿ ಬಂದಾಗ ಅಲ್ಲಿಗೂ ಕೂಡ ನನ್ನ ಜೊತೆಯಲ್ಲಿ ಅಡಿಷನಲ್ ಚೀಫ್ ಸೆಕ್ರೆಟರಿ ಬಂದಿದ್ದರು. ಅವರು ಎಲ್ಲಿ ಧರಣಿಯನ್ನು ಮಾಡುತ್ತಿದ್ದರೋ ಎಲ್ಲಿ ಸತ್ಯಾಗ್ರಹವನ್ನು ಮಾಡುತ್ತಿದ್ದರೋ ಅಲ್ಲಿಗೇ ಅಧಿಕಾರಿಗಳ ಜೊತೆಯಲ್ಲಿ ಹೋಗಿ ಅವರ ಜೊತೆಯಲ್ಲೇ ಕುಳಿತು ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ, ಮಾತುಕತೆ ಮಾಡಿ ನಾವು ಸಮಸ್ಯೆಗಳನ್ನು ಇತ್ಯರ್ಥ ಮಾಡಿದ್ದು ಇದೆ. ಆ ರೀತಿ ಎರಡು ವರ್ಷಗಳ ಕಾಲ ನಡೆಯಿತು. ಮತ್ತೆ ರೈತರ ಮುಖಂಡರುಗಳನ್ನು ಇಲ್ಲಿಗೇ ಕರೆಸಿ, ವಿರೋಧಪಕ್ಷದವರನ್ನೂ ಅಲ್ಲಿಗೇ ಕರೆಸಿ ಒಂದೇ ಕಡೆ ಕುಳಿತುಕೊಂಡು ಮಾತುಕತೆ ನಡೆಸಿ ಸಮಸ್ಯೆಗಳಿಗೆ ಪರಿಹಾರ ಹುಡುಕಿ ೨ ವರ್ಷಗಳ ಕಾಲ ಶಾಂತಿಯಿಂದ, ಸಮಾನತೆಯಿಂದ ವಿಚಾರ ಮಾಡಿದ್ದು ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಚುನಾವಣೆಯು ಹತ್ತಿರ ಬಂದಾಗ?

ಶ್ರೀ ಎಂ. ವೀರಪ್ಪಮೊಯಿಲಿ.—ಆವಾಗ ಚುನಾವಣೆಯ ಸಂದರ್ಭ ಇರಲಿಲ್ಲ. ಚುನಾವಣೆಯು ಹತ್ತಿರ ಬಂದಾಗ ಏನಾಯಿತು ಎಂಬುದಕ್ಕೆ ನಂತರ ಬರುತ್ತೇನೆ. ೧ ಲಕ್ಷ ಜನರು ರೈತರು ಬೆಂಗಳೂರಿಗೆ ಬಂದರು. ಆದರೆ ಅವರು ಚಳುವಳಿ ಮಾಡಲಿಲ್ಲ. ಅವರ ಜೊತೆಯಲ್ಲಿ ನಾವೂ ಕೂಡ ಸಂಯಮದಿಂದ ಚರ್ಚೆ ಮಾಡಿದೆವು. ನಂತರ ಅವರು ಶಾಂತಿಯಿಂದ, ನೆಮ್ಮದಿಯಿಂದ ತಮ್ಮ ತಮ್ಮ ಊರುಗಳಿಗೆ ಹಿಂದೆ ಹೋದರು. ಪ್ರಚೋದನೆ ಕೊಡದೇ ಹೋದಾಗ ಅವರೂ ಕೂಡ ಶಾಂತಿಯಿಂದ ಇರುತ್ತಾರೆಂಬುದಕ್ಕೆ ಇದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಪಂಪಾಪತಿ.—ಇವತ್ತು ಆ ಮಾತನ್ನು ಹೇಳುತ್ತಿದ್ದೀರಿ. ಆದರೆ ಆವತ್ತು ಬಾಡಿಗೆ ಜನ ಬಂದಿದ್ದರು ಅಂತ ಹೇಳಿದ್ದೀರಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಬೊಮ್ಮಾಯಿಯವರು ಸ್ವಲ್ಪ ಇದರ ಬಗ್ಗೆ ದೀರ್ಘವಾಗಿ ಯೋಚನೆ ಮಾಡಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ಸುಮಾರು ಜನರನ್ನು ಕರೆದುಕೊಂಡು ಬಂದಿದ್ದರೂ, ಬಾಡಿಗೆ ಜನ ಅಂತಲೇ ಹೇಳುತ್ತಿದ್ದರು ಆವತ್ತು.

ಶ್ರೀ ಎಂ. ವೀರಪ್ಪಮೊಯಿಲಿ.—ನಮ್ಮ ಕೆಲವು ಸ್ನೇಹಿತರಿಗೆ ವಿಚಾರಗಳ ಮಂಥನೆ ಇಲ್ಲ. ಬೇಗ ಮರೆಯುವುದು ಜಾಸ್ತಿ. ಆದ್ದರಿಂದ ಇದು ಗಂಭೀರವಾಗಿ ಉಲ್ಬಣ ಪರಿಸ್ಥಿತಿಗೆ ಬಂದುಬಿಟ್ಟಿದೆ. ಆ ಸಂದರ್ಭದಲ್ಲಿ ಒಂದು ಲಕ್ಷ ಜನ ರೈತರು ಬೆಂಗಳೂರಿಗೆ ಬಂದಿದ್ದರು. ಅವರಿಗೆ ನೀರಿನಿಂದ ಹಿಡಿದು ಎಲ್ಲ ಅನುಕೂಲತೆಯನ್ನು ಮಾಡಿಕೊಟ್ಟೆವು. ಅದರಿಂದ ಅವರ ಬಹಳ ಸಮಾಧಾನದಿಂದ ಹಿಂದೆ ತಮ್ಮ ತಮ್ಮ ಊರುಗಳಿಗೆ ಹೋದದ್ದು ಇದೆ. ಆದರೆ ಕೊನೆಗೆ ಏನಾಯಿತು ಎಂದರೆ, ಚುನಾವಣೆ ಹತ್ತಿರ ಬಂದಾಗ ರಾಜಕೀಯವಾಗಿ ಅವರನ್ನು ನೀವು ಉಪಯೋಗ ಮಾಡಿಕೊಂಡಿರಿ. ೧೯೮೦ ಹಾಗೂ ೧೯೮೧ರಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಕೆಲವು ಕಡೆ ಗೋಲಿಬಾರ್ ಕೂಡ ಆದದ್ದು ಇದೆ. ಆದರೆ ಅದರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗುತ್ತಿರುವುದರಿಂದ, ಇಲ್ಲಿ ಆ ಬಗ್ಗೆ ಚರ್ಚೆ ಮಾಡತಕ್ಕಂತಹದ್ದು ಪ್ರಸ್ತುತ ಅಗತ್ಯ ಇಲ್ಲ ಅಂತ ನಾನು ತಿಳಿದುಕೊಂಡಿದ್ದೇನೆ. ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಆ ಬಗ್ಗೆ ಕೂಡ ಹೇಳಿದರು. ಅವರು ನಿಜವಾಗಿ ಅದನ್ನು ಹೇಳಬಾರದಿತ್ತು. ಆದರೂ ಇವರ ಒಂದು ಪ್ರೇರೇಪಣೆಯಿಂದ ಈ ನ್ಯಾಯಾಂಗ ವಿಚಾರಣೆಗೆ ಏನೂ ತೊಂದರೆಯಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಆ ಬಗ್ಗೆ ಈಗ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವರ ಕಾಲದಲ್ಲಿ ರೈತರು ಹಿಂದೆ ವಿಧಾನಸೌಧಕ್ಕೆ ಬಂದರು. ದಿವಸಗಟ್ಟಲೆ ಚರ್ಚೆಯಾಯಿತು ಒಂದು ಲಕ್ಷ ಜನ ಬೆಂಗಳೂರಿಗೆ ಬಂದಿದ್ದಾಗ ಅವರನ್ನು ಸಮಾಧಾನದಿಂದ ಕಳಿಸಿದ್ದೆವು. ಇಲ್ಲಿ ರೈತರು ಕಬ್ಬಿನ ಬೆಲೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ಕೆಲವೇ ಜನ ಬಂದಿದ್ದರೂ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಮುಖ್ಯಮಂತ್ರಿಗಳು ಹೋಗಲಿಲ್ಲ. ಅವರ ಜೊತೆಯಲ್ಲಿ ಕುಳಿತು ಸಮಾಧಾನದಿಂದ ಚರ್ಚೆ ಮಾಡುವಂತಹ ಆಸಕ್ತಿಯನ್ನೂ ಸರ್ಕಾರ ತೋರಲಿಲ್ಲ. ವಿಧಾನಸೌಧದ ಒಂದು ಇತಿಹಾಸದಲ್ಲೆಲ್ಲ ದಿವಸಗಟ್ಟಲೆ ಧರಣಿ ಕುಳಿತು

ಕೊಳ್ಳಬೇಕಾದ ಪ್ರಚೋದನೆ ಕೂಡ ಸರ್ಕಾರದ ಒಂದು ವರ್ತನೆಯಿಂದ ಇಲ್ಲಿ ಪ್ರಾರಂಭವಾಯಿತು. ಆವಾಗ ವಿಧಾನಸೌಧದ ಸುತ್ತ ತಂತಿ ಬೇಲಿ ಇದ್ದರೆ, ಈಗ ಪೋಲೀಸ್ ಬೇಲಿ ಹಾಕಿಬಿಟ್ಟಿದ್ದಾರೆ. ಅನೇಕ ದಿವಸಗಳ ಕಾಲ ಶಾಸಕರೂ ಕೂಡ ಪೋಲೀಸ್‌ನವರ ಅಪ್ಪಣೆ ಇಲ್ಲದೆ ಒಳಗೆ ಬರದೇ ಇರತಕ್ಕ ಒಂದು ಪರಿಸ್ಥಿತಿಯನ್ನು ಉಂಟು ಮಾಡಿದರು. ಅವರ ಒಂದು ಶಕ್ತಿಯನ್ನು ತಾತ್ಕಾಲಿಕವಾಗಿ ತಮ್ಮ ರಾಜಕೀಯ ಲಾಭಕ್ಕಾಗಿ ಉಪಯೋಗ ಮಾಡಿಕೊಂಡರು. ಡಿಸೆಂಬರ್ ೨೯ನೇ ತಾರೀಖು ಹುಬ್ಬಳ್ಳಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಎಂಬುದನ್ನು ಗಮನಿಸಬೇಕು. ಅವರು ಏನು ಹೇಳಿದರೆಂದರೆ ರೈತರು ಸರ್ಕಾರಿ ಕೆಲಸಕ್ಕೆ ಅಡ್ಡಿ ಮಾಡುತ್ತಿದ್ದಾರೆ ಮತ್ತೊಂದು ಸಲ ರೈತರ ಚಳುವಳಿಯಲ್ಲಿ ಕಳ್ಳಸಾಗಾಣಿಕೆದಾರರು ಹಾಗೂ ದುಷ್ಟಶಕ್ತಿಗಳು ಸೇರಿಕೊಂಡಿದ್ದಾರೆ ಎಂದು ಹೇಳಿದ್ದರು, ಹಾಗೂ ಇದರಲ್ಲಿ ಅಕ್ರಮವಾಗಿ ಮದ್ಯವನ್ನು ತಯಾರು ಮಾಡತಕ್ಕಂತಹವರೂ ಕೂಡ ಸೇರಿಕೊಂಡಿದ್ದಾರೆಂದು ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟರು. ಹಾಗಾದರೆ ಇವರು ಅಧಿಕಾರಕ್ಕೆ ಬರಬೇಕಾದರೆ, ಅವರಿಂದ ಓಟನ್ನು ಗಳಿಸಬೇಕಾದರೆ ಆ ದುಷ್ಟ ಶಕ್ತಿಗಳ ಧೂತರಾಷ್ಟ್ರಾಲಿಂಗನ ಆಗಿರಲಿಲ್ಲವೇ? ಆದರೆ ಈಗ ಆ ಶಕ್ತಿಗಳ ಜೊತೆಯಲ್ಲಿ ನಿಭಾಯಿಸಿಕೊಳ್ಳುವುದಕ್ಕೆ ಇವರಿಗೆ ಸಾಧ್ಯವಾಗುವುದಿಲ್ಲ ಮತ್ತು ಅವರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಆವಾಗ ನಿಮಗೆ ಅಧಿಕಾರ ಇರಲಿಲ್ಲ. ಆದರೆ ಇವತ್ತು ಆ ಒಂದುಶಕ್ತಿಗಳ ಆಶೀರ್ವಾದದಿಂದ ಅಧಿಕಾರದಲ್ಲಿದ್ದೀರಿ. ನಿಮ್ಮ ವಾದದ ಪ್ರಕಾರವೇ ಹೇಳುವುದಾದರೆ, ಯಾವ ದುಷ್ಟ ಶಕ್ತಿಗಳ ಸಹಾಯದಿಂದ ಅಧಿಕಾರಕ್ಕೆ ಏನು ಬಂದಿದ್ದಾರೋ ಅವರು ದುಷ್ಟ ಶಕ್ತಿಗಳಲ್ಲವೇ ?

೧–೩೦ ಪಿ. ಎಂ.

ಆದುದರಿಂದ ಆ ದುಷ್ಟ ಶಕ್ತಿಯ ಒಂದು ಪ್ರತಿರೂಪ ನಿಮ್ಮ ಸರ್ಕಾರ ಎಂದು ಹೇಳಿದರೆ ನಿಮಗೆ ಅದು ಸರಿಹೋಗುತ್ತದೆ. ಆ ದುಷ್ಟ ಶಕ್ತಿಗಳನ್ನು ತೆಗೆಯುವುದಕ್ಕೆ ಮತ್ತೆ ಕೆಲವು ದುಷ್ಟ ಶಕ್ತಿಗಳು ಸೇರಿವೆ ಎಂದು ಹೇಳಬಹುದು. ನೀವು ಯಾವ ದುಷ್ಟ ಶಕ್ತಿಗಳ ಅಧಿಕಾರ ಹೊಂದಿದ್ದೀರಿ ಆ ದುಷ್ಟ ಶಕ್ತಿಗಳ ಸಹಾಯದಿಂದ ಅಧಿಕಾರಕ್ಕೆ ಬಂದವರೂ ದುಷ್ಟ ಶಕ್ತಿಗಳೇ. ನಿಮ್ಮ ಈ ವ್ಯವಹಾರವನ್ನು ಯಾವ ದುಷ್ಟ ಶಕ್ತಿಯಿಂದ ನಡೆಯಿಸುತ್ತೀರೋ ನೋಡುತ್ತೇನೆ. ಅನೇಕ ರೀತಿಯಲ್ಲಿ ಇವತ್ತು ಇವರು ದಮನ ಶಕ್ತಿ ಉಪಯೋಗ ಮಾಡುವುದಿಲ್ಲವೆಂದು ಹೇಳಿದರು. ದಮನ ಶಕ್ತಿಯನ್ನು ಉಪಯೋಗ ಮಾಡಲಿಕ್ಕೆ ನಮಗೆ ಕೂಡ ಯಾವುದೇ ಚಿಂತನೆ ಇಲ್ಲ. ಎರಡು ವರ್ಷಗಳ ಕಾಲ ಸಂಯಮದಿಂದ, ತಾಳ್ಮೆಯಿಂದ, ರೈತರ ನಿಜವಾದ ಸಮಸ್ಯೆಗಳನ್ನು ಅನುಕಂಪದಿಂದ ನೋಡತಕ್ಕ ಮನಸ್ಸು ನಮ್ಮ ಪಕ್ಷಕ್ಕೆ ಇದೆ. ಇದನ್ನು ದೇವೇಗೌಡರು ಕೂಡ ಒಪ್ಪುತ್ತೇನೆಂದು ಹೇಳಿದ್ದಾರೆ. ಬೊಮ್ಮಾಯಿಯವರ ಹಾಗೆ ದೇವೇಗೌಡರು ಮಾತನಾಡಲಿಲ್ಲ. ಏಕೆಂದರೆ ಅವರಿಗೆ ವಿಚಾರ ಚೆನ್ನಾಗಿ ಗೊತ್ತಿತ್ತು. ಹೊಸದಾಗಿ ಅಧಿಕಾರಕ್ಕೆ ಬಂದಾಗ ಯಾವುದನ್ನೂ ನಿಭಾಯಿಸಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ಗೊತ್ತು. ಅದನ್ನು ವಿರೋಧ ಪಕ್ಷದಲ್ಲಿ ನಿಂತು ಅವರು ನೋಡಿದ್ದಾರೆ. ಇವತ್ತು ನಾವು ಪ್ರಚೋದನೆ ಕೊಡತಕ್ಕ ರೀತಿಯಲ್ಲಿ ರಾಜಕೀಯಕ್ಕೆ ಹೋಗಬಾರದೆಂಬ ಇಚ್ಛೆ ಬೊಮ್ಮಾಯಿಯವರಿಗೆ ಇದೆಯೋ ಏನೋ. ಈ ಬಗ್ಗೆ ನಮಗೆ ಗೊತ್ತಿದೆ, ಏಕೆಂದರೆ ನೀವು ಇಲ್ಲಿ ನಿಂತುಕೊಂಡು ವಿಚಾರ ಮಾಡಿದ್ದು ಇದೆ. ಆದ್ದರಿಂದ, ಈ ರೈತ ಸಂಘದವರನ್ನು ದಮನಿಸತಕ್ಕ ಕೆಲಸವನ್ನು ರಾಜಕೀಯವಾಗಿ ಮಾಡಿದ್ದೀರೆಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನೀವು ಮಾಡಿದ್ದಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲ, ನಾವು ರಾಜಕೀಯ ದೃಷ್ಟಿಯಿಂದ ಮಾಡಲಿಲ್ಲ. ಇವತ್ತು ರೈತ ಸಂಘ ಎರಡು ಹೋಳಾಗಿದೆ. ಇದನ್ನು ನಿಮ್ಮ ಅನುಕೂಲಕ್ಕೆ ಮಾಡಿದಿರಿ ಎಂದು ಕಾಣುತ್ತದೆ. ಈಗ ನಿಮ್ಮ ಕಡೆ ಬಂದದ್ದು ದುಷ್ಟ ಶಕ್ತಿಯೋ ಅಥವಾ ಶಿಷ್ಟ ಶಕ್ತಿಯೋ? ಕರ್ನಾಟಕ ರಾಜ್ಯ ರೈತ ಸಂಘ ಎಂದು ರುದ್ರಪ್ಪನವರ ಅಧ್ಯಕ್ಷತೆಯಲ್ಲಿರುವ ಸಂಘ ದುಷ್ಟ ಶಕ್ತಿಯೋ ಅಥವಾ ಶಿಷ್ಟ ಶಕ್ತಿಯೋ ಎಂಬುದನ್ನು ಜನ ನೋಡುತ್ತಾರೆ. ಬಹುಶಃ ನಿಮಗೆ ಶಿಷ್ಟ ಶಕ್ತಿಗಳು ಬೇಡ, ದುಷ್ಟ ಶಕ್ತಿಗಳು ಮಾತ್ರ ಬೇಕು ಎಂದು ಕಾಣುತ್ತದೆ. ಆದರೂ ಕೂಡ ಮೊನ್ನೆ ಹೇಳಿದ್ದೀರಿ, 'ದುಷ್ಟ ಶಕ್ತಿಗಳ ವಿರುದ್ಧ ಹೆಗಡೆ ಎಚ್ಚರಿಕೆ' ಎಂದು ರೈತ ಸಂಘದವರಿಗೆ ಹೇಳಿದ್ದೀರಿ. ಆದುದರಿಂದ ಸರ್ಕಾರ ಚಮಚಾಗಳು ಆಗಿದ್ದರೆ ಅವರು ದುಷ್ಟ ಶಕ್ತಿಗಳು, ಇಲ್ಲದಿದ್ದರೆ......

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಪದ ಅನ್‌ಪಾರ್ಲಿಮೆಂಟರಿ ಆಗುತ್ತದೆ.

ಉಪಾಧ್ಯಕ್ಷರು.—ಅದನ್ನು ಕಡತದಿಂದ ತೆಗೆಯುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಚಮಚಾ ಎಂದು ಹೇಳಿ ರೈತರಿಗೆ ಅಪಮಾನ ಮಾಡಬೇಡಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮ್ಮ ಸಂಘಟನೆ ಏನು ಹೊಸದಲ್ಲ. ಈಗ ರಾಜಕೀಯವಾಗಿ ಏನು ಹುಟ್ಟಿವೆ ಆ ಬಗ್ಗೆ ಹೇಳುತ್ತಿದ್ದೇನೆ. ವೈಯಕ್ತಿಕವಾಗಿ ಯಾರ ಮೇಲಾಗಲಿ, ಯಾವ ಪಕ್ಷದ ಮೇಲಾಗಲಿ ಹೇಳುತ್ತಿಲ್ಲ.

ಉಪಾಧ್ಯಕ್ಷರು.—ಈಗಾಗಲೇ ಆ ಬಗ್ಗೆ ಮುಖ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ರಾಜಕೀಯ ಮಾಡುತ್ತಿರುವವರು ತಾವು. ಮುಖ್ಯ ಮಂತ್ರಿಗಳು ಎಷ್ಟು ಹೊತ್ತು ಮಾತನಾಡಲಿಲ್ಲ? ಈ ಒಂದು ಸಮಸ್ಯೆಯನ್ನು ಹಾಲಿ ಇರತಕ್ಕ ಸರ್ಕಾರ ಸೃಷ್ಟಿ ಮಾಡಿದೆ. ಆದ್ದರಿಂದ, ಇವತ್ತು ಈ ಜವಾಬ್ದಾರಿಯನ್ನು ಇವರು ವಹಿಸಿಕೊಳ್ಳ ಬೇಕು. ನನ್ನ ನಿಲುವಳಿ ಸೂಚನೆಯಲ್ಲಿ ಕೂಡ ಇವರ ಪ್ರಚೋದನೆಯಿಂದ ರೈತರಿಗೆ, ನಾಗರೀಕರಿಗೆ ತೊಂದರೆಯಾಗಿದೆ ಎಂದು ಕಾಣಿಸಿದ್ದೇನೆ. ಇವತ್ತು ರೈತ ಸಂಘದ ಹೆಸರಿನಲ್ಲಿ ದುಷ್ಕರ್ಮಿಗಳಿಂದ ಹಿಂಸೆ ಅನುಭವಿಸುತ್ತಿರುವ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಈ ಹೇಳಿಕೆಗಳನ್ನು ಕೊಟ್ಟು, ಕಾಂಗ್ರೆ ಪಕ್ಷದವರು ಅವರನ್ನು ಜೊತೆಯಲ್ಲಿ ಸೇರಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಇವತ್ತು ರಾಜಕೀಯ ಬಣ್ಣವನ್ನು ಹಾಕಿ ರಾಜಕೀಯವಾಗಿ ರೈತ ಸಂಘಗಳನ್ನು ಎಬ್ಬಿಸಿ ಈ ಪರಿಸ್ಥಿತಿಗೆ ಈ ರಾಜ್ಯವನ್ನು ತಂದಿದ್ದಾರೆ. ಅದಕ್ಕಾಗಿ ಕಾಂಗ್ರೆಸ್‌ನವರು ಹೇಳಿ ಕೊಡುವಾಗ್ಗೆ ಬಹಳ ಸಂಯಮದಿಂದ ಇರುವುದು. ನಮ್ಮಿಂದ ಯಾವುದೇ ರೀತಿಯ ಪ್ರಚೋದನೆ ಅಥವಾ ಮುಷ್ಕರ ಆಗಬಾರದೆಂಬ ಒಂದು ಸಂಪೂರ್ಣ ತಿಳುವಳಿಕೆಯಿಂದ ನಾವು ಹೇಳಿಕೆ ಕೊಟ್ಟಿಲ್ಲ. ಈ ಒಂದು ಅನಾನುಕೂಲತೆ ಏನು ಸಾರ್ವಜನಿಕರಿಗೆ, ರಾಜ್ಯದ ರೈತರಿಗೆ ಹಾಗೂ ರೈತ ಕಾರ್ಮಿಕರಿಗೆ ಆಗಿದೆ ಇದನ್ನು ನಾವು ಮೆಚ್ಚುವುದಿಲ್ಲ. ಇವತ್ತು ಇದನ್ನು ಒಂದು ಸಂದಾನದ ಮೂಲಕ ಅವರನ್ನು ಕರೆಸಿ ಮಾಡುವುದರ ಬದಲು ಅವರಿಗೆ ನಾನಾ ರೀತಿಯ ಲೇಬಲ್ ಹಾಕಿ ನೀವೇ ಒಂದು ರೈತ ಸಂಘವನ್ನು ಮಾಡಿಕೊಂಡು ಅದಕ್ಕೆ ರಾಜಕೀಯವನ್ನು ಬೆರೆಸಿ ಅವರನ್ನು ದಮನ ಮಾಡುವುದಕ್ಕೆ ಹೊರಟಿದ್ದೀರಿ. ಅದನ್ನು ಸವಾಲಾಗಿ ಅವರು ಸ್ವೀಕಾರ ಮಾಡಿದ್ದಾರೆ. ತಾವು ಕೊಟ್ಟಂತಹ ಸವಾಲು ಸದನದಲ್ಲಿ ಮತ್ತು ಹೊರಗೆ ಕೂಡ ರೈತರಿಗೆ ಕೊಟ್ಟಂತಹ ಸವಾಲೆಂದು ಸ್ವೀಕಾರ ಮಾಡಿದ್ದಾರೆ. ಸಂಘರ್ಷದ ಕರೆಯನ್ನು ಅವರು ಕೊಟ್ಟಿದ್ದಲ್ಲ, ಅದನ್ನು ಸರ್ಕಾರವೇ ಕೊಟ್ಟಿದ್ದು. ಇವತ್ತು ಸರ್ಕಾರ ರೈತ ಸಂಘದ ಜೊತೆಯಲ್ಲಿ ಇರುವುದನ್ನು ಕರ್ನಾಟಕ ರಾಜ್ಯದ ಜನತೆ ನೋಡಿಯೂ ಕಣ್ಮುಚ್ಚಿಕೊಂಡು ಇರುವುದಕ್ಕೆ ಸಾಧ್ಯವಿಲ್ಲ. ರಾಜಕೀಯದ ಪಗಡೆ ಆಟದಲ್ಲಿ ಕರ್ನಾಟಕ ರಾಜ್ಯದ ಜನರನ್ನು ಬಲಿ ಕೊಡಬಾರದೆಂದು ಹೇಳುತ್ತೇನೆ. ಈ ದಿಸೆ ಯಲ್ಲಿ ಮಂತ್ರಿಗಳು ಒಂದು ಸೂಚನೆ ಅಥವಾ ಸಂದೇಶವನ್ನು ನೀಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ರಘುಪತಿ.—ಅವರು ಇನ್ನೂ ಎಷ್ಟು ಹೊತ್ತು ಮಾತನಾಡುತ್ತಾರೆ ಎಂದು ನಾನು ನೇರವಾಗಿ ಅಧ್ಯಕ್ಷರನ್ನು ಕೇಳುತ್ತೇನೆ.

(ಗೊಂದಲ)

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಂತ್ರಿಯವರು ತಮ್ಮ ಈ ರೀತಿ ನೇರವಾಗಿ ಕೇಳ ಬಹುದೇ ಎಂಬ ಬಗ್ಗೆ ಹೇಳಬೇಕು. ಒಂದು ವೇಳೆ ಆ ರೀತಿ ಕೇಳುವುದಾದರೆ, ಎದ್ದು ನಿಂತು ನೇರ ವಾಗಿ ಕೇಳಬೇಕು. ಅದು ಬಿಟ್ಟು ಸನ್ನೆ ಮಾಡಿ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಡಿಯೂರಪ್ಪನವರು ೨೨ರಂದು ವಿಚಾರ ಎತ್ತಿದರು. ಆ ವಿಚಾರ ಎತ್ತಿದಾಗ ಕೂಡ ಮುಖ್ಯ ಮಂತ್ರಿಯವರ ಹೇಳಿಕೆಯನ್ನು ನೋಡಿದಾಗ ಸಾಕಷ್ಟು ಪ್ರಚೋದನೆ ಆಗುತ್ತಿದೆ. ಅವರು ಸಂಧಾನದ ಬದಲಿಗೆ ಸವಾಲನ್ನು ಎಸೆದು ಪ್ರತಿ ಸವಾಲಿಗೆ ಕರೆ ಕೊಟ್ಟಿದ್ದಾರೆ. ''ರೈತ ನಾಯಕರಿಗೆ ಹೆಗಡೆ ಎಚ್ಚರಿಕೆ—ಪರಿಹಾರ ಧನ ನೀಡಲು ಅಸಾಧ್ಯ'' ಎಂದು ಹೇಳಿರುವುದು ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ರಾಜವರ್ಧನ್.—ಯಾವ ಪತ್ರಿಕೆಯಲ್ಲಿ ಬಂದಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮುಂಜಾನೆ, ಕನ್ನಡ ಪ್ರಭದಲ್ಲಿಲ್ಲ ಬಂದಿದೆ. ಜೊತೆಗೆ ಪತ್ರಿಕೆಗಳ ಬಗ್ಗೆ ಎಲ್ಲ ಬಹಳ ಲಘುವಾಗಿ ಹೇಳತಕ್ಕ ವ್ಯವಹಾರ ಕೂಡ ನಡೆದಿದೆ. ನಿಮ್ಮ ಪರವಾಗಿ ಇರತಕ್ಕ ಕನ್ನಡ ಪ್ರಭಾ ಪತ್ರಿಕೆಯಲ್ಲಿ ಬಂದಿರುವುದನ್ನೇ ಬೇಕಾದರೆ ಓದುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಕೆಲವು ತಟಸ್ಥ ಪತ್ರಿಕೆಗಳು ಇವೆ, ಅವನ್ನು ಪಕ್ಷದ ಪತ್ರಿಕೆಗಳು ಎನ್ನುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—೨೩ರಂದು ಕೊಟ್ಟ ಹೇಳಿಕೆಯಲ್ಲಿ ಕೂಡ ಸಾಕಷ್ಟು ಪ್ರಚೋದನೆಯನ್ನು ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆ. ನಂತರ ಮಹೇಶ್ವರಪ್ಪನವರು ಈ ಪ್ರಶ್ನೆ ಎತ್ತಿದಾಗ ಕೂಡ ಈ ಸದನದಲ್ಲಿ......

ಉಪಾಧ್ಯಕ್ಷರು.—ಮುಗಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಬೆಲ್ ಏತಕ್ಕೆ ಬಾರಿಸಿದ್ದೀರಿ ಎಂಬುದು ಅರ್ಥವಾಗಲಿಲ್ಲ. ಸಭಾ ನಾಯಕರು ಮಾತನಾಡುವಾಗ ತಾವು ಬೆಲ್ ಬಾರಿಸಲಿಲ್ಲ. ಆಗ ಬೆಲ್ ಹಾಳಾಗಿರಬೇಕು ಎಂದು ಕಾಣುತ್ತದೆ. ಆದರೆ ವಿರೋಧ ಪಕ್ಷದವರು ಎದ್ದು ನಿಂತ ತಕ್ಷಣ ಬೆಲ್ ಚುರುಕಾಗಿ ಕೆಲಸ ಮಾಡುತ್ತದೆ. ಸನ್ಮಾನ್ಯ ರಾಜವರ್ಧನ್ ಅವರು ನಾನು ಮಾತನಾಡುವಾಗ ಲಘುವಾಗಿ ತೆಗೆದು ಕೊಳ್ಳುತ್ತಿದ್ದಾರೆ. ಅವರಿಗೆ ಏನಾಗಿದೆಯೋ ಗೊತ್ತಿಲ್ಲ. ಇವತ್ತು ೨೫–೩೦ ಸಾವಿರ ಜನ ರೈತರು ಜೈಲಿನೊಳಗಿದ್ದು ಇಡೀ ಕರ್ನಾಟಕದ ಜನ ಕಳವಳದಿಂದ ತತ್ತರಿಸುತ್ತಿದ್ದಾರೆ. ಇದನ್ನು ನೋಡಿ ನಿಮ್ಮ ಸರ್ಕಾರ ಬಳೆ ತೊಡಬೇಕಾದ ಸಂದರ್ಭದಲ್ಲಿ ಅಡ್ಡಾದಿಡ್ಡಿಯಾಗಿ ಲಘುವಾಗಿ ಮಾತನಾಡ ಬೇಕಾದರೆ......

ಶ್ರೀ ಎಂ. ರಘುಪತಿ.—ನಾವು ಗುಂಡಿಟ್ಟು ಸಾಯಿಸಿ ಬಳೆ ತೊಡಿಸಿಕೊಳ್ಳುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬಳೆ ತೊಡಬೇಕಾದ ಕೆಲಸ ಮಾಡುತ್ತಿದ್ದೀರಿ. ನಿಮಗೆ ಎದ್ದು ನಿಲ್ಲತಕ್ಕ ನೈತಿಕ ಧೈರ್ಯ ಎಲ್ಲಿದೆ?

ಶ್ರೀ ಜಿ. ನಾರಾಯಣ ಕುಮಾರ್.—ಇದು ಗಂಭೀರವಾದ ಸಮಸ್ಯೆ. ಇದನ್ನು ಲಘುವಾಗಿ ತೆಗೆದುಕೊಳ್ಳಬೇಕಾಗಿಲ್ಲ. ಪ್ರಚೋದನೆಯ ಅವಶ್ಯಕತೆ ಇಲ್ಲ ಆಡಳಿತ ಪಕ್ಷದವರು ಸಹನೆಯಿಂದ ಕೇಳಬೇಕು. ಅಷ್ಟು ಸಹನೆ ಇಲ್ಲದಿದ್ದರೆ ಹೇಗೆ? ರಾಜ್ಯದಲ್ಲಿ ಕೋಟಿಗಟ್ಟಲೆ ಹಣ ನಷ್ಟವಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕೆ.ಎಸ್.ಆರ್.ಟಿ.ಸಿ.ಯಲ್ಲಿ ಒಂದು ಕೋಟಿ ರೂಪಾಯಿಗಳ ನಷ್ಟವಾಗಿದೆ. ನಾಗರೀಕರಿಗೆ ದೊರೆಯಬೇಕಾದ ಅನೇಕ ಪ್ರಾಥಮಿಕ ಸವಲತ್ತುಗಳೂ ಸಿಗುತ್ತಿಲ್ಲ. ಈಗ ಏನಾಗಿದೆಯೆಂದರೆ......

ಉಪಾಧ್ಯಕ್ಷರು.—ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ. ಸದಸ್ಯರೊಬ್ಬರು ಮಾತನಾಡುವಾಗ ಬೇರೆ ಸದಸ್ಯರು ಮಧ್ಯೆ ಕಾಮೆಂಟರಿ ಮಾಡುವುದು ಸರಿಯಲ್ಲ. ಸದನದ ಹಿತದೃಷ್ಟಿಯಿಂದ ಅದನ್ನು ಕಡಿಮೆ ಮಾಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇವತ್ತು ಕರ್ನಾಟಕ ರಾಜ್ಯದ ಜನತೆಗೆ ಪ್ರಾಣ ಸಂಕಟವಾಗು ತ್ತಿದ್ದರೆ ''ಇಲಿಗೆ ಪ್ರಾಣ ಸಂಕಟ, ಬೆಕ್ಕಿಗೆ ಚೆಲ್ಲಾಟ'' ಎನ್ನುವಂತೆ ಇಲ್ಲಿ ಇವರು ಬೆಕ್ಕಿನ ಆಟದ ತರಹ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಡೆಲ್ಲಿಯಿಂದ ಒಂದು ಹೇಳಿಕೆ ಕೊಟ್ಟಿದ್ದಾರೆ. ಅದೇನೆಂದರೆ ಕಾಂಗ್ರೆಸ್‌ನವರು ರೈತ ಸಂಘ ಮತ್ತು ರಾಜಕುಮಾರ್ ಅಭಿಮಾನಿಗಳ ಸಂಘದ ಜೊತೆ ಸೇರಿದ್ದಾರೆ ಎಂದು. ಒಂದು ಕಡೆ ಅಕ್ರಮ ಮಧ್ಯ ತಯಾರು ಮಾಡುವವರು ಅಂದರೆ ಕಳ್ಳಭಟ್ಟಿ ತಯಾರಕರು ಇವರಲ್ಲಿ ಸೇರಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ನಾಲ್ಕು ದಿವಸಗಳಿಂದ ಸತ್ಯಾಗ್ರಹ ನಡೆಯುತ್ತಿದೆ. ಹಾಗಾದರೆ ಎಷ್ಟು ಜನ ಕಳ್ಳಭಟ್ಟಿ ತಯಾರಕರನ್ನು ಅರೆಸ್ಟ್ ಮಾಡಿದ್ದೀರಿ? ಅಥವಾ ೨೬ರ ಮೊದಲು ಎಷ್ಟು ಜನ ಕಳ್ಳಭಟ್ಟಿ ತಯಾರಕರನ್ನು ರೈತ ಸಂಘಕ್ಕೆ ಸಹಾಯ ಮಾಡು ತ್ತಿದ್ದಾರೆಂದು ಅರೆಸ್ಟ್ ಮಾಡಿದ್ದೀರಿ? ಎಷ್ಟು ಜನ ದುಷ್ಟ ಶಕ್ತಿಗಳನ್ನು ಅರೆಸ್ಟ್ ಮಾಡಿದ್ದೀರಿ? ಎಂಬುದನ್ನು ಹೇಳಬೇಕು. ಮುಖ್ಯ ಮಂತ್ರಿಗಳು ರಾಜಕೀಯವಾಗಿ, ಲಘುವಾಗಿ ಹೇಳಿಕೆ ಕೊಡು ವುದರಿಂದಲೇ ಕರ್ನಾಟಕದಲ್ಲಿ ಈ ಪರಿಸ್ಥಿತಿ ನಿರ್ಮಾಣವಾಗಿದೆ ಬೆಂಗಳೂರು ಬಂದ್ ಮತ್ತು ರೈತ ಚಳುವಳಿ ವಿಷಯದಲ್ಲಿ ಅಪಾದನೆಗಳನ್ನು ಮುಖ್ಯ ಮಂತ್ರಿಗಳು ಮಾಡಿದ್ದಾರೆ. ಅದನ್ನು ಸಾಬೀತು

ಮಾಡುವ ಜವಾಬ್ದಾರಿಯಿಂದ ಹೇಳಿಕೆಗಳನ್ನು ಮುಖ್ಯ ಮಂತ್ರಿಗಳು ಕೊಡಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಉಲ್ಬಣ ಪರಿಸ್ಥಿತಿ ಬಂದಾಗ ನೀವು ರಾಜಕೀಯ ಬೆಳೆ ಬೇಯಿಸತಕ್ಕ ಪ್ರವೃತ್ತಿಯನ್ನು ಏನು ಅನುಸರಿಸುತ್ತಿದ್ದೀರಿ ಅದನ್ನು ನಿಲ್ಲಿಸದೇ ಇದ್ದರೆ ಈ ಸರ್ಕಾರ ಇನ್ನೂ ಕಷ್ಟ ಪರಿಸ್ಥಿತಿಯನ್ನು ಎದುರಿಸಬೇಕಾದ ಪರಿಸ್ಥಿತಿ ಬರುತ್ತದೆ. ಇದೇ ಸಮಸ್ಯೆಯನ್ನು ಮುಂದಿಟ್ಟುಕೊಂಡು ಮಾನ್ಯ ಮಹೇಶ್ವರಪ್ಪನವರು ಪ್ರಶ್ನೆ ಎತ್ತಿದಾಗ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಂತೆ ರೈತರು ಕೊಟ್ಟಿರುವ ಬೇಡಿಕೆಯನ್ನು ೧೦೦ಕ್ಕೆ ೧೦೦ ಪಾಲು ಒಪ್ಪುತ್ತೇನೆ, ಆದರೆ ರಾಜ್ಯದ ಸಮಸ್ಯೆ ಬಗ್ಗೆ ಸೀಮಿತವಾದ ಇತಿಮಿತಿಗಳಿವೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದು ಮುಖ್ಯ ಮಂತ್ರಿಗಳು ಕೊಡುವ ಉತ್ತರವೆ? ರೋಡ್ ರೋಖೊ ಚಳುವಳಿ ಮಾಡಿ, ರಸ್ತೆ ರೋಖೋ ಚಳುವಳಿ ಮಾಡಿ ಎಂದು ಕರ್ನಾಟಕದ ರಾಜ್ಯದ ಗೃಹ ಮಂತ್ರಿಯಾಗಿ, ಮುಖ್ಯ ಮಂತ್ರಿಯಾಗಿ ಪ್ರಚೋದನೆ ಮಾಡುತ್ತಿದ್ದಾರೆ. ಗೃಹ ಮಂತ್ರಿಯಾಗಿ ಇಂಥ ಚಳುವಳಿಯನ್ನು ನಿಲ್ಲಿಸುವ ದಿಟ್ಟ ಹೆಜ್ಜೆ ಇಡುವ ಬದಲು, ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತದೆ ಎಂದು ಸಂಧಾನಕ್ಕೆ ಕರೆದು ಮಾತುಕತೆ ಆಡುವ ಬದಲು ಕೇಂದ್ರದ ವಿಷಯದಲ್ಲಿ ಇಟ್ಟಿರುವ ಬೇಡಿಕೆಯನ್ನು ೧೦೦ ಪಾಲು ಒಪ್ಪುತ್ತೇನೆ, ಆದರೆ ರಾಜ್ಯದ ವಿಷಯದಲ್ಲಿ ಇಟ್ಟಿರುವ ಬೇಡಿಕೆಗಳಲ್ಲಿ ಇತಿಮಿತಿಗಳಿವೆ ಎಂದು ಜನರನ್ನು ತಪ್ಪು ದಾರಿಗೆ ಎಳೆಯುತಕ್ಕ ದ್ವಂದ್ವ ವಾದವನ್ನು, ವಿತಂಡ ವಾದವನ್ನು ಏನು ಇಡುತ್ತಿದ್ದೀರಿ ಇದರಿಂದ ಸಮಸ್ಯೆ ಪ್ರಚೋದನೆಗೊಂಡಿದೆ. ಮುಖ್ಯ ಮಂತ್ರಿಗಳ ಹೇಳಿಕೆಗಳು ಮತ್ತು ಮಾನ್ಯ ಬೊಮ್ಮಾಯಿಯವರ ಆಪರೇಷನ್ ನಂ. ೨ ರಿಂದ ಸಮಸ್ಯೆ ಹೆಚ್ಚಾಗಿದೆ. ಬೊಮ್ಮಾಯಿಯವರು ರೈತ ಸಂಘವನ್ನು ಹೋಳು ಮಾಡುತ್ತಿದ್ದಾರೆ. Hon'ble Minister Sri S. R. Bommai is the Minister incharge of Operation No. 2. ರೈತ ಸಂಘದ ಆಪರೇಷನ್ ನಂ. ೧ ರಿಂದ ಅಧಿಕಾರಕ್ಕೆ ಬಂದು ಆಪರೇಷನ್ ನಂ. ೨ ರಿಂದ ಅಧಿಕಾರ ಕಳೆದುಕೊಳ್ಳುತ್ತಿದ್ದೀರಿ. Sri S. R. Bommai is incharge of portfolio of Revolution and counter-Revolution. No. 1 operation is to fight against the previous Government and No. 2 operation is to fight against the Raitha Sangha and to split them into pieces.

SRI M. S. KRISHNAN.—What is that revolution and counter-revolution?

ಶ್ರೀ ಎಂ. ವೀರಪ್ಪ ಮೊಯಿಲಿ.—ವಿರೋಧ ಪಕ್ಷದಲ್ಲಿರುವಾಗ ಸರ್ಕಾರದ ವಿರುದ್ಧ ರೆವಲ್ಯೂಷನ್ ಮಾಡಿ ಈಗ ಕೌಂಟರ್ ರೆವಲ್ಯೂಷನ್......

ಶ್ರೀ ಎಸ್. ಸೂರ್ಯನಾರಾಯಣ ರಾವ್.—ರೆವಲ್ಯೂಷನ್ ಆಗೇ ಇಲ್ಲವಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾವ ಪ್ರಚೋದನೆಯಿಂದ ರಕ್ತಪಾತವಾಗಿದೆ, ಗೋಲೀಬಾರ್ ಆಗಿದೆ ಎಂಬುದು ಕಮಿಷನ್ ಬಗ್ಗೆ ವಿಚಾರ ಮಾಡುವಾಗ ಗೊತ್ತಾಗಿದೆ. ಯಾರ ಪ್ರಚೋದನೆಯಾಗಿದೆಯೋ ಅವರು ಜವಾಬ್ದಾರಿ ವಹಿಸಬೇಕಾಗುತ್ತದೆ. ಯಾರ ಪ್ರಚೋದನೆ ಯಿಂದ ಹೇಳಿಕೆಗಳು ಬಂದಿವೆ ಎಂಬ ಮಾತೂ ಇದೆ. ಅದನ್ನು ತಾವು ತಲೆ ಮೇಲೆ ಹೊತ್ತುಕೊಳ್ಳ ಬೇಕಾಗುತ್ತದೆ. ಆ ಪಾಪವನ್ನು ಹೊತ್ತುಕೊಳ್ಳಬೇಕಾಗುತ್ತದೆ. ಈಗ ಕೂಡ ಕೋಟ್ಯಾಂತರ ರೂಪಾಯಿ ನಷ್ಟವಾಗಿ ಜನರಿಗೆ ತೊಂದರೆಯಾಗಿದೆ. ಈ ಎರಡೂ ಪಾಪದ ಹೊರೆಯನ್ನು ಈ ಸರ್ಕಾರದವರು ತಮ್ಮ ತಲೆಯ ಮೇಲೆ ಹೊತ್ತುಕೊಳ್ಳಬೇಕಾಗುತ್ತದೆ. ಸರ್ಕಾರವೇ ಪ್ರಚೋದನೆ ಕೊಟ್ಟು ಅದನ್ನು ನಿಭಾಯಿಸಲಾಗದೇ ಈಗ ನಿಷ್ಕ್ರಿಯವಾಗಿದೆ. ಚಳುವಳಿಗಾರರ ದಯೆಯ, ಕಾರುಣ್ಯದ ಹಸ್ತದಲ್ಲಿ ಸಾರ್ವಜನಿಕರ ಜೀವನ ಇದೆ. ಒಂದು ವೇಳೆ ಚಳುವಳಿಗಾರರನ್ನು ಅರೆಸ್ಟ್ ಮಾಡಿದರೆ ಅವರನ್ನು ನೋಡಿಕೊಳ್ಳತಕ್ಕ ಶಕ್ತಿ ಸರ್ಕಾರಕ್ಕಿಲ್ಲ. ಚೈತನ್ಯ ಇಲ್ಲ. ಗಂಡಸ್ತನ ತೋರಿಸುತ್ತೇವೆ ಎಂದು ಹೇಳಿದ್ದೀರಲ್ಲ, ನೀವು ಗಂಡಸ್ತನ ತೋರಿಸಬೇಡಿ, ಷಂಡತನ ಇಲ್ಲ ಎಂಬುದನ್ನು ತೋರಿಸಿ. ಈ ಸರ್ಕಾರ ಬಂದಮೇಲೆ ಕರ್ನಾಟಕ ರಾಜ್ಯದಲ್ಲಿ ಒಂದು ಹೊಸ ಅಲೆ ಬಂದಿದೆ, ಬೆಂಗಳೂರು ಬಂದ್ ಯಶಸ್ವಿಯಾಗಿ ಮಾಡಿ ಎಂದು ಹೇಳುವುದು. ಜನರ ರಕ್ಷಣೆ ಇಲ್ಲ. ಅವರ ಪ್ರಾಥಮಿಕ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಸಿದ್ಧತೆ ಇಲ್ಲ. ಬಂದ್ ನಡೆದಾಗ ಅನೇಕ ಜನರ ಪ್ರಾಣ ಹಾನಿ ಮತ್ತು ಆಸ್ತಿ ಹಾನಿಯಾಯಿತು. ಅದಕ್ಕೂ ಸರ್ಕಾರದಿಂದ ಪ್ರಚೋದನೆ ಆಯಿತು. ಈಗ ರಸ್ತೆ ರೋಖೊ ಚಳುವಳಿ ಮತ್ತು ರೈಲು ರೋಖೊ ಚಳುವಳಿ ನಿರಾತಂಕವಾಗಿ ನಡೆಯಿತು. ಇವತ್ತು ಕರ್ನಾಟಕ ರಾಜ್ಯದಲ್ಲಿ ಯಾವುದಾದರೂ ಸರ್ಕಾರ ಇದೆಯೋ ಇಲ್ಲವೇ ಎಂಬ ಸಂಶಯ

ಬರುತ್ತಿದೆ. ಈ ಸರ್ಕಾರಕ್ಕೆ ಚಳುವಳಿಗಾರರಿಗೆ ಜೈಲಿನಲ್ಲಿ ಊಟ ಕೊಡುವುದಕ್ಕೆ ಗತಿ ಇಲ್ಲ. ನೀರು ಇಲ್ಲ. ಅದಕ್ಕೆಲ್ಲಾ ಏನೂ ವ್ಯವಸ್ಥೆ ಇಲ್ಲ. ಸಾರ್ವಜನಿಕರ ತೊಂದರೆಯನ್ನು ನಿವಾರಿಸತಕ್ಕ ಶಕ್ತಿ ಇಲ್ಲ. ಇಂಥ ಒಂದು ನಿಷ್ಕ್ರಿಯವಾದ ಮತ್ತು ಅದಕ್ಷತೆಯಿಂದ ತುಂಬಿದೆ, ಯಾವುದೇ ರೀತಿಯ ಸವಾಲನ್ನೂ ಎದುರಿಸಲು ಆಗದೇ ಇರುವ ಸರ್ಕಾರ ಇರುವುದರಿಂದ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಇಂಥ ಸರ್ಕಾರದ ವರ್ತನೆಯನ್ನು ಖಂಡಿತವಾಗಿ ಖಂಡಿಸುತ್ತೇವೆ. ತಾತ್ಕಾಲಿಕ ಲಾಭಕ್ಕಾಗಿ ಪ್ರಚೋದನೆ ಕೊಟ್ಟು, ಬೆಂಕಿ ಹಚ್ಚಿ ಕರ್ನಾಟಕ ರಾಜ್ಯದ ಸಮಗ್ರತೆಯನ್ನು, ಐಕ್ಯತೆಯನ್ನು ಮುರಿಯತಕ್ಕ ಮತ್ತು ಹಿಂಸಾತ್ಮಕ ಕಾರ್ಯಗಳಿಗೆ ಪ್ರಚೋದನೆ ಕೊಡತಕ್ಕ ಸರ್ಕಾರದ ನೀತಿ ನ್ಯಾಯಬಾಹಿರವಾದುದು. ಈ ಸರ್ಕಾರದ ನೀತಿಯಿಂದ ಇಡೀ ಕರ್ನಾಟಕ ರಾಜ್ಯದಲ್ಲಿ ಜನತೆಯ ನೆಮ್ಮದಿ ಮತ್ತು ಶಾಂತಿ ಕದಡಿದೆ. ಆದ್ದರಿಂದ ಈ ವಿಚಾರವನ್ನು ಸದನದಲ್ಲಿ ಚರ್ಚೆ ಮಾಡಬೇಕು. ಈ ಸದನದಲ್ಲಿ ಯಾವ ಬೇಜವಾಬ್ದಾರಿಯುತವಾದ ವರ್ತನೆಯನ್ನು ಸರ್ಕಾರ ತೋರಿಸುತ್ತಿದೆಯೋ ಇದನ್ನು ಕರ್ನಾಟಕದ ಜನತೆ ಎಚ್ಚೆತ್ತು ನೋಡಬೇಕಾದ ಪರಿಸ್ಥಿತಿ ಬಂದಿದೆ. ಚುನಾವಣೆ ಸಂದರ್ಭದಲ್ಲಿ ವಿವೇಚನಾರಹಿತವಾದ, ಬೇಡದ ಆಶ್ವಾಸನೆಗಳನ್ನು ಇವರು ಕೊಟ್ಟಿದ್ದಾರೆ. ಬೆಂಗಳೂರು ಬಂದ್ ಆದರೂ ಇವರಿಗೆ ಬುದ್ಧಿ ಬರಲಿಲ್ಲ. ಇನ್ನೂ ಎಷ್ಟು ಅನಾಹುತಗಳು ಕರ್ನಾಟಕದ ಜನತೆಗೆ ಕಾದಿದೆಯೋ ಗೊತ್ತಿಲ್ಲ. ಈ ದೃಷ್ಟಿಯಿಂದ ಬೇಸರದಿಂದ, ವ್ಯಸನದಿಂದ ಈ ವಿಚಾರವನ್ನು ತಮ್ಮ ಮುಂದಿಟ್ಟಿದ್ದೇನೆ.

† ಶ್ರೀ ಕೆ.ಹೆಚ್. ರಂಗನಾಥ್ (ಹಿರಿಯೂರು).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡುವ ಸಮಯದಲ್ಲಿ ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ. ಆ ಒಂದು ಚಳುವಳಿ ಪ್ರಾರಂಭ ಆಗುವುದಕ್ಕೆ ಮೂರು ದಿವಸಗಳ ಮುನ್ನವೇ ತನ್ನದೇ ಆದ ಧಾಟಿಯಲ್ಲಿ ಅರ್ಥಾತ್ ಪ್ರಚೋದನೆ ಮಾಡತಕ್ಕ ಧಾಟಿಯಲ್ಲಿ ಪ್ರಯತ್ನ ಮಾಡಿರುವುದರಿಂದ ಅದನ್ನು ಕೈಗೆ ಎತ್ತಿಕೊಂಡು ಚಳುವಳಿಯನ್ನು ನಿರಂತರವಾಗಿ ೪ ದಿವಸಗಳವರೆಗೆ ನಡೆಸಿ ರಾಜ್ಯದಲ್ಲಿ ಎಂದೂ ಆಗದೆ ಇರತಕ್ಕ ರೀತಿಯಲ್ಲಿ ಸಾರ್ವಜನಿಕರಿಗೆ ತೊಂದರೆ ಆಗಿರುವುದನ್ನು ನಾವು ನೋಡುತ್ತಿದ್ದೇವೆ. ನಾನು ೨೩ನೇ ತಾರೀಖು ಸಭೆಯಲ್ಲಿ ಇದ್ದೆ. ಆಗ ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಬಿ.ಜೆ.ಪಿ. ಸದಸ್ಯರಾದ ಮಾನ್ಯ ಯಡಿಯೂರಪ್ಪನವರು ಎತ್ತಿದಂತಹ ಒಂದು ಸಾಧಾರಣದ ವಿಷಯದ ಮೇಲೆ ಚರ್ಚೆ ಮಾಡುತ್ತಾ ಒಂದು ಹೇಳಿಕೆಯನ್ನು ನೀಡಿದರು. ೨೧ನೇ ತಾರೀಖಿನಿಂದ ಚಳುವಳಿ ಪ್ರಾರಂಭವಾಗುವುದರ ಬಗ್ಗೆ ಅವರು ತಮ್ಮ ಗಮನವನ್ನು ಸೆಳೆದರು. ಆ ಬಗ್ಗೆ ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಮಾನ್ಯ ಮುಖ್ಯಮಂತ್ರಿಗಳು ಅಂತಹ ಪ್ರಚೋದನಾತ್ಮಕವಾದ ಹೇಳಿಕೆಯನ್ನು ಕೊಡುವ ಅವಶ್ಯಕತೆ ಇರಲಿಲ್ಲ. ಅದು ಅವರಿಗೆ ಬಿಟ್ಟಿದ್ದು. ಅವರು ಭಾವಪರವಶರಾಗಿ ಮಾತನಾಡುತ್ತಾ ರಾಜ್ಯಾದ್ಯಂತ ಈ ಒಂದು ಚಳುವಳಿ ವ್ಯಾಪಕವಾಗಿ ಹರಡುವುದಕ್ಕೆ ಅನುಕೂಲವಾಗುವ ಹಾಗೆ ಈ ಒಂದು ಸದನದ ಮೂಲಕ ಅದನ್ನು ಸೃಷ್ಟಿ ಮಾಡಿದರು ಎಂದು ಹೇಳಿದರೆ ತಪ್ಪಾಗಲಾರದು. ಸಾಧಾರಣವಾಗಿ ರೈತ ಸಂಘದ ಪದಾಧಿಕಾರಿಗಳು ಈ ಸದನದ ಸದಸ್ಯರಾಗದೇ ಇರುವುದರಿಂದ ಸಾಮಾನ್ಯವಾಗಿ ಹೊರಗಡೆಯಿಂದ ತಮ್ಮ ಹೇಳಿಕೆಗಳನ್ನು ಕೊಡುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ಸರ್ಕಾರದವರು ಏನಾದರೂ ಹೇಳಿಕೆ ಕೊಡುವುದಿದ್ದರೆ ಅದನ್ನು ಅವರು ಹೊರಗಡೆ ಕೊಟ್ಟರೆ ಒಳ್ಳೆಯದು ಎಂದು ನಾನೂ ಕೂಡ ಅಭಿಪ್ರಾಯ ಪಡುತ್ತೇನೆ. ಆದರೆ ಸರ್ಕಾರ ಆ ದಿವಸ ಸದನದ ಮೂಲಕ ಉತ್ತರವನ್ನು ಕೊಡುವ ಪ್ರಯತ್ನ ಮಾಡಿತು. ಇದನ್ನು ಇವರು ಬುದ್ಧಿಪೂರ್ವಕವಾಗಿ ಮಾಡುತ್ತಿರಬಹುದೆಂದು ನನಗನ್ನಿಸುತ್ತದೆ. ಅದಕ್ಕೆ ಸಹಾಯಕವಾಗುವ ರೀತಿಯಲ್ಲಿ ರೈತಸಂಘದ ಅಧ್ಯಕ್ಷರಾಗಿರುವ ರುದ್ರಪ್ಪನವರು ಒಂದು ಮಾತನ್ನು ಹೇಳಿದ್ದಾರೆ: ಅದು ೨೪ನೇ ತಾರೀಖಿನ ಪತ್ರಿಕೆಗಳಲ್ಲಿ ಬಂದಿದೆ. ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೂ ಕೂಡಾ ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳು ಮಾತಾಡುತ್ತಾರೆನ್ನುವ ಹಾಗೆ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. "R jya Raitha Sangha chief Sri H.S. Rudrappa has ruled out any possibility of suspending the three day old agitation in the State". ಇವತ್ತು ತೀವ್ರಗೊಳಿಸಿ ಅದನ್ನು ನಡೆಸುವುದಕ್ಕೆ ಇದು ಕಾರಣ ಎಂದು ಅವರು ಹೇಳಿದ್ದಾರೆ. ಇವಕ್ಕೆ ಯಾರು ಕಾರಣರು ಹಾಗೂ ಇದನ್ನು ಮೊಟಕು ಮಾಡಬಹುದಾಗಿತ್ತೇ ಎಂಬ ಪ್ರಶ್ನೆಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ ಎಂದು ಅವರು ಹೇಳಿದ್ದಾರೆ.

"He told Deccan Herald that Industries Minister Sri S.R. Bommai's appeal to stop agitation was not a new proposal"

ಏಕೆಂದರೆ ಇವರು ಹೀಗೆ ಮಾತನಾಡುತ್ತಾ ಬಂದಿರುವುದು ಹೊಸದೇನೂ ಅಲ್ಲ. ಆ ಒಂದು ಮಾತಿಗೆ ಯಾವ ವಿಧವಾದ ಅರ್ಥವೂ ಇಲ್ಲ. ಹೇಳುವ ಹಾಗೆ ನಡೆದುಕೊಳ್ಳುವುದಿಲ್ಲವೆಂದು ಅರ್ಥ. "We could honour his words only when the Government met the charter of demands presented by the Association, he added". ಎಂದು ಹೇಳಿದರೆ ಅವರು ಕೊಟ್ಟಿರತಕ್ಕ ಡಿಮ್ಯಾಂಡ್‌ಗಳ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಹಾಗೂ ಇವರ ಬಗ್ಗೆ ಅವರಿಗೆ ವಿಶ್ವಾಸ ಹೋಗಿದೆ ಎನ್ನುವ ಮಾತನ್ನು ಹೇಳಿದ್ದಾರೆ, ಮಾನ್ಯ ವಿರೋಧಪಕ್ಷದವರು ಇವರಲ್ಲಿ ಬಹಳ ಆತ್ಮೀಯತೆ ಇತ್ತು, ಪ್ರೇಮ ಇತ್ತು ಎಂದು ಹೇಳಿದರು. ಆ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ಅದು ನನಗೆ ಸಂಬಂಧಪಟ್ಟ ವಿಚಾರವಲ್ಲ. "Owing to illhealth, he could not meet Mr. Bommai and Chief Minister Ramakrishna Hegde but Professor Nanjundaswamy and Sundareshan would represent the Association if the Government came forward for talks". ಹೀಗೊಂದು ಹೇಳಿದ್ದಾರೆ. ಎಂದರೆ ಮಾತುಕತೆ ಆಗುವುದಕ್ಕೂ ಇವತ್ತು ಕೂಡಾ ತಯಾರು ಇಲ್ಲವೆಂದು ಅವರು ಸ್ಪಷ್ಟ ಪಡಿಸಿದ್ದಾರೆ. ಸ್ವಾಮಿ, ರುದ್ರಪ್ಪನವರು ವಯಸ್ಸಾದವರು. ಅವರೂ ಕೂಡಾ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. ಅವರೂ ಕೂಡಾ ಕೃಷಿ ಮಂತ್ರಿಗಳಾಗಿದ್ದವರು. ಅವರು ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದವರು. ರೈತರ ಸಮಸ್ಯೆಗಳ ಬಗ್ಗೆ ಬಹಳ ಕಳಕಳಿಯಿಂದ ಪ್ರಸ್ತಾಪ ಮಾಡುತ್ತಿದ್ದಾರೆ. ಅವರ ಬಗ್ಗೆ ಈಗತಾನೇ ಮಾತನಾಡಿದ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಗೌರವವನ್ನು ವ್ಯಕ್ತ ಪಡಿಸಿದ್ದಾರೆ. ಆದರೆ ಅಲ್ಲಿನ ಪದಾಧಿಕಾರಿಗಳು ಎನ್ನುವ ಮಾತನ್ನು ಹೇಳಿದರು. ಆದರೆ ಇವರ ಹೇಳಿಕೆಗಳನ್ನು ನೋಡುತ್ತಾ ಬಂದರೆ ಎಷ್ಟು ಮಟ್ಟಿಗೆ ಪ್ರಚೋದನೆಗೆ ಸರ್ಕಾರ ಅವಕಾಶವನ್ನು ಮಾಡಿಕೊಟ್ಟಿದೆ. ಹಾಗೂ ಎಷ್ಟು ಮಟ್ಟಿಗೆ ಹೊಣೆಯಾಗಿದೆ ಎಂಬುದನ್ನು ಅವರ ಮಾತಿನಿಂದಲೇ ಏನು ಪತ್ರಿಕೆಗಳಲ್ಲಿ ವರದಿಯಾಗಿದೆ ಅದನ್ನು ನೋಡಿದರೆ ಗೊತ್ತಾಗುತ್ತದೆ. "Chief Minister Ramakrishna Hegde today warned the agitating farmers". ೨೩ನೇ ತಾರೀಖು ಅವರು ಹೇಳಿದರು. ಅವರಿಗೆ ಟೆಲಿಗ್ರಾಂ ೨೪ನೇ ತಾರೀಖು ಬಂದಿರಬಹುದು. ಪದಾಧಿಕಾರಿಗಳು, ವಗೈರೆ ಎಂದು ಹೇಳಿದ್ದಾರೆ. ಮತ್ತೆ ೨೧ನೇ ತಾರೀಖು ಮುಖ್ಯಮಂತ್ರಿಗಳು ಅವರಿಗೆ ಕಳುಹಿಸಿರುವ ಟೆಲಿಗ್ರಾಂನ್ನು ಅವರು ಓದಿ ಹೇಳಿವರು.

SRI S.R. BOMMAI.—One correction. The date of the Telegram is 22nd, night.

ಶ್ರೀ ಕೆ.ಹೆಚ್. ರಂಗನಾಥ್.—೨೧ನೇ ತಾರೀಖು ಟೆಲಿಗ್ರಾಂ ಕೊಟ್ಟಿದ್ದಾರೆ. ೨೨ನೇ ತಾರೀಖು ಉತ್ತರ ಬಂದಿದೆ. ಅದಾದಮೇಲೆ ೨೩ನೇ ತಾರೀಖು ಪ್ರಸ್ತಾಪ ಮಾಡುವ ಸಮಯದಲ್ಲಿ ಎಷ್ಟು ಉತ್ತರವನ್ನು ಕೊಡಬಹುದಿತ್ತೋ ಅಷ್ಟನ್ನು ಕೊಡುವುದರ ಬದಲು ಈ ಸದನವನ್ನು ಉಪಯೋಗಿಸಿಕೊಂಡು, ಸರ್ಕಾರದ ಹೊಣೆಯನ್ನು ಹೊತ್ತಿರತಕ್ಕವರು ಈ ಮಾತನ್ನು ಆಡಿರುವುದರಿಂದ ಪ್ರಚೋದನೆ ಜಾಸ್ತಿಯಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. "ಪ್ಯಾರಲಲ್ ಗವರ್ನ್‌ಮೆಂಟ್" ಹಾಗೆ ಎನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ಪತ್ರಿಕೆಗಳಲ್ಲಿ ಇನ್ವೆಟೆಡ್ ಕಾಮಾದಲ್ಲಿ ಹಾಕಿದ್ದಾರೆ. ಇದರಿಂದ ಎಷ್ಟರಮಟ್ಟಿಗೆ ಪರಿಣಾಮ ಅವರಿಗೆ ಆಗಿರಬಹುದೆಂಬುದನ್ನು ಊಹಿಸಬಹುದಾಗಿದೆ.

"A section of the Sangha led by big landlords was virtually holding the Government servants and the people to ransome". ಈ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಅಂದಿದ್ದಾರೆ. ಸರ್ಕಾರದ ಈ ಒಂದು ಪ್ರಚೋದನೆಯಿಂದ ಆಗಿರತಕ್ಕ ಚಳುವಳಿ ಇದು. ಬಹಳ ಮಟ್ಟಿಗೆ ೨೨ನೇ ತಾರೀಖು ಟೆಲಿಗ್ರಾಂ ಬಂದಿದೆ. ೨೩ನೇ ತಾರೀಖು ಕರೆದಿದ್ದಾರೆ. ಆ ಬಗ್ಗೆ ಮಾತನಾಡತಕ್ಕದ್ದಕ್ಕೆ ಕಾಲ ಇತ್ತು. ಆ ದಿವಸ ಪ್ರಶ್ನೋತ್ತರದ ವೇಳೆ ಮುಗಿದ ಮೇಲೆ ಈ ವಿಚಾರ ಪ್ರಸ್ತಾಪಕ್ಕೆ ಬಂತು. ಈ ಬಗ್ಗೆ ಸ್ವಲ್ಪ ತಡೆದು ಎಷ್ಟು ಬೇಕೋ ಅಷ್ಟನ್ನು ಹೇಳಿ ಆ ನಂತರ ಇವರ ಜೊತೆ ಕುಳಿತು ಮಾತನಾಡಿದ್ದರೆ ಈ ಒಂದು ವಾತಾವರಣಕ್ಕೆ ರಾಜ್ಯವನ್ನು ತೆಗೆದುಕೊಂಡು ಹೋಗುವುದನ್ನು ಕಡಿಮೆ ಮಾಡಬಹುದಾಗಿತ್ತೇನೋ ಎಂದು ನನಗನ್ನಿಸುತ್ತದೆ. ಆದರೆ ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಭಾವೋದ್ರೇಕದಿಂದ ಹೆಚ್ಚು ಮಾತನಾಡಿದರು. "Replyibg to Mr. Yadiyurappa, (BJP), who urged the Government to extend the time limit for re-payment of farm loans till March 31st".

That was the request.

ಇದರ ಜೊತೆಗೆ ಈ ಸದನವನ್ನು ಪೂರ್ಣವಾಗಿ ದುರುಪಯೋಗ ಮಾಡಿಕೊಂಡಿದ್ದಾರೆ. ಅವರು ಏನು ಹೇಳಿದ್ದಾರೆಂದರೆ:–

"Mr. Hegde came down heavily on the attitude of Sangha led by Nanjundaswamy and Rudrappa and Sundaresh, and charged that they were adopting delay tactics to thwart Government's sincere efforts to evolve a solution and round table discussion".

2–p.m

ತದನಂತರ,

> "He regretted that in the name of farmers, some anti social elements were indulging in arson and looting. Some persons claiming themselves to be Raitha Sangha members were working against the Government and also to hand over liquor shop managements to them."

ಇದು ನಮಗೆ ಗೊತ್ತಿಲ್ಲದೇ ಇರುವ ವಿಚಾರ. ಇನ್ನೂ ಒಂದು ಮಾತು ಮುಂದೆ ಹೋಗಿದ್ದಾರೆ

> "It is not the business of the farmers to run liquor shops. A farmer is always a farmer, Mr. Hegde said and charged that some bootloggers and anti-social elements were agitating in the name of farmers."

ಈ ಎಲ್ಲಾ ವಿಚಾರ ನಮಗೆ ಗೊತ್ತಿಲ್ಲ. ಬಹಳ ಮಟ್ಟಿಗೆ ಅವರಿಗೆ ಗೊತ್ತಿರಬಹುದು, ಹೋಮ್ ಇಲಾಖೆಯವರಿಗೆ ಗೊತ್ತಿರಬಹುದು. ಆದರೆ is it wise to use this House to use these words against the farmers and against the proposed agitation ಇದರ ಬಗ್ಗೆ ಈ ಸದನ ವಿಚಾರ ಮಾಡಬೇಕಾಗುತ್ತದೆ. ಆದರಿಂದ, ಎಷ್ಟೋ ವಿಚಾರಗಳು ನಮಗೆ ಗೊತ್ತಾಗಬಹುದು. ಈ ಸದನದಲ್ಲಿ ಇಂಥ ಮಾತುಗಳನ್ನು ಬಳಸಿದ್ದರಿಂದ ಹೊರಗಡೆ ಒಂದು ಅಚಾತುರ್ಯ ನಡೆಯಲಿಕ್ಕೆ ಕಾರಣವಾಗಿದೆ. ಇದು ಸರ್ಕಾರದ ಮುಖ್ಯಸ್ಥರ ಕರ್ತವ್ಯವೇ, ಬುದ್ಧಿವಂತಿಕೆಯ ಲಕ್ಷಣವೇ ಎಂದು ಕೇಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮಾತುಗಳು ಪತ್ರಿಕೆಯಲ್ಲಿ ಬಂದಿದೆ. ಮೊದಲೇ ಈ ರೀತಿ ಬೆಂಕಿ ಹತ್ತಿದಂಥ ವಿಚಾರದಲ್ಲಿ ಈ ಮಾತು ಇನ್ನೂ ಹೆಚ್ಚು ಪರಿಣಾಮವನ್ನು ಬೀರಿರಬಹುದು ಎಂದು ನಾನು ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಬೂಟ್‌ಲೆಗ್ಗರ್ ಅಂಡ್ ಆಂಟಿ ಸೋಷಿಯಲ್ ಎಲಿಮೆಂಟ್ಸ್ ಎಂದು ಹೇಳಿದರು. ಸರ್ಕಾರದಲ್ಲಿ ಸ್ವಲ್ಪ ದಿವಸ ಕೆಲಸ ಮಾಡತಕ್ಕ ಅವಕಾಶ ನನಗೂ ದೊರತಿತ್ತು ಸಾಮಾನ್ಯವಾಗಿ ಕಾನ್‌ಫರೆನ್ಸ್, ಅಕ್ರಾಸ್ ದಿ ಟೇಬಲ್ ನಡೆಯತಕ್ಕ ಎಷ್ಟೋ ವಿಷಯಗಳನ್ನು ಅಷ್ಟಕ್ಕೆ ಬಿಡುತ್ತೇವೆ ಅದನ್ನು ಹೊರಗಡೆ ತಿಳಿಸುವುದಿಲ್ಲ. ಅದು ಸೌಜನ್ಯ. ಸದನದಲ್ಲಿ ಹೇಳಿದರೆ ಅದರ ಬಗ್ಗೆ ಕೋರ್ಟಿಗೆ ಹೋಗಲು ಅವಕಾಶವಿಲ್ಲ. ಹೊರಗಡೆ ಹೇಳಿದ್ದರೆ ಅದರ ಬಗ್ಗೆ ಹೌದೋ, ಅಲ್ಲವೋ ಎಂದು ಕೋರ್ಟಿನಲ್ಲಿ ಅಥವಾ ಮತ್ತೆಲ್ಲೋ ಕ್ರಮ ತೆಗೆದುಕೊಳ್ಳಲಿಕ್ಕೆ ಅನುಕೂಲವಾಗುತ್ತಿತ್ತು ಈ ರೀತಿ ಮಾಡಿದ್ದರಿಂದ, ನಾಲ್ಕು ದಿವಸದವರೆಗೆ ಹೋಗಿದೆ. ಇದು ಕೊನೆಗೆ ಏನಾಗಿದೆ ಎಂದರೆ, ಸಾಧಾರಣ ಒಬ್ಬ ವ್ಯಕ್ತಿ ಓಡಾಡಲಿಕ್ಕೆ ಸಾಧ್ಯವಾಗದ ಪರಿಸ್ಥಿತಿ ಬಂದಿದೆ. ತಮ್ಮ ಕರ್ತವ್ಯ ಏನು ? ತಾವು ಗುಂಡು ಹಾಕುವುದಿಲ್ಲ, ಲಾಠಿಚಾರ್ಜ್ ಮಾಡಬೇಡಿ ಎಂದು ಹೇಳಿದ್ದೀರಿ. ಅದನ್ನು ಮಾಡಬೇಡಿ ಎನ್ನುವುದೇ ನಮ್ಮ ಉದ್ದೇಶ. ಆದರೆ, ಇವೊತ್ತು ಸಾರ್ವಜನಿಕರಿಗೆ ಸಾರಿಗೆ ವ್ಯವಸ್ಥೆ ಮಾಡಬೇಕಾದಂಥ ಹೊಣೆಗಾರಿಕೆ ತಮ್ಮದು ಇದೆ. ಇವೊತ್ತು ಚಳುವಳಿ ನಡೆಯುತ್ತದೆಂದು ಬಸ್ಸುಗಳನ್ನು ನಿಲ್ಲಿಸಲಿಕ್ಕೆ ಆಗುವುದಿಲ್ಲ. ಕಲ್ಲುಗಳನ್ನು ಹೊಡೆಯುತ್ತಾರೆ ಅದರಿಂದ ಹಾನಿಯಾಗುತ್ತದೆ ಎಂದರೆ ಅದರ ಜವಾಬ್ದಾರಿ ಹೊರಬೇಕಾಗುತ್ತದೆ, ಸರ್ಕಾರದಿಂದ ಬಸ್‌ಗಳನ್ನು ಓಡಾಡಿಸತಕ್ಕ ವ್ಯವಸ್ಥೆ ಮಾಡಬೇಕಾಗುತ್ತದೆ. ಈಗಾಗಲೇ ಒಂದು ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಹೇಳಿದ್ದೀರಿ. ಸಾರ್ವಜನಿಕರಿಗೆ

ಅನುಕೂಲ ಮಾಡಿಕೊಡತಕ್ಕ ಹೊಣೆಗಾರಿಕೆ ತಮ್ಮ ಮೇಲೆ ಇದೆ. ಈ ಸಂದರ್ಭದಲ್ಲಿ ಒಂದು ವಿಚಾರ ವನ್ನು ನಾನು ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ನೆನ್ನೆ ತಾನೆ ನಮ್ಮ ಡಿಜಿಪಿ ಅವರನ್ನು ನೋಡುವ ಅವಕಾಶ ಬಂತು. ಹಿರಿಯ ಸದಸ್ಯರಾಗಿದ್ದ ಮಾನ್ಯ ಕೆಂಚಪ್ಪನವರ ಮಗಳು ನೆನ್ನೆ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನಲ್ಲಿ ತೀರಿಹೋದರು, ಅಳಿಯ ಮಗಳು ನಾಗಮಂಗಲದಲ್ಲಿ ಕೆಲಸ ಮಾಡುತ್ತಿದ್ದರು, ಶವ ಸಂಸ್ಕಾರಕ್ಕೆ ಹೋಗಬೇಕಾಯಿತು, ಅವರು ಇಲ್ಲಿ ಇರಲಿಲ್ಲ. ಅವರ ಆಫೀಸಿಗೆ ಹೋಗಿ ಸಹಾಯ ಕೇಳಿದೆ. ಸಾರ್ವಜನಿಕ ಪ್ರೀತಿಯನ್ನು ಗಳಿಸಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕೆಲವು ವಿಚಾರಗಳನ್ನು ಹೇಳಿದ್ದಾರೆ. ತಾವು ಅವರಿಗೆ ಒಂದು ಕಡೆ ಏನೂ ಮಾಡುವುದಿಲ್ಲ ಎಂದು ಹೇಳಿದ ಮೇಲೆ ಸಾರ್ವಜನಿಕ ಸಂಚಾರ ವ್ಯವಸ್ಥೆಯ ಬಗ್ಗೆ ಮತ್ತು ಸಾರ್ವಜನಿಕರಿಗೆ ಯಾವುದೇ ರೀತಿಯಲ್ಲಿ ಅನಾನುಕೂಲವಾಗದ ರೀತಿಯಲ್ಲಿ ನೋಡಿಕೊಳ್ಳತಕ್ಕದ್ದು ತಮ್ಮ ಜವಾಬ್ದಾರಿ ಇದೆ. ಆ ಕರ್ತವ್ಯವನ್ನು ತಾವು ನಿರ್ವಹಿಸಲೇಬೇಕಾಗುತ್ತದೆ. ಅದರ ಬಗ್ಗೆ ಯಾವ ರೀತಿ ಮಾಡುತ್ತಿ ರೆಂಬುದು ತಮಗೆ ಸಂಬಂಧಪಟ್ಟ ವಿಚಾರ.

ಶ್ರೀ ಕೆ.ಜಿ. ಮಹೇಶ್ವರಪ್ಪ.—ಹೇಗೆ ಮಾಡಬೇಕೆಂದು ಸಲಹೆ ಕೊಡಿ.

ಶ್ರೀ ಕೆ.ಹೆಚ್. ರಂಗನಾಥ್.—ತಾವು ಮಾತನಾಡುವಾಗ ಸಲಹೆ ಕೊಡಿ. ನನಗೆ ತಿಳಿದದ್ದು ನಾನು ಹೇಳುತ್ತೇನೆ. ಇನ್ನು ಬಳ್ಳಾರಿ ಜಿಲ್ಲೆಯಲ್ಲಿ ರೈತರ ದಾಂಧಲೆಯಾಗಿ ೨೫ ಜನರಿಗೆ ಗಾಯ ಆಗಿದೆ. ಈ ವಿಚಾರ ಇವೊತ್ತಿನ ಪತ್ರಿಕೆಯಲ್ಲಿ ಬಂದಿದೆ. ಅದರ ಪದಾಧಿಕಾರಿಗಳ ದಸ್ತಗಿರಿಯಾಗಿದೆ. ಇನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆದಿರತಕ್ಕದ್ದು ಪತ್ರಿಕೆಯಲ್ಲಿ ವರದಿಯಾಗಿದೆ. ಜನತಾ ಪಕ್ಷದ ಸುಮಾರು ಒಂದು ಸಾವಿರ ಜನಕಾರ್ಯಕರ್ತರು ಅವರನ್ನು ಬಿಟ್ಟುಬಿಡಿ ಎಂದು ಪೋಲೀಸ್ ಸ್ಟೇಷನ್‌ಗೆ ಹೋಗಿ ಹೇಳಿರುವುದು ಇದೆ. ಇದನ್ನು ನೋಡಿದರೆ ಏನು ಅನ್ನಿಸುತ್ತದೆ ಅಂದರೆ ಸಂಚು ಇರಬಹುದು ಎಂದು ಕಾಣುತ್ತದೆ. ಇದಕ್ಕೆ ಪ್ರೇರಕ ಶಕ್ತಿ ಸರ್ಕಾರವೇ ಆಗಿರಬೇಕೋ ಏನೋ ಎಂದು ಸಾರ್ವಜನಿಕರ ಮನಸ್ಸಿನ ಮೇಲೆ ಆಗತಕ್ಕದ್ದು ಸ್ವಾಭಾವಿಕ. ಇವೊತ್ತು ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿ ಕೈ ಮುಗಿದು ಕೇಳಿಕೊಳ್ಳಬಹುದು. ಆದರೆ ಯಾವ ರೀತಿ ವ್ಯವಸ್ಥೆ ಮಾಡ ಲಿಕ್ಕೆ ಸಾಧ್ಯವಾಗುತ್ತದೆ ಎಂಬುದು ಮುಖ್ಯವಾದ ವಿಷಯ. ಸರ್ಕಾರದ ಹೊಣೆ ಹೊತ್ತಿರತಕ್ಕಂಥ ತಾವು ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಸ್ವಾಮಿ, ಕರ್ನಾಟಕದಲ್ಲಿ ಇಂತಹ ಪರಿಸ್ಥಿತಿ ಎಂದೂ ಆಗಿರಲಿಲ್ಲ. ಒಂದು ನೀತಿಯನ್ನು ಮಾತ್ರ ಪ್ರತಿಪಾದನೆ ಮಾಡಲಿಕ್ಕೆ ಹೊರಟಿದ್ದಾರೆ. ಗುಂಡು ಹೊಡೆಯಲಿಲ್ಲ, ಲಾಠಿಚಾರ್ಜ್ ಮಾಡಲಿಲ್ಲ ಎಂದು ಹೇಳುತ್ತಾರೆ. ಆ ರೀತಿ ಹೇಳಿದ ಮೇಲೆ ತಾವು ಅಧಿಕಾರಕ್ಕೆ ಬಂದ ಮೇಲೆ ಎಲ್ಲಿಯೂ ಗುಂಡು ಹಾಕಿ, ಲಾಠಿ ಚಾರ್ಜ್ ಮಾಡಿಲ್ಲವೇ ? ಸರ್ಕಾರ ಇವೊತ್ತು ಏನು ಕೆಲಸ ಮಾಡಿದೆ ಎಂದು ನೋಡುವುದಾದರೆ, ಇವೊತ್ತು ಸರ್ಕಾರ ಇಲ್ಲವೇನೋ ಎನ್ನುವ ಪರಿಸ್ಥಿತಿಗೆ ಬಂದು ನಿಂತಿದ್ದೇವೆ. ಈ ಮನೆಯ ಸದಸ್ಯರಾದಂಥ ಮಾನ್ಯ ಹುಚ್ಚಮಾಸ್ತಿ ಗೌಡರಿಗೆ ಪೋಲೀಸರ ಎದುರಿನಲ್ಲಿಯೇ ಕೊಲೆ ಪ್ರಯತ್ನ ನಡೆದಾಗ.........

(ಗೊಂದಲ)

ಉಪಾಧ್ಯಕ್ಷರು.—ತಾವು ಮುಗಿಸಿ.

ಶ್ರೀ ಕೆ.ಹೆಚ್. ರಂಗನಾಥ್.—ಪೋಲೀಸರು ನೋಡಿಕೊಂಡಿರತಕ್ಕ ಪರಿಸ್ಥಿತಿ ಬಂದಿರುವಾಗ ಚಿಕ್ಕಮಗಳೂರಿನಲ್ಲಿ ಒಂದು ಸಾವಿರ ಜನರು ಹೋಗಿ ಅವರನ್ನು ಬಿಟ್ಟು ಬಿಡಿ ಎಂದು ಹೇಳಿದರೆ ಅರ್ಥ ಏನು ? ಪತ್ರಿಕಾ ವರದಿಯ ಪ್ರಕಾರ ಹೇಳಿದೆ. ಇವೊತ್ತು ಜನರನ್ನು ಸೆರೆ ತೆಗೆದುಕೊಂಡ ಮೇಲೆ ಕಾನೂನು ಪ್ರಕಾರ ಒಬ್ಬ ಪ್ರಿಸನರ್‌ಗೆ ಏನು ರಕ್ಷಣೆ ಕೊಡಬೇಕು, ಏನು ವ್ಯವಸ್ಥೆ ಮಾಡಬೇಕು. ಅದನ್ನು ಮಾಡತಕ್ಕದ್ದು ಸರ್ಕಾರದ ಕರ್ತವ್ಯ. ಅದು ಇಲ್ಲದೇ ಇದ್ದರೆ, ಬಹಳ ಕಷ್ಟವಾಗುತ್ತದೆ. ಇವೊತ್ತು ಏನಾಗಿದೆ, ಜನರನ್ನು ಅರೆಸ್ಟ್ ಮಾಡಿ ಅವರಿಗೆ ಸರಿಯಾದಂತಹ ವ್ಯವಸ್ಥೆ ಮಾಡತಕ್ಕ ಕೆಲಸ ಆಗಿಲ್ಲ. ಸಾರ್ವಜನಿಕರಿಗೆ ತೊಂದರೆಯನ್ನು ಕೊಡತಕ್ಕ ಕೆಲಸ ನಡೆದಿದೆ. ಇದು ಕೊನೆಯಾಗತಕ್ಕ ಪರಿಸ್ಥಿತಿ ಕಂಡುಬರುವುದಿಲ್ಲ. ಇದನ್ನು ಮುಂದುವರಿಸುವುದೇ ಸರ್ಕಾರದ ವರ್ತನೆಯಾಗಿದೆ. ಸರ್ಕಾರ ಉದ್ದೇಶ ಪೂರ್ವಕವಾಗಿ ರಾಜ್ಯದಲ್ಲಿ ಈ ರೀತಿ ಮಾಡುತ್ತಿದ್ದಾರೆ. ರಾಜ್ಯದಲ್ಲಿ ರೈತರು ಮತ್ತು ರೈತ ಕಾರ್ಮಿಕರಿಗೆ ಭೇದ ಮಾಡತಕ್ಕದ್ದು ನಡೆಯುತ್ತಿದೆ. ಈ ರೀತಿ ಮಾಡುವುದರಿಂದ ನಿಮ್ಮಲ್ಲಿ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಹುಟ್ಟು ಹಾಕತಕ್ಕ ಅಶಾಂತಿಯನ್ನು ಹುಟ್ಟುಹಾಕ ತಕ್ಕ ಉದ್ದೇಶದಿಂದ ಸರ್ಕಾರ ಬುದ್ಧಿ ಪೂರ್ವಕವಾಗಿ ಮಾಡುತ್ತಾ ಇರುವುದರಿಂದ, ಇದರ ಬಗ್ಗೆ ವ್ಯಾಪಕವಾಗಿ ಚರ್ಚೆ ಆಗಬೇಕಾಗುತ್ತದೆ. ಇಲ್ಲದೆ ಹೋದರೆ ನಾವು ಎಲ್ಲಿಗೆ ಬಂದು ನಿಲ್ಲುತ್ತೇವೆಂದು

ಹೇಳಲಿಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಹಾಗೆಯೇ ಈ ವಿಚಾರದ ಬಗ್ಗೆ ಮಾನ್ಯ ಸದಸ್ಯರಾದ ಕೃಷ್ಣನ್‌ರವರು ನೋಟೀಸ್ ಕೊಟ್ಟಿದ್ದಾರೆ. ಇದೇ ಒಂದು ನಿಲುವಳಿ ಸೂಚನೆಯನ್ನು ಮಾನ್ಯ ಬಂಗಾರಪ್ಪನವರೂ ಸಹ ಕೊಟ್ಟಿದ್ದಾರೆ. ಅವರು ಈ ಬಗ್ಗೆ ಪ್ರಸ್ತಾಪ ಮಾಡುವರೆಂದು ನಾನು ತಿಳಿದುಕೊಂಡಿದ್ದೇನೆ. ಸ್ವಾಮಿ, ಇವತ್ತು ತಾವು ಪತ್ರಿಕೆಯನ್ನು ಓದಿದ್ದರೆ ಗೊತ್ತಾಗುತ್ತದೆ. ಇವತ್ತಿನ ಪತ್ರಿಕೆಯಲ್ಲಿ ''ಹಸಿರನ್ನು ಸುಟ್ಟು ಕೆಂಪು ಚೆಲ್ಲಿದ ಪೋಲೀಸರು'' ಎಂದು ದಪ್ಪ ಅಕ್ಷರಗಳಲ್ಲಿ ವರದಿಯಾಗಿದೆ. ಮಾನ್ಯ ಸಚಿವರು ಉತ್ತರ ಕೊಡುವಾಗ ಇದರ ಬಗ್ಗೆ ಹೇಳುತ್ತಾರೆಂದು ಅಂದುಕೊಂಡಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮೆಜಿಸ್ಟೀರಿಯಲ್ ಎನ್‌ಕ್ವೈರಿಗೆ......

ಶ್ರೀ ಕೆ. ಹೆಚ್. ರಂಗನಾಥ್.—ಮೆಜಿಸ್ಟೀರಿಯಲ್ ಎನ್‌ಕ್ವೈರಿ ಮಾಡುವುದು ಮುಖ್ಯ ಪ್ರಶ್ನೆಯಲ್ಲ. ಕೊಲೆ ಆಗುತ್ತಿದ್ದುದನ್ನು ನೋಡಿಕೊಂಡು ನಿಂತುಕೊಳ್ಳುವ ಪರಿಸ್ಥಿತಿ ಬಂದಿದೆಯೆಂದು ಹೇಳುತ್ತಿದ್ದೇನೆ. ಪೋಲೀಸ್ ಇಲಾಖೆಯಲ್ಲಿ ಕೂಡ ನಾವು ಏನು ಮಾಡಬೇಕೋ, ಏನು ಮಾಡಬಾರದೋ ಎಂದು ಹಿಂದುಮುಂದು ನೋಡಬೇಕಾದ ಪರಿಸ್ಥಿತಿ ಬಂದಿದೆ. ಪೋಲೀಸ್ ಸಿಬ್ಬಂದಿಯಲ್ಲಿ ಇವತ್ತು ಎರಡು ಭಾಗವಾಗಿದೆ, ಈ ವಿಚಾರವನ್ನು ನಾನು ಈ ಹಿಂದೆಯೇ ಪ್ರಸ್ತಾಪ ಮಾಡಬೇಕೆಂದು ಇಚ್ಛೆಪಟ್ಟಿದ್ದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಹಿಂದೆ ರಾಜಾಜಿನಗರದಲ್ಲಿ ಆಟೋರಿಕ್ಷಾ ಗಲಾಟೆ ಆದಾಗ ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿಗೆ ಹೋಗಿದ್ದರು. ಆ ಸ್ಥಳಕ್ಕೆ ಮಾನ್ಯ ಮುಖ್ಯ ಮಂತ್ರಿಗಳೇ ಹೋಗಿ ಒಬ್ಬ ಸಬ್ ಇನ್‌ಸ್ಪೆಕ್ಟರ್‌ನ್ನು ಸಸ್ಪೆಂಡ್ ಮಾಡಿದರು. ಕೇವಲ ಒಂದು ಗಲಾಟೆ ಆಯಿತೆಂದರೆ ಮಾನ್ಯ ಮುಖ್ಯ ಮಂತ್ರಿಗಳೇ ಅಲ್ಲಿಗೆ ಹೋಗಬೇಕೇ ? ಆ ಕೆಲಸವನ್ನು ಇಲ್ಲೇ ಮಾಡುವುದಕ್ಕಾಗುವುದಿಲ್ಲವೇ ? ಇದು ಹೇಗಿದೆ ಎಂದರೆ ಸಾರು ಆಗಿದೆಯೋ ಎಂಬುದನ್ನು ಸೌಟಿನಲ್ಲಿ ನೋಡುವ ಬದಲು ಕೈಯನ್ನು ಆ ಸಾರಿನೊಳಕ್ಕೆ ಇಟ್ಟಂತಾಗಿದೆ. ತಮಗೆ ಎಲ್ಲ ಅಧಿಕಾರವೂ ಇದೆ. ಇಲ್ಲೇ ಕುಳಿತು ಯಾವ ಕೆಲಸವನ್ನು ಬೇಕಾದರೂ ಮಾಡಬಹುದು. ಆದರೆ ಸಾರ್ವಜನಿಕರಿಂದ ಭೇಸ್ ಎನಿಸಿಕೊಳ್ಳುವುದಕ್ಕೋಸ್ಕರ ಈ ರೀತಿ ಅಧಿಕಾರಿ ವರ್ಗವನ್ನು ಈ ಒಂದು ಮಟ್ಟಕ್ಕೆ ತರುವುದಾದರೆ ಅಧಿಕಾರಿಗಳು ಏನೂ ಮಾಡದೇ ಇರುವಂಥ ಪರಿಸ್ಥಿತಿ ಬರುತ್ತದೆ. ಇವತ್ತು ರಾಜ್ಯದಲ್ಲಿ ಸರ್ಕಾರ ಇದೆಯೇ ? ಅಧಿಕಾರಿವರ್ಗ ಇದೆಯೇ ? ಎನ್ನುವ ಪರಿಸ್ಥಿತಿ ಬಂದಿದೆ. ಇವತ್ತಿನ ವಾತಾವರಣದಲ್ಲಿ ಹೇಳುವುದಾದರೆ, ಕಳೆದ ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ವಿಚಾರವನ್ನು ಪತ್ರಿಕೆಗಳು ಅಗ್ರಲೇಖನಗಳನ್ನು ಹಾಕಿದರು. ಇವತ್ತು ಸರ್ಕಾರವೇ ಒಂದು ಕನ್‌ಫ್ರಂಟೇಷನ್‌ಗೆ ಅವಕಾಶವನ್ನು ಕೊಡುತ್ತಿದೆ ಎನ್ನುವ ಭಾವನೆ ಜನರಲ್ಲಿ ಬರುತ್ತಿದೆ. ಎಲ್ಲ ಘಟನೆಗಳಿಗೂ ಸರ್ಕಾರವೇ ಕಾರಣವೆಂದು ಹೇಳಬೇಕಾಗಿದೆ. ಈಗಲೂ ಕೂಡ ಕಾಲಾವಕಾಶ ಮೀರಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇವತ್ತಿನ ಸಂದರ್ಭವನ್ನು ಚೆನ್ನಾಗಿ ಪರಿಶೀಲಿಸಿ ತಮ್ಮ ನಿಲುವನ್ನು ಬದಲಾವಣೆ ಮಾಡಿಕೊಳ್ಳಬೇಕು. ಮುಂದೆ ಆಗುವಂಥ ಈ ಪರಿಸ್ಥಿತಿಯನ್ನು ಈಗಲೇ ಸಭೆಯ ಮುಖಾಂತರ ಹೇಳುವುದು ಸರಿಯಲ್ಲ. ಇವತ್ತಿನ ನಿಲುವನ್ನು ಸರ್ಕಾರ ಏನು ತಳೆದಿದೆ ಇದು ಸರ್ಕಾರಕ್ಕೆ ಒಳ್ಳೆಯದಲ್ಲ. ಇದಕ್ಕೆ ವಿರೋಧ ಪಕ್ಷದವರು ಅವಕಾಶವನ್ನು ಕೊಡುವುದಿಲ್ಲವೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಸಭಾಧ್ಯಕ್ಷರೇ, ನಾನೂ ಮತ್ತು ನನ್ನ ಗೆಳೆಯ ಶ್ರೀಯುತ ಪಂಪಾಪತಿಯವರು ಈ ಒಂದು ನಿಲುವಳಿ ಸೂಚನೆಯನ್ನು ಸಭೆಯ ಮುಂದೆ ತಂದಿದ್ದೇವೆ, ಕೆಲವು ಮುಖ್ಯವಾದ ವಿಷಯಗಳನ್ನು ಈ ಸದನದ ಮತ್ತು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಆದರೆ ನಾವು ಮಾತನಾಡುವುದಕ್ಕೆ ಮುಂಚಿತವಾಗಿ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ. ಅನಂತರ ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ವೀರಪ್ಪ ಮೊಯಿಲಿಯವರು ಮತ್ತು ಮಾನ್ಯ ರಂಗನಾಥ್‌ರವರು ಮಾತನಾಡಿದ್ದಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಹಲವಾರು ಮುಖ್ಯ ಸಮಸ್ಯೆಗಳು ಉದ್ಭವವಾಗುತ್ತದೆಂದು ಅನಿಸುತ್ತದೆ.

ಮೊದಲನೆಯದಾಗಿ, ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಬಂದಿದೆ. ಎಂಬುದನ್ನು ಬಹುಶಃ ಎಲ್ಲರೂ ಒಪ್ಪಿಕೊಳ್ಳುತ್ತಾರೆ, ಅದೇ ರೀತಿ ೨೬ನೇ ತಾರೀಖಿನಿಂದ ಸುಮಾರು ೨೫ ಸಾವಿರ ಜನ ರೈತರು ಬಂಧನಕ್ಕೆ ಒಳಗಾಗಿದ್ದಾರೆಂಬುದನ್ನೂ ಕೂಡ ಒಪ್ಪಿಕೊಳ್ಳುತ್ತಾರೆ. ಕಾಂಗ್ರೆಸ್ ಸರ್ಕಾರವಾಗಲೀ, ಜನತಾ ಸರ್ಕಾರವಾಗಲಿ ಅಥವಾ ಬೇರೆ ಯಾವುದೇ ಸರ್ಕಾರವಾಗಲಿ, ಅವರ ಕೊಡತಕ್ಕ ಅಂಕಿಸಂಖ್ಯೆಗಳನ್ನು ನಾವು ಪೂರ್ತಿಯಾಗಿ ನಂಬುವುದಕ್ಕಾಗುವುದಿಲ್ಲ. ೨೫ ಸಾವಿರ ಜನ

ರೈತರು ಏನು ಬಂಧನಕ್ಕೆ ಒಳಗಾಗಿದ್ದಾರೆ ಅವರ ಸಂಖ್ಯೆ ೩೦ ಸಾವಿರಕ್ಕೆ ಮುಟ್ಟಿದ್ದರೂ ಅದನ್ನೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಏನೇ ಆಗಲಿ, ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡುವ ಸೌಜನ್ಯವನ್ನು ಮಾನ್ಯ ಮುಖ್ಯಮಂತ್ರಿಗಳು ತೋರಿಸಿದ್ದಾರೆ. ಹಿಂದೆ ಇಂಥ ಸಮಸ್ಯೆಗಳು ಬಂದಾಗ ಮಾನ್ಯ ಮಂತ್ರಿಗಳು ಎದ್ದು ನಿಂತುಕೊಂಡು ಈ ರೀತಿಯ ಹೇಳಿಕೆಗಳನ್ನು ಕೊಡುತ್ತಿರಲಿಲ್ಲ. ಆದರೆ ನಾವು ಇಲ್ಲಿ ಏನಾದರೂ ಮಾತನಾಡುತ್ತಿರು ವಾಗ ಮಾನ್ಯ ಮುಖ್ಯ ಮಂತ್ರಿಗಳು ಏನೋ ಹೇಳಿಬಿಡುತ್ತಿದ್ದರು, ಆದರೆ ಈಗಿನ ಮಾನ್ಯ ಮುಖ್ಯ ಮಂತ್ರಿಗಳು ಇಂಥ ವಿಚಾರಗಳ ಬಗ್ಗೆ ಎದ್ದು ನಿಂತು ಒಂದು ಹೇಳಿಕೆಯನ್ನು ಕೊಟ್ಟು ನಂತರ ನಾವು ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತಿರುವುದು ಒಂದು ಸಂತೋಷದ ಸಂಗತಿ: ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ರಂಗನಾಥ್ ಅವರು ಮಾತನಾಡುವಾಗ ''ಪ್ರಚೋದನೆ'' ಎನ್ನುವ ಮಾತನ್ನು ಹೇಳಿದರು. ಮಾನ್ಯ ಮೊಯಿಲಿಯವರು ಹೇಳಿದ್ದನ್ನೂ ಕೂಡ ಕೇಳಿದೆ. ಈ ರೀತಿಯ ಚಳುವಳಿಗೆ ಸರ್ಕಾರದವರೇ ಪ್ರಚೋದನೆಯನ್ನು ಮಾಡಿದ್ದಾರೆ ಎಂದು ಹೇಳಿದರು....

ಶ್ರೀ ಕೆ. ಹೆಚ್. ರಂಗನಾಥ್.—ಅದು ಪತ್ರಿಕೆಯಲ್ಲಿ ಬಂದಿರುವುದು.

ಶ್ರೀ ಎಂ. ಎಸ್. ಕೃಷ್ಣನ್.—ಪತ್ರಿಕೆಯಲ್ಲಿ ಏನು ಬಂದಿದೆ ಎಂಬುದನ್ನು ನಾನೂ ಓದಿದ್ದೇನೆ. ಆದರೆ ನಿಮ್ಮ ಅಭಿಪ್ರಾಯದಲ್ಲಿ ಪ್ರಚೋದನೆ ಎನ್ನುವ ಮಾತನ್ನು ಹೇಳಿದ್ದೀರಿ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಹೇಳಿದ್ದು ಪತ್ರಿಕೆಯಲ್ಲಿ ''Mr. Hegde said and charged that some bootleggers and anti-social elements were agitating in the name of farmers'' ಎಂದು ಹೇಳಿದ್ದಾರೆ.

ಶ್ರೀ ಎಸ್. ನಾರಾಯಣರಾವ್.—ಅಲ್ಲಿ ಯಾರು ತಡೆಹಿಡಿಯುತ್ತಿದ್ದಾರೆಂಬುದನ್ನು ಹೋಗಿ ನೋಡಿಕೊಂಡು ಬಂದರೆ ಗೊತ್ತಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ರುದ್ರಪ್ಪನವರು ಬೂಟ್ ಲೆಗ್ಗರ್ ಅಲ್ಲ, ಮಾನ್ಯ ಸುಂದರೇಶ್‌ರವರು ಬೂಟ್ ಲೆಗ್ಗರ್ ಅಲ್ಲ. ಮಾನ್ಯ ನಂಜುಂಡಸ್ವಾಮಿಯವರು ಬೂಟ್ ಲೆಗ್ಗರ್ ಅಲ್ಲ. ಮಾನ್ಯ ನಾರಾಯಣರಾವ್‌ರವರಿಗೆ ಏನು ಗೊತ್ತಿದೆ ?

ಶ್ರೀ ಎಂ. ಎಸ್. ಕೃಷ್ಣನ್.—ಹಾಗಾದರೆ ''ಪ್ರಚೋದನೆ'' ಎನ್ನುವ ಪದವನ್ನು ನಾನು ಒಪ್ಪಿ ಕೊಳ್ಳುವುದಕ್ಕೆ ತಯಾರಿಲ್ಲ ಎಂದರೆ, ನೀವು ಏನು ಬೇಕಾದರೂ ಮಾಡಿಕೊಳ್ಳಿ, ನಾವು ಒಂದು ಕೈ ನೋಡಿಕೊಳ್ಳುತ್ತೇವೆಂದು ಸರ್ಕಾರದವರು ಹೇಳಿದ್ದರೆ, ಇದು ಒಂದು ರೀತಿಯ ಪ್ರಚೋದನೆ ಆಗುತ್ತಿತ್ತು. ಆದರೆ ಸರ್ಕಾರ ಇದನ್ನು ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡಿದೆ ಎಂಬುದರಲ್ಲಿ ಯಾರಿಗೂ ಸಂಶಯ ಇಲ್ಲ, ಸರ್ಕಾರದವರು ಕೊಟ್ಟಿರತಕ್ಕ ರಿಯಾಯಿತಿಗಳ ಬಗ್ಗೆ ರೈತರಿಗೆ ಪೂರ್ತಿ ಯಾಗಿ ತೃಪ್ತಿ ಆಗದೇ ಇರಬಹುದು. ಆದರೆ ಇದರಬಗ್ಗೆ ಚರ್ಚೆ ಮಾಡಲು ಸರ್ಕಾರದವರು ೨–೩ ಸಾವಿರ ರೈತ ಸಂಘದವರಿಗೆ ಕರೆ ನೀಡಿದ್ದಾರೆ. ೨೧ನೇ ತಾರೀಖು ಬರುತ್ತವೆಂದು ಹೇಳಿದರು. ಆವತ್ತು ಬರಲಿಲ್ಲ, ಮತ್ತೆ ೨೩ನೇ ತಾರೀಖು ಬರುತ್ತೇವೆ ಎಂದು ಹೇಳಿದರು ಆವತ್ತೂ ಬರಲಿಲ್ಲ. ನಂತರ ಟೆಲಿಗ್ರಾಂನ್ನೂ ಕೂಡ ಕಳಿಸಿದ್ದಾರೆ. ಇದನ್ನೆಲ್ಲಾ ನೋಡಿದರೆ ಇದರಲ್ಲಿ ಯಾರದು ತಪ್ಪಿದೆ ಎಂಬುದು ಗೊತ್ತಾಗುತ್ತದೆ. ರೈತ ಸಂಘದವರು ತಾವು ಚಳುವಳಿಯನ್ನು ಮಾಡುತ್ತೇವೆಂದು ಹೇಳಿದ್ದುಂಟು. ಆದರೆ ಇದನ್ನು ಸರ್ಕಾರದ ಪ್ರಚೋದನೆ ಎಂದು ಹೇಳುವುದಾದರೆ ಅಷ್ಟು ಸಮಂಜಸವಾಗುವುದಿಲ್ಲ. ಮಾನ್ಯ ಸದಸ್ಯರಾದ ರಂಗನಾಥ್‌ರವರು ಹೇಳಿದ್ದನ್ನು ನಾನು ಹೆಚ್ಚು ಗಮನವಿಟ್ಟು ಕೇಳುತ್ತಿದ್ದೆ. ಪ್ಯಾರಲಲ್ ಗವರ್ನಮೆಂಟ್ ಎಂದು ಏತಕ್ಕೆ ಹೇಳಿದರು ? ಹಿಂದೆ ಮಾನ್ಯ ಸದಸ್ಯರಾದ ರಂಗನಾಥ್‌ರವರೂ ಮತ್ತು ಮಾನ್ಯ ಮೊಯ್ಲಿಯವರೂ ಮಂತ್ರಿಗಳಾಗಿದ್ದವರು. ಆಗ ಸರ್ಕಾರೀ ಅಧಿಕಾರಿಗಳು ಹಳ್ಳಿಗಳ ಒಳಗಡೆ ಬರಬಾರದೆಂದು ಬೋರ್ಡ್‌ಗಳನ್ನು ಹಾಕುತ್ತಿದ್ದರು. ಹಿಂದೆ ಮಾನ್ಯ ದೇವರಾಜು ಅರಸರು, ಮಾನ್ಯ ಗುಂಡೂರಾಯರು, ಮಾನ್ಯ ನಿಜಲಿಂಗಪ್ಪನವರೂ ಮುಖ್ಯಮಂತ್ರಿಗಳಾಗಿದ್ದಾಗ...

ಶ್ರೀ ಕೆ. ಹೆಚ್. ರಂಗನಾಥ್.—ಕಳೆದ ಸಾರಿ ಚಳುವಳಿ ಆದಾಗ ನಾನು ಅಲ್ಲಿ ಅಧ್ಯಕ್ಷನಾಗಿದ್ದು ಈ ಚಳುವಳಿಯಲ್ಲಿ ಭಾಗವಹಿಸುವ ಅವಕಾಶ ನನಗೆ ಇರಲಿಲ್ಲ. ಶಿವಮೊಗ್ಗದಲ್ಲಿ ಬೋರ್ಡ್‌ಗಳನ್ನು ಹಾಕಿದ್ದರು. ತಮಗೆ ಬೇಕಾದರೆ ಆಗಿನ ಪೋಲೀಸ್ ರೆಕಾರ್ಡ್ಸ್‌ನ್ನು ತರಿಸಿ ನೋಡಿದರೆ ತಮಗೆ ಗೊತ್ತಾ ಗುತ್ತದೆ. ಅಧಿಕಾರಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ಬರುವಂತೆಯೇ ಇಲ್ಲ ಎನ್ನುವ ಮಟ್ಟಕ್ಕೆ ಬಂದ.

ಬಿಟ್ಟರೆ ಅದು ಸರಿಯೇ ? ತಾವು ವಿವೇಚನಪರರಾದವರು ಸರ್ಕಾರವನ್ನು ಟೀಕೆ ಮಾಡುತ್ತೀರೋ ಅಥವಾ ಸರ್ಕಾರಕ್ಕೆ ಬೆಂಬಲವನ್ನು ಕೊಡುತ್ತೀರೋ.

ಶ್ರೀ ಕೆ.ಹೆಚ್. ರಂಗನಾಥ್.—ಅದು ಸರಿಯೆಂದು ನಾವು ಹೇಳುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಪ್ಯಾರಲಲ್ ಗೌರ್ನಮೆಂಟ್ ನಡೆಸುತ್ತಿದ್ದಾರೆಂದು ಹೇಳಿದ ಮಾತು ಸರಿಯೇ ? ಆ ರೀತಿ ನಡೆಸಬೇಕೆಂದು ನಾವು ಎಂದಿಗೂ ಹೇಳುವುದಿಲ್ಲ. ಆ ಸಂದರ್ಭ ಬಂದಾಗ ನಮ್ಮ ನಿಲುವು ಏನು ಎನ್ನುವುದನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಸರ್ಕಾರದ ವಿಫಲತೆಯನ್ನು ಹೇಳಬೇಕಾಗಿದೆ. ನಾಲ್ಕು ದಿವಸಗಳಿಂದ ಒಂದು ಸರಿಯಾದ ಆಡಳಿತ ವ್ಯವಸ್ಥೆ ಇಲ್ಲದಿರುವುದರಿಂದ ಸರ್ಕಾರ ಇದೆಯೋ ಇಲ್ಲವೋ ಎನ್ನುವ ಅನುಮಾನ ಬಂದಿರುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಂ.ಎಸ್. ಕೃಷ್ಣನ್.—ತಮ್ಮ ವಿಚಾರಧಾರೆ ಏನು ಇದೆ, ಅದು ಬೇರೆ ಕಡೆ ಹೋಗಿಬಿಡುತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್.—ನನ್ನನ್ನು ಮಿಸ್ ಕೋಟ್ ಮಾಡಬೇಡಿ.

ಶ್ರೀ ಎಂ.ಎಸ್. ಕೃಷ್ಣನ್.—ನಾನು ನಿಮ್ಮನ್ನು ಮಿಸ್‌ಕೋಟ್ ಮಾಡುತ್ತಿಲ್ಲ. ನಿಮ್ಮನ್ನು ಮಿಸ್‌ಕೋಡ್ ಮಾಡಿದ್ದರೆ ದಯವಿಟ್ಟು ನನ್ನನ್ನು ಕ್ಷಮಿಸಿಬಿಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳ ಭಾಷಣದ ಮೇಲೆ ಮಾನ್ಯ ರಂಗನಾಥ್‌ರವರು ವ್ಯಾಖ್ಯಾನ ಮಾಡಿದ್ದಾರೆ. ಅದೇ ರೀತಿ ಮಾನ್ಯ ಕೃಷ್ಣನ್‌ರವರು ಹೇಳುತ್ತಿದ್ದಾರೆ ಹೇಳಲಿ ನಾವು ಕೇಳೋಣ.

ಶ್ರೀ ಎಂ.ಎಸ್. ಕೃಷ್ಣನ್.—ತಾವು ಮಿಸ್‌ಕೋಟ್ ಮಾಡುತ್ತಿದ್ದೀರಿ ಎನ್ನುವುದು ನನ್ನ ಅಭಿಪ್ರಾಯ. ನಾನು ಏನು ಹೇಳುವುದೆಂದರೆ ಪ್ಯಾರಲಲ್ ಗೌರ್ನಮೆಂಟ್ ಎಂದು ಹೇಳಿದರೆ ಅದು ಒಂದು ಪ್ರಚೋದನೆಯಾಗುತ್ತದೆ. ಇಲ್ಲಿ ಪ್ಯಾರಲಲ್ ಗೌರ್ನಮೆಂಟ್ ಎಂದು ಹೇಳದಿದ್ದರೂ ಸರ್ಕಾರದ ಕೆಲಸಕ್ಕೆ ಅಡ್ಡಿ ಆತಂಕಗಳು ಉಂಟಾದರೆ ಸುಸೂತ್ರವಾಗಿ ಸರ್ಕಾರ ಕೆಲಸ ಮಾಡಲು ಸಾಧ್ಯವಾಗುವುದೇ ಇಲ್ಲ, ಸರ್ಕಾರದವರು ಯಾವ ರೀತಿಯೂ ಮಾತನಾಡುವಂತೆಯೇ ಇಲ್ಲ. ಹಾಗಾದರೆ ಸರ್ಕಾರ ಇದ್ದು ಏನು ಪ್ರಯೋಜನವಿಲ್ಲ. ಇಂಥ ಸರ್ಕಾರಕ್ಕೆ ಶಂಡ ಸರ್ಕಾರ ಎಂದು ಹೇಳಬೇಕಾಗುತ್ತದೆ. ಈ ರೀತಿ ಒಂದು ಪರಿಸ್ಥಿತಿ ಬಂದಿರುವುದರಿಂದ, ಇದು ಒಂದು ಪ್ರಚೋದನೆ ಎನ್ನುವ ಮಾತನ್ನು ಹೇಳಿದ್ದಾರೆ. ಅವರಿಗೆ ಹೇಳುವ ಬದಲು, ಮಾನ್ಯ ನಂಜುಂಡಸ್ವಾಮಿಯವರು ರೈತ ಸಂಘಗಳಿಗೆ ಹೇಳಬೇಕು, ನಾವು ಪ್ರಚೋದನೆ ಮಾಡಲಿಕ್ಕೆ ಹೋಗುತ್ತಿಲ್ಲ, ಚರ್ಚೆ ಮಾಡಲಿಕ್ಕೆ ಹೇಳಿದ್ದೇವೆ ಎಂದು. ಚರ್ಚೆ ಮಾಡಲಿಕ್ಕೆ ತಯಾರಾಗದೆ ಹೋದರೆ ರೈತರ ಯಾವ ಸಮಸ್ಯೆಗಳನ್ನು ತೆಗೆದುಕೊಂಡು ಚಳುವಳಿ ಮಾಡಬೇಕೆಂದು ಹೇಳುತ್ತೀರಿ ? ಸಾಮಾನ್ಯ ರೈತರ ಮೇಲೆ ಹಾಗೂ ಬಡ ರೈತರ ಮೇಲೆ ನಿಮಗೆ ಕಾಳಜಿ ಇದೆಯೇ ಎಂದು ಕೇಳುತ್ತೇನೆ. ನಮ್ಮ ಅಭಿಪ್ರಾಯದಲ್ಲಿ ಈ ಒಂದು ಸಂಸ್ಥೆ ಏನು ಇದೆ, ರೈತ ಸಂಘ ಏನು ಇದೆ ಇದು ಸಾಮಾನ್ಯ ರೈತರಿಗೆ ಮಾತ್ರ ಅನ್ವಯಿಸತಕ್ಕಂಥದ್ದಾಗಿರುತ್ತದೆ. ಯಾವ ರೈತರೇ ಇರಲಿ ಎಲ್ಲಾ ಒಂದೇ ಸಾಲ, ಮನ್ನ ಪೂರ್ಣವಾಗಿ ಮನ್ನ ಮಾಡಬೇಕೆಂದು ಹೇಳುತ್ತಿದ್ದಾರೆ. ಪೂರ್ಣವಾಗಿ ಎಲ್ಲವನ್ನು ಮನ್ನ ಮಾಡಿದರೆ, ಯಾವ ರೀತಿ ಸರ್ಕಾರ ನಡೆಯುತ್ತದೆ ? Incentive subsidy of 5 per cent of the value of own agricultural produce marketed by farmers through the primary agricultural societies if the proceeds are utilised to clear co-operative loans, write-off arrears on a variety of Government loans due from farmers including interest and penal interest. ಇದರಿಂದಾಗಿ ಎಷ್ಟೆಷ್ಟೋ ಅನುಕೂಲವಾಗಿದೆ. ಸ್ವಾಮಿ, ನನ್ನ ಗನಿಸುತ್ತದೆ ಕೃಷಿ ಕಾರ್ಮಿಕರಿಗೆ ಯಾರೇ ಸರ್ಕಾರಕ್ಕೆ ಬಂದಿರಲಿ ಅವರಿಗೆ ಒಂದು ನಯಾಪೈಸೆ ಸಾಲವನ್ನು ಕೊಡತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ಈವತ್ತಿನ ದಿವಸ ಅನುಕೂಲತೆಯನ್ನು ಪಡೆದಿರುವವರು ಎಂದರೆ ಸಾಮಾನ್ಯ ರೈತರು, ಹೆಚ್ಚಿನ ಅನುಕೂಲತೆಯನ್ನು ಪಡೆದಿರುವವರು ಎಂದರೆ ಶ್ರೀಮಂತ ರೈತರು. ಶ್ರೀಮಂತ ರೈತರು ಬದುಕಕೂಡದೇ ಎಂದು ಪ್ರಶ್ನೆ ಹಾಕಬಹುದು. ನನ್ನ ಅಭಿಪ್ರಾಯದಲ್ಲಿ ಶ್ರೀಮಂತ ರೈತರಿಗೆ ಕೊಡುವ ಶಕ್ತಿ ಇದ್ದರೆ ಏತಕ್ಕೆ ಆಗಬಾರದು. ಹಿಂದೆ ಶ್ರೀಮಾನ್ ದೇವರಾಜ ಅರಸ್‌ರವರು ಇದ್ದಾಗಲೂ ಇದೇ ವಾದವನ್ನು ಮಂಡಿಸಿದ್ದೆ. ರೈತರ ಲೀಡರ್ ನಿಜವಾಗಿಯೂ ಯಾರ ಪರವಾಗಿ ಇರತಕ್ಕಂಥಾದ್ದು ಎಂದರೆ ಸಾಮಾನ್ಯ ರೈತರ ಪರವಾಗಿ ಇದ್ದಾರೆಯೇ ಹೊರತು ಕೃಷಿ ಕಾರ್ಮಿಕರ ಪರವಾಗಿ ಇಲ್ಲ ಅವರನ್ನು ತೀರ ಶೋಷಣೆಗೆ ಒಳಗಾಗಿದ್ದಾರೆ. ಯಾವುದೇ ಸರ್ಕಾರವಿರಲಿ

ಶ್ರೀಮಂತರ ರೈತರ ಪರವಾಗಿ ಇರಲಿಕ್ಕೆ ಸಾಧ್ಯವಿಲ್ಲ. ಸರ್ಕಾರದ ಇಷ್ಟೊಂದು ಕನ್‌ಸೆಷನ್ ಕೊಟ್ಟರೋ, ಮಾತುಕತೆ ನಡೆಸಿದರೂ ಅವರು ತಾಳಿರುವ ಧೋರಣೆ ಅಷ್ಟೊಂದು ಸಮಂಜಸವಾಗಿಲ್ಲ. ಅವರಿಗೆ ಚಳುವಳಿಯನ್ನು ನಡೆಸಲಿಕ್ಕೆ ಹಕ್ಕು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಈಗ ನಡೆಸುತ್ತಿರುವ ಚಳುವಳಿ ಶ್ರೀಮಂತ ರೈತರ ಚಳುವಳಿ ಬಡರೈತರ ಚಳುವಳಿಯಲ್ಲ. ಈ ಚಳುವಳಿಯನ್ನು ಖಂಡಿತವಾಗಿಯೂ ಸಮಾಜಘಾತುಕ ಚಳುವಳಿ ಎಂದು ಹೇಳಬೇಕಾಗುತ್ತದೆ. ಇಲ್ಲಿ ಎಲ್ಲಾ ಶ್ರೇಣಿಯ ಜನರು ಇದ್ದಾರೆ. ನಮಗೆ ಗೊತ್ತಿದೆ ನಾವು ಅನೇಕ ಚಳುವಳಿಯನ್ನು ನಡೆಸಿದ್ದೇವೆ. ಬಡರೈತರ ಚಳುವಳಿ ಎಂದು ಹೇಳಿಕೊಂಡು ಕೆಲವರು ಕೆಟ್ಟವರು ಸೇರಿಕೊಂಡಿರುತ್ತಾರೆ. ಇವರು ಸೇರಿಕೊಂಡಿರುವುದರಿಂದ ಇಲ್ಲದ ಅನಾಹುತ ನಡೆಯುತ್ತಿದೆ. ಅದನ್ನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ಚಳುವಳಿಯಲ್ಲಿ ಅಂಥವರು ಯಾರು ಇರುವುದಿಲ್ಲವೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಚಳುವಳಿ ಎಂದರೆ ಇಂಥವರಿಂದಲೇ ನಡೆಯುತ್ತದೆ ಎಂದು ಹೇಳಲಿಕ್ಕೂ ಸಾಧ್ಯವಾಗುವುದಿಲ್ಲ. ಮುಖ್ಯವಾಗಿ ನನಗೆ ಕಂಡುಬಂದಿರುವುದು ಏನೆಂದರೆ ರೈತರು ಕೆಲವು ಸೈದ್ಧಾಂತಿಕವಾದ ಅಂಶಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ ಅದು ಸರಿಯಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅವರು ಬೆಳೆಯುತಕ್ಕ ಬೆಳೆಗೆ ನ್ಯಾಯವಾದ ಬೆಲೆಯನ್ನು ಕೊಡಬೇಕೆಂದು ಹೇಳಿದರೆ ಎಂಥಹವರು ಒಪ್ಪಿಕೊಳ್ಳಬೇಕಾಗುತ್ತದೆ. ಅಗ್ರಿಕಲ್ಚರ್ ಪ್ರೈಸ್ ಕಮಿಷನರ್‌ರವರು ಏನು ರೇಟ್ ಫಿಕ್ಸ್ ಮಾಡುತ್ತಾರೋ ಅದೇ ಅಂತ್ಯ ಎಂದು ತಿಳಿದುಕೊಂಡರೆ ಹೇಗೆ? ಪ್ರೈಸ್ ಕಮಿಷನರ್‌ರವರು ಎಲ್ಲವನ್ನು ಯೋಚನೆ ಮಾಡಬೇಕು. ಸರಿಯಾದ ರೀತಿಯಲ್ಲಿ ಆಲೋಚನೆ ಮಾಡಿ ನಿಗದಿ ಮಾಡಬೇಕು. ಉತ್ಪಾದನೆಯ ವೆಚ್ಚ ಏನಾಗುತ್ತದೆ ಪೆಸ್ಟಿಸೈಡ್ಸ್ ಎಷ್ಟಾಗುತ್ತದೆ, ಗೊಬ್ಬರದ ವೆಚ್ಚ ಏನಾಗುತ್ತದೆ, ಕಾರ್ಮಿಕರ ಖರ್ಚು ಮತ್ತಿತರ ಎಲ್ಲ ಖರ್ಚುಗಳನ್ನು ಲೆಕ್ಕಾಚಾರ ಮಾಡಿ ಸರಿಯಾದ ಬೆಲೆಯನ್ನು ನಿಗದಿ ಮಾಡಬೇಕು. ವೈಜ್ಞಾನಿಕ ದೃಷ್ಟಿಯಿಂದ ನೋಡಿ ಬೆಲೆಯನ್ನು ಕೊಡಬೇಕು ಎನ್ನುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಅಗ್ರಿಕಲ್ಚರ್ ಪ್ರೈಸ್ ಮೂಲಕ ಬೆಲೆಯನ್ನು ನಿಗದಿ ಮಾಡಬೇಕು ಎನ್ನುವುದು ಸರ್ಕಾರಕ್ಕೆ ಗೊತ್ತಿದೆ ಆದರೆ ಬೆಲೆಯನ್ನು ನಿಗದಿ ಮಾಡತಕ್ಕಂಥದ್ದು ಕೇಂದ್ರದ ಒಂದು ಮಿತಿಗೆ ಬರುವುದರಿಂದ ಅವರು ಬೆಲೆಯನ್ನು ನಿಗದಿ ಮಾಡುವಾಗ ಸರಿಯಾದ ರೀತಿಯಲ್ಲಿ ಮಾಡಲು ಯೋಚನೆ ಮಾಡಬೇಕು. ಅದೇ ರೀತಿ ಎಲ್ಲಾ ಕೂಲಿಕಾರರ ಬಗ್ಗೆ ಹೇಳಿದ್ದಾರೆ. ಅದೇರೀತಿ ಎನ್‌ಕ್ರೋಚ್‌ಮೆಂಟ್ ವ್ಯವಸ್ಥೆಯ ಬಗ್ಗೆ ಒಂದು ಸೂಚನೆ ಇದೆ. ಬಹಳ ದೊಡ್ಡ ಶ್ರೀಮಂತರು ಎನ್‌ಕ್ರೋಚ್‌ಮೆಂಟ್ ಮಾಡಿರುತ್ತಾರೆ. ಹಾಗೂ ಬಡರೈತರು ಎನ್‌ಕ್ರೋಚ್‌ಮೆಂಟ್ ಮಾಡಿರುತ್ತಾರೆ. ಆದರೆ ಬಡರೈತರು, ಸಾಮಾನ್ಯ ರೈತರು ಯಾರು ಎನ್‌ಕ್ರೋಚ್‌ಮೆಂಟ್ ಮಾಡಿರುತ್ತಾರೋ ಅವರ ಬಗ್ಗೆ ಸಹಾನುಭೂತಿಯನ್ನು ತೋರಿಸಬೇಕೆಂದು ಹೇಳುತ್ತೇನೆ. ಅಂದರೆ ಸ್ಮಾಲ್ ಫಾರ್ಮರ್ಸ್, ಮಾರ್ಜಿನಲ್ ಫಾರ್ಮರ್ಸ್ ಅವರ ಬಗ್ಗೆ ವಿರುದ್ಧವಾಗಿ ಹೇಳುತ್ತೇನೆಂದು ಅಲ್ಲ. ಈ ವಿಚಾರದಲ್ಲಿ ಸಣ್ಣ ಸಣ್ಣ ರೈತರು ಏನು ಇದ್ದಾರೆ ಅವರ ಬಗ್ಗೆ ಸಹಾನುಭೂತಿಯನ್ನು ತೋರಿಸಬೇಕೆಂದು ಹೇಳುತ್ತೇನೆ. ಶ್ರೀಮಾನ್ ನಂಜುಂಡಸ್ವಾಮಿಯವರು ಕೃಷಿ ಕಾರ್ಮಿಕರ ಬಗ್ಗೆ ಏನೊಂದು ಮಾತನ್ನು ಹೇಳಲಿಲ್ಲ. ಕೃಷಿ ಕಾರ್ಮಿಕರಿಗೆ ಕೂಲಿಯನ್ನು ಸಹ ನಿಗದಿ ಮಾಡಿಲ್ಲ. ಕೃಷಿ ಕಾರ್ಮಿಕರು ಎಂದರೆ ಸಾಮಾನ್ಯವಾಗಿ ಹರಿಜನ–ಗಿರಿಜನರೇ ಹೆಚ್ಚಿನ ಪ್ರಮಾಣದಲ್ಲಿ ಬರತಕ್ಕಂಥವರಾಗಿರುತ್ತಾರೆ. ಅವರು ಕೂಲಿ ಕೆಲಸ ಮಾಡುವವರು ತೀರ ಶೋಷಣೆಗೆ ಒಳಗಾಗಿದ್ದಾರೆ. ಅಂಥವರ ಬಗ್ಗೆ ಏತಕ್ಕೆ ಕಾಳಜಿಯನ್ನು ತೋರಿಸಲಿಲ್ಲವೆಂದು ಕೇಳುತ್ತೇನೆ. ರೈತರ ಬಗ್ಗೆ ಕಾಳಜಿ ಇದ್ದರೆ ಅವರ ಬಗ್ಗೆ ಪ್ರೀತಿ ವಿಶ್ವಾಸವಿದ್ದರೆ ಅವರ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ಆದರೆ ಅವರ ದೃಷ್ಟಿಕೋನವೇ ಬೇರೆ. ಅವರ ಧೋರಣೆಯಲ್ಲಿ ಹೇಗಾದರೂ ಮಾಡಿ ಈ ಸರ್ಕಾರವನ್ನು ಉರುಳಿಸಲೇಬೇಕು ಎನ್ನುವ ಅಭಿಪ್ರಾಯ ಇಟ್ಟುಕೊಂಡಿರುತ್ತಾರೆ. ಇಲ್ಲಿ ಒಂದು ವಾದ ಇದೆ. ಇಲ್ಲಿ ಏನು ಹೇಳಿದ್ದಾರೆ ಎಂದರೆ ರೈತ ಮುಖಂಡರು ಹೇಳುವುದು ಇಷ್ಟೇ ಕರ್ನಾಟಕ ರೈತ ಸಂಘದ ಸಂಚಾಲಕರಾದ ಪ್ರೊಫೆಸರ್ ನಂಜುಂಡ ಸ್ವಾಮಿಯವರು ಅವರು ಹೇಳಿರುವ ಮಾತಿನಲ್ಲಿ ಹೇಳುವುದಾದರೆ ''ಇಂದು ಕರ್ನಾಟಕ ಎರಡನೆಯ ಸ್ವಾತಂತ್ರ ಆರಂಭ ಹೋರಾಟ'' ೨೬ನೇ ತಾರೀಖು ನಡೆಯುವ ಚಳುವಳಿಯ ಎರಡನೇ ಸ್ವಾತಂತ್ರ್ಯ ಆರಂಭದ ಹೋರಾಟ ಎಂಬುದಾಗಿ ಹೇಳಿರುತ್ತಾರೆ.

೨–೩೦ ಪಿ.ಎಂ.

ಅಪ್ಪನನ್ನೇ ಮರತಂತಹ ಸರ್ಕಾರದ ವಿರುದ್ಧ ಹೋರಾಟ ಎಂದು ಇಲ್ಲಿ ಹೇಳಿದ್ದಾರೆ ಅಂದರೆ ಇಲ್ಲಿ ಯಾರು ಅಪ್ಪ, ಯಾರು ಅಮ್ಮ, ಯಾರ ವಿರುದ್ಧ ಇವರ ಹೋರಾಟ ? ನನಗೆ ತಿಳಿದಂತೆ ಈ ಸಂಘದವರು ಕೃಷಿ ಕಾರ್ಮಿಕರ ಬಗ್ಗೆ ಒಂದು ಮಾತನ್ನೂ ಹೇಳಿಲ್ಲ. ಆದರೆ ಇನ್ನೊಂದು ಕಡೆ ಇದು

ಅಪ್ಪನನ್ನು ಮರೆತ ಸರ್ಕಾರ ಎಂದು ಹೇಳಿದ್ದಾರೆ. ಈ ಸರ್ಕಾರವನ್ನು ಕೆಳಕ್ಕೆ ಇಳಿಸಬೇಕು ಎಂದು ಇವರು ಹೇಳುವುದಾದರೆ, ಬೇರೆ ಇನ್ನೊಂದು ಸರ್ಕಾರವನ್ನು ಅಧಿಕಾರಕ್ಕೆ ತರಬೇಕೆಂದು ಇವರು ಚಳುವಳಿ ಮಾಡುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ. ಈ ಒಂದು ಅರ್ಥ ಬರುವ ರೀತಿಯಲ್ಲಿ ಇಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಇಂತಹ ಹೇಳಿಕೆಯನ್ನು ಕೊಟ್ಟರೆ ಎಂತಹ ಸರ್ಕಾರವಾದರೂ ಯೋಚನೆ ಮಾಡಬೇಕಾಗುತ್ತದೆ. ರೈತರಿಗೋಸ್ಕರ ಇವರು ಚಳುವಳಿ ಮಾಡುತ್ತಿದ್ದಾರೋ ಅಥವಾ ರಾಜಕೀಯ ಮಾಡುವುದಕ್ಕೆ ಚಳುವಳಿ ಮಾಡುತ್ತಿದ್ದಾರೋ ಅಥವಾ ಈ ಸರ್ಕಾರವನ್ನು ಉರುಳಿಸಲು ಚಳುವಳಿ ಮಾಡುತ್ತಿದ್ದಾರೋ ಎಂಬಿತಕ್ಕಂಥ ಅನುಮಾನ ಬರುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಇವರು ಹೋಗುತ್ತಿರುವುದು ಕೆಟ್ಟ ಹಾದಿ ಎಂದು ಹೇಳಬೇಕಾಗುತ್ತದೆ. ಇಂತಹ ಚಳುವಳಿ ಬೇಕಾಗಿರಲಿಲ್ಲ. ನಮ್ಮದೂ ಒಂದು ರೈತ ಸಂಘ ಇದೆ. ಆದರೆ ಅದು ಇಷ್ಟು ಬಲಶಾಲಿಯಾಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮ್ಮ ಸಂಘದವರು ಕೆಲಸ ಮಾಡುತ್ತಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ನಮ್ಮ ಪಂಪಾಪತಿಯವರು ಕಾರ್ಮಿಕರ ಮುಖಂಡರಾಗಿ ಈ ರೈತ ಸಂಘದ ಕೆಲಸವನ್ನೂ ಸಹ ನೋಡಿಕೊಳ್ಳುತ್ತಿದ್ದಾರೆ. ಅದೇರೀತಿ ಗುಲ್ಬರ್ಗಾ, ಬಿಜಾಪುರ, ರಾಯಚೂರು ಮುಂತಾದ ಕಡೆಗಳಲ್ಲಿ ನಮ್ಮ ರೈತ ಸಂಘದ ಕೆಲಸ ನಡೆಯುತ್ತಿದೆ. ನಾವು ಇವತ್ತಿನ ದಿವಸ ಈ ಒಂದು ರೈತ ಸಂಘಧವರಿಗೆ ಬೆಂಬಲ ಕೊಡುವುದಕ್ಕೆ ತಯಾರಿಲ್ಲ. ಏಕೆಂದರೆ ನಮ್ಮ ರೈತ ಸಂಘದವರು ಮೂಲಭೂತವಾಗಿ ಕೃಷಿ ಕಾರ್ಮಿಕರ ಬಗ್ಗೆ ಹಾಗೂ ಬಡ ರೈತರ ಅನುಕೂಲಕ್ಕೋಸ್ಕರ ಏನೊಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೋ ಅದನ್ನು ಇವರು ತಮ್ಮ ಬೇಡಿಕೆಗಳಲ್ಲಿ ಸೇರಿಸಿಲ್ಲ. ಈ ಕಾರಣದಿಂದ ಇವರ ಜೊತೆ ಸೇರಿಕೊಂಡು ಶ್ರೀಮಂತ ರೈತರಿಗೆ ಅನುಕೂಲ ಮಾಡುವುದಕ್ಕೆ ನಾವು ತಯಾರಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ತಾವು ರೈತ ಸಂಘದವರನ್ನು ಮಾತುಕತೆಗೆ ಕರೆಸಿದಾಗ, ನಮ್ಮ ರೈತ ಸಂಘದವರನ್ನು ಸಹ ಏತಕ್ಕೆ ಕರೆಸುವುದಿಲ್ಲ ? ಈ ಹಿಂದೆ ಬೇರೆಯವರು ಬಂದರೆ ನಾವು ಸರ್ಕಾರದ ಜೊತೆ ಮಾತುಕತೆ ನಡೆಸುವುದಿಲ್ಲವೆಂದು ಆ ಸಂಘದವರು ಹೇಳಿದರೆಂಬ ಕಾರಣದಿಂದ ಮುಖ್ಯಮಂತ್ರಿಗಳು ನಮ್ಮ ಸಂಘದವರನ್ನು ಪ್ರತ್ಯೇಕವಾಗಿ ಕರೆಸಿ ಚರ್ಚೆ ನಡೆಸಿದರು. ಆ ಸಮಯದಲ್ಲಿ ಮಾನ್ಯ ಕಕ್ಕಿಲಾಯ ಅವರು ಮಾತನಾಡಿದರು. ಒಂದು ಮುಖ್ಯವಾದ ವಿಚಾರವೆಂದರೆ ಬಡವರಿಗೆ ಸಂಬಂಧಪಟ್ಟ ಯಾವುದೇ ವಿಚಾರ ಬರಲಿ, ಅದಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡಲು ಐ.ಎನ್.ಟಿ.ಯು.ಸಿ., ಎ.ಐ.ಟಿ.ಯು.ಸಿ., ಬಿ.ಎಂ.ಎಸ್., ಹೆಚ್.ಎಂ.ಎಸ್., ಮುಂತಾದ ಎಲ್ಲಾ ಸಂಘಗಳು ಒಂದೆಡೆ ಸೇರುತ್ತವೆ. ಐ.ಎನ್.ಟಿ.ಯು.ಸಿ.ನವರು ನ್ಯಾಷನಲ್ ಕ್ಯಾಂಪೇನ್ ಕಮಿಟಿಗೆ ಮಾತ್ರ ಬರುವುದಿಲ್ಲ. ಉಳಿದಂತೆ ಬೇರೆ ವಿಷಯಗಳು ಬಂದಾಗ ಎಲ್ಲರೂ ಒಂದುಗೂಡುತ್ತಾರೆ. ಒಟ್ಟಿನಲ್ಲಿ ನಾನು ಕೇಳಿಕೊಳ್ಳುವುದು ಇಷ್ಟೆ. ನಾವು ಈ ರೈತಸಂಘದವರನ್ನು ಕರೆಸಿ ಚರ್ಚೆ ಮಾಡುವಾಗ ಬೇರೆ ಎಲ್ಲಾ ಸಂಘಗಳನ್ನೂ ಸಹ ಕರೆಸಬೇಕು. ಈ ಸಂಘಕ್ಕೆ ಸಾಕಷ್ಟು ಪ್ರಭಾವ ಇದೆ ಎಂಬ ಕಾರಣದಿಂದ ಕೇವಲ ಆ ಸಂಘದ ಅಭಿಪ್ರಾಯದಂತೆ ತಾವು ತೀರ್ಮಾನ ಕೈಗೊಳ್ಳುವುದು ಸರಿಯಲ್ಲ. ತಾವು ಎಲ್ಲರನ್ನೂ ಕರೆಸಿ ಚರ್ಚೆ ಮಾಡಿ ಅಂತಿಮವಾಗಿ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಮತ್ತೊಂದು ಮುಖ್ಯ ಸಂಗತಿ ಎಂದರೆ, ಈ ರೈತಸಂಘದ ಮೇಲೆ ದಬ್ಬಾಳಿಕೆ, ದೌರ್ಜನ್ಯ ನಡೆದಿದೆ ಹಾಗೂ ಇದು ಪೋಲೀಸ್ ರಾಜ್ಯವಾಗಿದೆ ಎಂಬ ಅಭಿಪ್ರಾಯ ಬರುವ ರೀತಿಯಲ್ಲಿ ಇಲ್ಲಿ ಮಾತುಕತೆ ನಡೆಯಿತು. ಸರ್ಕಾರ ಈ ರಾಜ್ಯದಲ್ಲಿ ಇದೆಯೋ ಎಂದು ಕೇಳಿದರು. ರಾಜ್ಯ ಅಂದ ಮೇಲೆ State is an instrument of Oppression. ತಾವು ಲೆನಿನಿಜಂ ಮತ್ತು ಮಾರ್ಕ್ಸಿಜಂ ಓದಿದ್ದೀರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ತಾವು ಓದಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. State is an instrument of Oppression. That Oppression is going to be used against whom is the question. Are you going to use it in favour of the poor people, agricultural workers and the working class, downtrodden or are you going to use it in favour of richer section of the society against poorer section of the people ? This is the main question... ಇದರೊಳಗಿನ ಮುಖ್ಯವಾದ ಪ್ರಶ್ನೆ ಎಂದರೆ, ಯಾರೇ ಅಧಿಕಾರಕ್ಕೆ ಬರಲಿ ಇದನ್ನು ಉಪಯೋಗ ಮಾಡಬೇಕಾಗಿ ಬರುತ್ತದೆ. ನಾವು ಇದನ್ನು ಉಪಯೋಗ ಮಾಡುವುದು ಯಾರ ವಿರುದ್ಧ ಎಂದರೆ, ಕಾಳಸಂತೆಕೋರರ ಮೇಲೆ, ಕೊಲೆ ಮಾಡುವವರ ಮೇಲೆ, ದರೋಡೆ ಮಾಡುವವರ ಮೇಲೆ ಹಾಗೂ ಶೋಷಣೆ ಮಾಡುವವರ ಮೇಲೆ. ಇಂತಹವರ ವಿರುದ್ಧ ಇದನ್ನು ಉಪಯೋಗ ಮಾಡುತ್ತೇವೆ ಹಾಗೂ ಇಂತಹವರನ್ನು ಜೈಲಿಗೆ ಹಾಕುತ್ತೇವೆ, ಆದರೆ ಈಗ ನಮ್ಮ ರಾಜ್ಯದಲ್ಲಿ ಅಂತಹ ಪರಿಸ್ಥಿತಿ

ಏನೂ ಬಂದಿಲ್ಲ the instrument of Oppression is not yet total in favour of the people ಈ ಸರ್ಕಾರ ಹಾಗೂ ಹೀಗೂ ಅಧಿಕಾರದಲ್ಲಿದೆ, ಸಮಯಕ್ಕೆ ತಕ್ಕಂತೆ ಇದೆ.

SRI A. LAKSHMISAGAR.—This Government is for Oppressed, depressed.

SRI M.S. KRISHNAN.—I would like to be. If it is so, ಆ ರೀತಿ ಇದ್ದರೆ ಪೋಲೀಸರು ಮೊನ್ನೆ ವಿಡಿಯಾ ಇಂಡಿಯಾ ಕಾರ್ಖಾನೆ ಕಾರ್ಮಿಕರನ್ನು ದಬಾದಬಾ ಎಂದು ಹೊಡೆಯುತ್ತಿರಲಿಲ್ಲ. ಪೋಲೀಸರು ಕಾರ್ಮಿಕರನ್ನು ಹೊಡೆದ ಮೇಲೆ ಕಾರ್ಮಿಕರು ಪೋಲೀಸರ ಮೇಲೆ ಕಲ್ಲುಗಳನ್ನು ಎಸೆದರು. ಆ ಸಂದರ್ಭದಲ್ಲಿ ನಾನೂ ಸಹ ೩ ದಿವಸಗಳ ಕಾಲ ಉಪವಾಸ ಕುಳಿತಿದ್ದೆ. ಪೋಲೀಸರೇ ಮೊದಲು ಹೊಡೆದದ್ದು. ಆಮೇಲೆ ವಿಧಿ ಇಲ್ಲದೆ ಕಾರ್ಮಿಕರು ಅವರ ಕಡೆಗೆ ಕಲ್ಲು ತೂರಿದರು.

ಉಪಾಧ್ಯಕ್ಷರು.—ತಾವು ಮುಗಿಸಿ.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರಕ್ಕೆ ನಾನು ತಮ್ಮ ಮೂಲಕ ಹೇಳುವುದಿಷ್ಟೆ, ಈ ಪ್ರಕರಣವನ್ನು ದೊಡ್ಡದು ಮಾಡುವುದು ಬೇಡ, ಅರೆಸ್ಟ್ ಆದವರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಅವರಿಗೆ ಯಾವ ತೊಂದರೆಯನ್ನೂ ಕೊಡಬಾರದು. ಆದಷ್ಟು ಬೇಗ ಅವರನ್ನು ಬಿಟ್ಟು ಬಿಡಬೇಕು. ರೈತರ ಸಂಘದವರೊಡನೆ ಸರ್ಕಾರದವರು ಆದಷ್ಟು ಬೇಗ ಮಾತುಕತೆ ನಡೆಸಬೇಕು. ಇಂತಹ ಸಂದರ್ಭದಲ್ಲಿ ವಾದವಿವಾದಕ್ಕೆ ಅವಕಾಶ ಇರಬಾರದು. ತಾವು ಎಲ್ಲ ರೈತರ ಸಂಘಗಳವರನ್ನು ಮಾತುಕತೆಗೆ ಕರೆಸಬೇಕು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಎಲ್ಲ ಪಕ್ಷಗಳ ಮುಖಂಡರನ್ನು ಕರೆಸಿ ಮಾತನಾಡಬೇಕು. ಏಕೆಂದರೆ ಎಲ್ಲರಿಗೂ ರೈತರ ಬಗ್ಗೆ ವಿಶ್ವಾಸವಿದೆ. ಆದ್ದರಿಂದ ವಿರೋಧಪಕ್ಷದವರನ್ನು ಹಾಗೂ ಆಳುವ ಪಕ್ಷದ ಪ್ರತಿನಿಧಿಗಳನ್ನು ಕರೆಸಿ ಚರ್ಚೆ ಮಾಡುವುದರ ಮೂಲಕ ಆದಷ್ಟು ಬೇಗ ಇದನ್ನು ಇತ್ಯರ್ಥಗೊಳಿಸಬೇಕು ಹಾಗೂ ಒಂದು ಒಳ್ಳೆಯ ವಾತಾವರಣ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಈ ದಿನದ ಬೇರೆ ಎಲ್ಲ ಕಾರ್ಯ ಕಲಾಪಗಳನ್ನು ಮುಂದಕ್ಕೆ ಹಾಕುವುದರ ಮೂಲಕ ಈ ಒಂದು ನಿರ್ಣಯವನ್ನು ಈ ಸದನದ ಮುಂದೆ ಮಂಡಿಸುವುದರ ಮೂಲಕ ಇದರ ಮೇಲಿನ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ಅಭಿನಂದಿಸುತ್ತೇನೆ.

ಉಪಾಧ್ಯಕ್ಷರು.—ಚರ್ಚೆಗೆ ಇನ್ನೂ ಅವಕಾಶ ಕೊಟ್ಟಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಆ ರೀತಿ ಭಾವಿಸುತ್ತೇನೆ. ಬೇರೆ ಎಲ್ಲಾ ಕಾರ್ಯಕಲಾಪಗಳನ್ನು ಮುಂದಕ್ಕೆ ಹಾಕಿ ಸಾರ್ವಜನಿಕ ಹಿತದೃಷ್ಟಿಯಿಂದ ಜರೂರಾಗಿ ಈ ವಿಷಯದ ಮೇಲಿನ ಚರ್ಚೆಗೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ.

ಉಪಾಧ್ಯಕ್ಷರು.—ವಿವರವಾದ ಚರ್ಚೆಗೆ ಇನ್ನೂ ಅವಕಾಶ ಕೊಟ್ಟಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇದು ತಮ್ಮ ಮನಸ್ಸಿಗೆ ಹಿಡಿಸದಿದ್ದರೆ ನಾನೇನು ಮಾಡಲಿ. ಪರಿಸ್ಥಿತಿ ಆ ರೀತಿ ಇದೆ.

ಉಪಾಧ್ಯಕ್ಷರು.—ತಾವು ಇದಕ್ಕೆ ಸಂಬಂಧಪಟ್ಟ ವಿಷಯವನ್ನು ಎತ್ತಲಿಕ್ಕೆ ಮಾತ್ರ ಈಗ ಅ ಾಶ ಮಾಡಿ ಕೊಟ್ಟಿರುವುದು.

ಶ್ರೀ ಎಸ್. ಬಂಗಾರಪ್ಪ.—ಅದೇನೇ ಇರಲಿ ನಾನು ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಅಳಿಯ ಅಲ್ಲ ಮಗಳ ಗಂಡ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾವು ನಮ್ಮ ನಿಲುವನ್ನು ಈ ಸದನದಲ್ಲಿ ಮಂಡನೆ ಮಾಡಿ ಚರ್ಚೆ ಮಾಡಲು ಪ್ರಾರಂಭ ಮಾಡಿದ್ದೇವೆ. ಈ ಸದನದ ಸಭಾನಾಯಕರಿಗೆ ಮಾತನಾಡಲು ಮೊಟ್ಟಮೊದಲನೆಯ ಅವಕಾಶವನ್ನು ಮಾಡಿಕೊಟ್ಟು ಅವರು ಸರ್ಕಾರದ ಪರವಾಗಿ ವಿವರವಾದಂಥ ಒಂದು ಹೇಳಿಕೆಯನ್ನು ಮಾಡಿದ ಮೇಲೆ ತಾವು ಚರ್ಚೆ ಮಾಡಬಹುದೆಂದು ತಿಳಿಸಿರುವುದಕ್ಕೆ ನನಗೆ ಬಹಳ ಸಂತೋಷ. ಈ ವಿಷಯದ ಬಗ್ಗೆ ಈಗಾಗಲೇ ವಿರೋಧಪಕ್ಷದ ನಾಯಕರು ಸಹ ಮಾತನಾಡಿದ್ದಾರೆ. ಮತ್ತು ಆ ಕಡೆ ಕುಳಿತುಕೊಂಡಿರತಕ್ಕಂಥ ಶ್ರೀಮಾನ್ ಗೋವಿಂದಗೌಡರು ಸಹ ೩೩೪ ನಿಯಮದ ಪ್ರಕಾರ ಒಂದು ನೋಟೀಸ್ ಕಳುಹಿಸಿದ್ದಾರೆಂದು ಕೇಳಿ ನನಗೆ ಬಹಳ ಸಂತೋಷವಾಯಿತು. ಇವತ್ತು ವಿರೋಧಪಕ್ಷದವರು ಯಾವ ಒಂದು ನೋಟೀಸನ್ನು ಕಳುಹಿಸಿ ಕೊಟ್ಟಿದ್ದಾರೋ ಆ ನಿಲುವಳಿ ಸೂಚನೆಯ ಮೇಲೆ ವಾದ ಮಾಡುವುದು ಅವರ ಹಕ್ಕು ಎಂದು ನಾನು ಕೊಂಡಿದ್ದೇನೆ. ಆದರೆ ನಾನು ಅಂತಹ ಒಂದು ವಿಷಯನ್ನು ಪ್ರತಿಪಾದನೆ ಮಾಡಲು ಈ ಸಂದರ್ಭದಲ್ಲಿ ನಿಂತಿದ್ದೇನೆ. ಇದೇ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೂಡ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ಕೊಟ್ಟಂತಹ ಹೇಳಿಕೆಯಲ್ಲಿ ಕೂಡ ಕೆಲವಾರು ವಿವರಗಳನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಹೇಳಿಕೆಯನ್ನು ಕೊಟ್ಟ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಮಾತನಾಡಿದ್ದಾರೆ. ಮತ್ತು ಮಾನ್ಯ ಸದಸ್ಯರಾದಂಥ ಶ್ರೀಮಾನ್ ರಂಗನಾಥ್‌ರವರು ಸಹ ಮಾತನಾಡಿದ್ದಾರೆ. ಮತ್ತೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ಸಹ ಮಾತನಾಡಿದ್ದಾರೆ. ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇವತ್ತು ಮೂಲಭೂತವಾಗಿ ನಮ್ಮ ಮುಂದಿರತಕ್ಕಂಥ ಪ್ರಶ್ನೆ ಎಂದರೆ ರೈತರ ಚಳವಳಿಯ ಪ್ರಶ್ನೆ. ಇವತ್ತು ರಾಜ್ಯ ರೈತ ಸಂಘದವರು ಬಹಳ ವ್ಯಾಪಕವಾಗಿ ತಮ್ಮ ಚಳುವಳಿಯನ್ನು ಮುಂದುವರಿಸುತ್ತಿದ್ದಾರೆ. ಈ ರೀತಿಯ ಚಳುವಳಿಯನ್ನು ಅವರು ಅಷ್ಟು ಪ್ರಭಲವಾಗಿ ಮಾಡಲು ಕೆಲವಾರು ಹಿನ್ನೆಲೆಗಳು ಕೂಡ ಇವೆ. ಇವತ್ತು ಸರ್ಕಾರದವರು ಅವರ ಚಿಂತನೆಯನ್ನು ಸಹ ಮಾಡಬೇಕಾಗುತ್ತದೆ. ಇವತ್ತು ಅನೇಕ ಜನ ರೈತರಅಸ್ತಿಪಾಸ್ತಿಗಳು ನಾಶವಾಗಿದೆ. ರಾಜ್ಯದ ನಾನಾ ಕಡೆಗಳಲ್ಲಿ ನಡೆಯುತ್ತಿರು ಚಳುವಳಿಯನ್ನು ನಿಲ್ಲಿಸಬೇಕಾದರೆ ಅವರು ಸರ್ಕಾರದ ಮುಂದೆ ಇಟ್ಟಿರತಕ್ಕಂಥ ಬೇಡಿಕೆಗಳನ್ನು ಈಡೆರಿಸಬೇಕಾಗುತ್ತದೆ. ಅವರು ಸರ್ಕಾರದ ಮುಂದೆ ಇಟ್ಟಿರತಕ್ಕಂಥ ಬೇಡಿಕೆಗಳನ್ನು ಈಡೇರಿಸದಿದ್ದರೆ ಅವರ ಚಳುವಳಿ ಪರಿಣಾಮಕಾರಿಯಾಗಿ ಮುಂದುವರಿಯುತ್ತದೆ. ಈಗಾಗಲೇ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಕೂಡ ಕೆಲವಾರು ಪತ್ರಿಕಾ ಹೇಳಿಕೆಗಳು ಬಂದಿವೆ ಅವರು ಕೊಟ್ಟಿರತಕ್ಕಂತಹ ಪತ್ರಿಕಾ ಹೇಳಿಕೆಗಳನ್ನು ಸಹ ಮಾನ್ಯ ಮುಖ್ಯ ಮಂತ್ರಿಗಳು ವಿವರವಾಗಿ ಓದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಕೊಟ್ಟಂತಹ ಹೇಳಿಕೆಯ ಪೂರ್ಣ ಪರಿಪಾಠ ನಮಗೆ ಆಗಿದೆ. ನಾವು ಕೂಡ ಆ ಬಗ್ಗೆ ಚೆನ್ನಾಗಿ ಅಭ್ಯಾಸ ಮಾಡಿಕೊಂಡು ಬಂದಿದ್ದೇವೆ. ಆದರೆ ಇವತ್ತು ಕರ್ನಾಟಕ ರಾಜ್ಯದಲ್ಲಿ ರೈತರ ಚಳುವಳಿ ಮೊದಲನೆಯದು ಅಲ್ಲ. ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ಕೂಡ ಅವರು ವ್ಯಾಪಕವಾಗಿ ಅಲ್ಲದಿದ್ದರೂ ಕೆಲವೊಂದು ಭಾಗಗಳಲ್ಲಿ ಮಾತ್ರ ಚಳುವಳಿಯನ್ನು ಮಾಡಿದ್ದಾರೆ. ಅಗ ಚಳುವಳಿಯನ್ನು ಮಾಡಿದಂಥವರು ಚಿಕ್ಕಪುಟ್ಟ ರೈತ ಸಂಘಗಳು, ಮತ್ತೆ ಕೆಲವಾರು ರೈತ ಸಂಘಗಳು ಒಂದೆರಡು ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಚಳುವಳಿಯನ್ನು ಸಹ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಭೂ ಮಾಲೀಕರ ಭೂಮಾಲೀಕತ್ವದ ಮೇಲೆ, ಮತ್ತು ಗೇಣಿದಾರರ ಹಕ್ಕಿಗೆ ಸಂಬಂಧಪಟ್ಟ ಹಾಗೆ, ಅಥವಾ ನೀರಿನ ತೆರಿಗೆ ರದ್ಧತಿಯ ಬಗ್ಗೆ, ನರಗುಂದ ಮತ್ತು ನವಲಗುಂದಗಳಲ್ಲಿ ಚಳುವಳಿಯನ್ನು ರೈತರು ಮಾಡಿದ್ದುಂಟು. ಆಗ ರೈತರು ಸ್ಥಳೀಯವಾಗಿ ಚಳುವಳಿಯನ್ನು ಮಾಡಿದರು. ಆದರೆ ಇವತ್ತು ಕರ್ನಾಟಕ ರಾಜ್ಯಾದಂತ್ಯ ವ್ಯಾಪಕವಾದಂಥ ಚಳುವಳಿಯನ್ನು ರೈತರು ಮಾಡುತ್ತಿದ್ದಾರೆ. ಆದರೆ ರೈತರು ಚಳುವಳಿಯನ್ನು ಮಾಡಲು ಸಾಕಷ್ಟು ಹಿನ್ನೆಲೆ ಇದೆಯೆಂದು ನನಗನಿಸುತ್ತದೆ. ಆದರೆ ಆ ಎಲ್ಲಾ ವಿವರಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಆದರೆ ಇದೇ ಸಂದರ್ಭದಲ್ಲಿ ನಾನು ಒಂದು ಮಾತನ್ನು ಮಾತ್ರ ಸಭೆಯ ಗಮನಕ್ಕೆ ತರುವುದಾದರೆ ಜನತಾಪಕ್ಷ ಮತ್ತು ಕ್ರಾಂತಿರಂಗ ಜಂಟಿಯಾಗಿ ಚುನಾವಣೆಯ ಸಂದರ್ಭದಲ್ಲಿ ಒಂದು ಚುನಾವಣಾ ಪ್ರಣಾಳಿಕೆಯನ್ನು ೧೯೮೩ರ ಜನವರಿಯಲ್ಲಿ ಜನರ ಮುಂದೆ ಇಟ್ಟಿತು. ಅದರೆ ಈ ಚುನಾವಣೆಯು ಬರುವುದಕ್ಕಿಂತ ಮುಂಚಿತವಾಗಿ ರೈತರು ತಮ್ಮ ಬೇಡಿಕೆಗಳನ್ನು ಇಟ್ಟು ಚಳುವಳಿ ಮಾಡಿದ್ದುಂಟು. ಆದರೆ ನಾವು ೧೯೮೩ನೇ ಜನವರಿಯಲ್ಲಿ ಚುನಾವಣೆಯ ಪ್ರಣಾಳಿಕೆಯನ್ನು ತಯಾರಿಸಿ ಜನರ ಮುಂದೆ ಇಟ್ಟಾಗ ಆಗಿನ ರೈತ ಸಂಘದವರು ಒಂದು ಮಾತನ್ನು ಹೇಳಿದರು, ಅದು ಏನೆಂದರೆ ರೈತರ ಬೇಡಿಕೆಗಳನ್ನು ಯಾವ ಸರ್ಕಾರ ಅಥವಾ ಯಾವ ಪಕ್ಷ ಚುನಾವಣೆಯಲ್ಲಿ ಸ್ಪರ್ಧಿಸಿದೆಯೋ ಆ ಪಕ್ಷ ಈಡೇರಿಸು

ತ್ತದೆಯೋನಮ್ಮ ಆ ಪಕ್ಷ ಸಂಪೂರ್ಣ ಬೆಂಬಲವಿದೆಯೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ ಈ ಹೇಳಿಕೆಯ ಪ್ರಕಾರ ಅವರು ಕಾಂಗ್ರೆಸ್ ಪಕ್ಷಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಲಿಲ್ಲ ಆ ಚುನಾವಣೆಯ ಪ್ರಣಾಳಿಕೆ ಕಾಫಿ ಈಗಲೂ ಕೂಡ ನನ್ನಲ್ಲಿ ಇದೆ. ಆಗ ಆ ರಾಜ್ಯ ರೈತ ಸಂಘದವರು ಕೊಟ್ಟ ಹೇಳಿಕೆಯ ಪ್ರಕಾರ ಅವರು ಜನತಾ ಮತ್ತು ಕ್ರಾಂತಿರಂಗದ ಜಂಟೀ ಪಕ್ಷಕ್ಕೆ ತಮ್ಮ ಮತವನ್ನು ಚಲಾಯಿಸಿದರು. ಮತ್ತೆ ಆ ಬಗ್ಗೆ ಅನೇಕ ಜನ ರೈತ ಮುಖಂಡರು ಹೇಳಿಕೆಗಳನ್ನು ಕೊಟ್ಟಿದ್ದಾರೆ. ಮತ್ತು ಅನೇಕ ಸಭೆಗಳಲ್ಲಿ ಕೂಡ ಮಾತನಾಡಿದ್ದಾರೆ. ಆದರೆ ಚುನಾವಣೆಯ ಸಂದರ್ಭದಲ್ಲಿ ನಾನು ಇಡೀ ಕರ್ನಾಟಕ ರಾಜ್ಯವನ್ನೆಲ್ಲಾ ಪ್ರವಾಸಮಾಡಿ ಬಂದಾಗ ಎಲ್ಲಾ ಕಡೆಯಲ್ಲಿಯೂ ನನ್ನ ಕಣ್ಣಿಗೆ ಬಿದ್ದಿದ್ದು ಹಸಿರು ಟೋಪಿಯನ್ನು ಹಾಗೂ ಏನೆಂದರೆ ಹಸಿರು ಶಾಲು ಹಾಕಿಕೊಂಡು ನಮಗೆ ಬೆಂಬಲ ವನ್ನು ವ್ಯಕ್ತಪಡಿಸಿದ ರೈತರು ಕೆಲವು ಕಡೆ ಅವರು ಹಸಿರು ರುಮಾಲು ಸುತ್ತಿಕೊಂಡು ಬಂದು ನಮಗೆ ಬೆಂಬಲವನ್ನು ಸೂಚಿಸಿದರು. ಈ ವಿಷಯ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಸಿಂಧನೂರು ಮಲ್ಲಪ್ಪನವರಿಗೂ ಗೊತ್ತಿರಬಹುದು. ಕಾರಣವೇನೆಂದರೆ ಅವರು ಮತ್ತು ನಾನು ಒಂದು ಸಭೆಯಲ್ಲಿ ಭಾಷಣ ಮಾಡಿದಾಗ ಆ ರೀತಿಯ ವಾತಾವರಣವನ್ನು ನೋಡಿದ್ದೇವೆ. ಆದರೆ ಇವತ್ತು ರೈತರು ತಮ್ಮ ಮುಂದೆ ಇಟ್ಟಿರತಕ್ಕಂಥ ಬೇಡಿಕೆಗಳು ಇವತ್ತಿನ ಬೇಡಿಕೆಗಳು ಅಲ್ಲ. ಅವರ ಬೇಡಿಕೆಗಳು ಹಿಂದಿನಿಂದ ಬಂದಂಥ ಬೇಡಿಕೆಗಳೇ ಆಗಿವೆ. ಕರ್ನಾಟಕ ರಾಜ್ಯ ರೈತಸಂಘದ ಅಧ್ಯಕ್ಷ ರಾದ ಶ್ರೀ ಎಚ್. ಎಸ್. ರುದ್ರಪ್ಪನವರು, ಸಂಘದ ಸಂಚಾಲಕರಾದ ಪ್ರೊ।।ನಂಜುಂಡಸ್ವಾಮಿಯ ವರು. ಸಂಘದ ಕಾರ್ಯದರ್ಶಿಗಳಾದ ಸುಂದರೇಶ್‌ರವರು ಅವರ ನೇತೃತ್ವದಲ್ಲಿರತಕ್ಕ ರೈತಸಂಘ ತನ್ನ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದೆ. ಇದೇ ಬೇಡಿಕೆಗಳನ್ನು ಹಿಂದಿನ ಸರ್ಕಾರ ಇದ್ದಾಗಲೂ ಇಟ್ಟಿದ್ದರು. ೧೯೮೩ರ ಜನವರಿಯಂದು ಚುನಾವಣೆ ನಡೆದಾಗ ಇದೇ ಬೇಡಿಕೆಗಳನ್ನು ಅವತ್ತು ಕೂಡ ಇಟ್ಟಿದ್ದರು. ಇವತ್ತು ಒಂದೆರಡು ಬೇಡಿಕೆಗಳನ್ನು ಹೆಚ್ಚಾಗಿ ಸೇರಿಸಿರಬಹುದು. ಅದೇ ಬೇಡಿಕೆಗಳನ್ನು ಇವತ್ತೂ ಇಟ್ಟಿದ್ದಾರೆ, ನಾನು ಅದನ್ನು ನೋಡಿದ್ದೇನೆ, ಬೇರೇನೂ ಇಲ್ಲ, ಅದೇ ಬೇಡಿಕೆಗಳು ಇವೆ. ಜನತಾರಂಗದ ಚುನಾವಣಾ ಪ್ರಣಾಳಿಕೆಯ ನಾಲ್ಕನೇ ಪುಟದಲ್ಲಿ ಅನೇಕ ವಿಚಾರಗಳಿವೆ. ಅದರಲ್ಲಿ ಮಾರಾಟ ತೆರಿಗೆಯನ್ನು ರದ್ದು ಮಾಡುತ್ತೇವೆಂದೂ, ಮಾರಾಟ ತೆರಿಗೆ ಯನ್ನು ಹಾಕುವುದಿಲ್ಲವೆಂದು ಹೇಳಿದ್ದೇವೆ. ಇದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರತಕ್ಕ ವಿಚಾರ. ಅದೇರೀತಿ ೧೦ ಕಿಲೋಮೀಟರ್ ವ್ಯಾಪ್ತಿಯೊಳಗೆ ಕೃಷಿ ಉತ್ಪಾದನಾ ಉಗ್ರಾಣ ನಿರ್ಮಾಣ. ಸಾಲಸೌಲಭ್ಯಗಳ ಬಗ್ಗೆ ಕೂಡ ಹೇಳಲಾಗಿದೆ. ಯಾವ ರೀತಿಯ ಸಾಲ ಸೌಲಭ್ಯಗಳನ್ನು ಕೊಡಲಾಗಿದೆ ಎನ್ನುವ ಮಾತನ್ನು ನಾನು ಹೇಳಬೇಕಾಗಿಲ್ಲ. ರಾಜ್ಯದ ರೈತರು ಚಳುವಳಿ ಮಾಡುತ್ತಿದ್ದಾರೆ. ಆಗಲೂ ಕೂಡ ರೈತರು ಚಳುವಳಿ ಮಾಡುತ್ತಿದ್ದರು. ವಚನ ಕೊಟ್ಟಿರತಕ್ಕದ್ದನ್ನು ನೀವು ಪ್ರಾಮಾಣಿಕವಾಗಿ ಈಡೇರಿಸಿದ್ದೀರಾ ? ಸರ್ಕಾರ ನಡೆಸತಕ್ಕ ಪಕ್ಷದವರಿಗೆ, ನಿಮ್ಮ ಪ್ರಾಮಾಣಿಕ ತನಕ್ಕೆ ಒಂದು ಸವಾಲು ಆಗತಕ್ಕ ವಿಚಾರವಾಗುತ್ತದೆಯೇ ವಿನಹ. ಅದನ್ನು ತಪ್ಪಿಸುವುದಕ್ಕೆ ಸಾಧ್ಯ ವಾಗುವುದಿಲ್ಲ. ಮಾನ್ಯ ಉಪಾಧ್ಯಕ್ಷರು ಕೂಡ ಕ್ರಾಂತಿರಂಗದ ಸದಸ್ಯರಾಗಿ ಕೊರಟಗೆರೆಯಿಂದ ಸ್ಪರ್ಧಿಸಿದ್ದರು. ಚುನಾವಣೆಯ ಸಂದರ್ಭದಲ್ಲಿ ನಾವೂ ನೀವೂ ಎಲ್ಲರೂ ಸೇರಿ ರೈತರಿಗೆ ಕೆಲವೊಂದು ಆಶ್ವಾಸನೆಗಳನ್ನು ಕೊಟ್ಟಿದ್ದೇವೆ. ಆ ಸಂದರ್ಭದಲ್ಲಿ ಕೊಟ್ಟಂತಹ ಆಶ್ವಾಸನೆಗಳನ್ನು ಸೂಕ್ಷ್ಮವಾಗಿ ಪ್ರಸ್ತಾಪ ಮಾಡುತ್ತೇನೆ. ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಕೈಯಿಂದ ನೀವೇ ಗಂಟುಹಾಕಿಕೊಳ್ಳತಕ್ಕ ಕಾಲವನ್ನು ನೀವೇ ತಂದುಹಾಕಿಕೊಳ್ಳುತ್ತಿದ್ದೀರಿ ಎಂದು ನನ್ನ ಅಭಿಪ್ರಾಯ ಇಂತಹ ಸಂದರ್ಭದಲ್ಲಿ ಚಳುವಳಿ ಮಾಡತಕ್ಕದ್ದು ಜನತೆಯ ಹಕ್ಕು ಎಂದು ಮಾನ್ಯ ಕೃಷ್ಣನ್‌ರವರು ಹೇಳಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ಬೇಡಿಕೆಗಳು ಸಹ ನ್ಯಾಯಯುತವಾದ ಬೇಡಿಕೆಗಳಾಗಿರಬೇಕು. ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಕಾನೂನಿನ ಚೌಕಟ್ಟಿನಲ್ಲಿ ನಾವು ಚಳುವಳಿ ಮಾಡುತ್ತೇವೆ. ಕೆಲವೊಮ್ಮೆ ನ್ಯಾಯಬದ್ಧವಾದ ಬೇಡಿಕೆಗಳಿಗೆ ಕಾನೂನನ್ನು ಮೀರಿ ಚಳುವಳಿ ಮಾಡಬೇಕಾಗುತ್ತದೆ. ರೈತಸಂಘದಿಂದ ಏಳು ಬೇಡಿಕೆಗಳು ಬಂದಿವೆ. ಮಹಾತ್ಮಗಾಂಧಿಯವರು ಅನುಸರಿಸತಕ್ಕ ಚಳುವಳಿ ಮಾರ್ಗವನ್ನು ಅನುಸರಿಸಬೇಕು ನಿಜ. ನಮ್ಮ ಮುಂದಿರುವ ಪ್ರಶ್ನೆ ಏನು ಒತ್ತುವರಿ ಭೂಮಿ ವಿಚಾರವನ್ನು ರೈತಸಂಘದವರು ಸರ್ಕಾರದ ಮುಂದಿಟ್ಟಿದ್ದಾರೆ. ಒತ್ತುವರಿ ಭೂಮಿಯ ಪಹಣಿ ಅವರಿಗೆ ಆಗಿದ್ದರೆ ಅವರಿಗೆ ಆ ಭೂಮಿಯನ್ನು ಮಂಜೂರು ಮಾಡಿ. ಆದರೆ ಬೇರೆ ಬೇರೆ ಜಮೀನ್ದಾರರು ಇದ್ದಾರೆ. ಉದಾಹರಣೆಗೆ ಕಾಫಿಪ್ಲಾಂಟೆಷನ್ ಇದೆ. ಕಾಫಿ ಬೆಳೆಯುತಕ್ಕವರು ಚಿಕ್ಕಮಗಳೂರಿನಲ್ಲಿರಬಹುದು, ಕೊಡಗಿನಲ್ಲಿರಬಹುದು, ಸಕಲೇಶಪುರದಲ್ಲಿರಬಹುದು. ಕಾರವಾರ ದಲ್ಲಿರಬಹುದು, ಶಿವಮೊಗ್ಗದಲ್ಲಿರಬಹುದು ಅವರು ಎಲ್ಲೇ ಇರಲಿ ಅದು ಬೇರೆ ವಿಷಯ. ಆದರೆ ದೊಡ್ಡ ದೊಡ್ಡ ಭೂಮಾಲೀಕರು ಒತ್ತುವರಿ ಮಾಡಿಕೊಂಡಿರತಕ್ಕ ಭೂಮಿ ಇರಬಹುದು, ಹೊಸ ದಾಗಿ ಮಂಜೂರು ಮಾಡಿರತಕ್ಕ ಭೂಮಿ ಇರಬಹುದು. ಅಕ್ರಮ ಸಾಗುವಳಿ ಮಾಡಿಕೊಂಡಿರುವ

ವರಿಗೆ ಆ ಭೂಮಿಯನ್ನು ಮಂಜೂರು ಮಾಡತಕ್ಕ ವಿಚಾರ ಇರಬಹುದು. ರೈತಸಂಘದವರು ಹೇಳಿರತಕ್ಕದ್ದರಲ್ಲಿ ತಪ್ಪೇನಿದೆ ? ರಾಜ್ಯ ಸರ್ಕಾರ ತೆಗೆದುಕೊಂಡಿರತಕ್ಕ ತೀರ್ಮಾನ. ನಾವು ಜನವರಿಯಲ್ಲಿ ಚುನಾವಣೆ ನಡೆದಾಗ ಕೊಟ್ಟಿರತಕ್ಕ ತೀರ್ಮಾನ. ಸರ್ಕಾರಿ ಭೂಮಿಯನ್ನು ಅತಿಕ್ರಮ ಪ್ರವೇಶ ಮಾಡಿ ಬಗರು ಹುಕುಂ ಸಾಗುವಳಿ ಮಾಡುವುದು, ಹಳೇ ಮೈಸೂರು ಪ್ರದೇಶದಲ್ಲಿ ಬಗರು ಹುಕುಂ ಸಾಗುವಳಿ ಎನ್ನುತ್ತೇವೆ. ಮುಂಬಯಿ ಕರ್ನಾಟಕದವರು ಅತಿಕ್ರಮಣ ಎಂದು ಕರೆಯುತ್ತಾರೆ ಆ ಭೂಮಿಯನ್ನು ಮಂಜೂರು ಮಾಡುವುದು ಹೇಗೆ ? ಅವರು ಬಗರು ಹುಕುಂ ಮಾಡಿಕೊಂಡು ಎಷ್ಟೇ ವರ್ಷಗಳಾಗಿರಲಿ. ನಿಮ್ಮ ತೀರ್ಮಾನಕ್ಕೆ ವಿರುದ್ಧವಾಗಿ ಚಳುವಳಿಯನ್ನು ರೈತರು ಏತಕ್ಕೆ ಮಾಡಬಾರದು ? ಕರ್ನಾಟಕ ರೈತಸಂಘದವರು ಇಟ್ಟಿರತಕ್ಕ ಬೇಡಿಕೆಗಳಲ್ಲಿ ಇದು ಒಂದು. ಚಳುವಳಿ ಮಾಡತಕ್ಕ ವಾತಾವರಣ ಇವತ್ತು ಹೇಗೆ ಉಂಟಾಗುತ್ತದೆ ? ನೀವು ಒಂದು ತೀರ್ಮಾನ ಮಾಡಿದಿರಿ, ರೈತಸಂಘದವರು ಚಳುವಳಿ ಮಾಡತಕ್ಕ ತೀರ್ಮಾನ ಮಾಡಿದರೆ ತಪ್ಪೇನು ? ನೀವು ಮಂತ್ರಿಮಂಡಲದಲ್ಲಿ ಯಾವರೀತಿಯ ತೀರ್ಮಾನ ಮಾಡಿದ್ದೀರಿ ? ಒತ್ತುವರಿ ವಿಚಾರದಲ್ಲಿ ಬಗರು ಹುಕುಂ ವಿಚಾರದಲ್ಲಿ ನಿಮ್ಮ ಸರ್ಕಾರದ ತೀರ್ಮಾನ ಇದು. ರೈತರು ಚಳುವಳಿ ಮಾಡಲಿಕ್ಕೆ ಪ್ರಚೋದನೆ ಕೊಡುತ್ತಿದ್ದೀರಿ. ರೈತರು ಚಳುವಳಿ ಮಾಡದೆ ಅನ್ಯಮಾರ್ಗ ಉಳಿಯುವುದಿಲ್ಲವೆಂದು ಇದರಿಂದ ವೇದ್ಯವಾಗುತ್ತದೆ. ಇದರಲ್ಲಿ ಪ್ರಚೋದನೆ ಯಾರಿಂದ ಬಂತು ? ಪ್ರಚೋದನೆ ರಾಮಕೃಷ್ಣ ಹೆಗಡೆಯವರ ಮುಖಂಡತ್ವದ ಸರ್ಕಾರದಿಂದ ಬಂತು ಕರ್ನಾಟಕ ರಾಜ್ಯ ರೈತಸಂಘ ಚಳುವಳಿ ಮಾಡುವುದಕ್ಕೆ ನಿಮ್ಮ ತೀರ್ಮಾನಗಳೇ ಕಾರಣ. ಅವರು ಚಳುವಳಿ ಮಾಡುವುದಕ್ಕೆ ನೀವು ಕಾರಣೀಭೂತರಾಗಿದ್ದೀರಿ. ಕಾರಣಕರ್ತರಾಗಿದ್ದೀರಿ. ನಿಮ್ಮಿಂದ ಪ್ರಚೋದನೆಗೊಂಡ ರೈತರು ಚಳುವಳಿ ಮಾಡುತ್ತಿದ್ದಾರೆ. ಇದಕ್ಕೆ ನೀವೇ ಜವಾಬ್ದಾರರು ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇದೇ ರೀತಿ ರೈತರ ಸಾಲಸೋಲಗಳನ್ನು ಮನ್ನಾ ಮಾಡತಕ್ಕ ವಿಚಾರ, ೧೯೮೩ರ ಜನವರಿ ಚುನಾವಣೆಯಲ್ಲಿ ಕರ್ನಾಟಕ ರೈತರ ಪರವಾಗಿ ಹೇಳಿರತಕ್ಕ ಮಾತು ಇದು. ಸಾಲಗಳನ್ನು ರದ್ದು ಮಾಡುತ್ತೇವೆ ಎನ್ನುವ ಭಾವನೆಯನ್ನು ಇಟ್ಟುಕೊಂಡು ಭಾಷಣ ಮಾಡಿದ್ದೇವೆ. ಆ ಮಾತನ್ನು ಎಲ್ಲಾ ಕಡೆಗೂ ಹೇಳಿದ್ದೇವೆ. ಇವತ್ತು ಕೆಲವು ಸೌಲಭ್ಯಗಳನ್ನು ರಿಯಾಯಿತಿಗಳನ್ನು ಕೊಟ್ಟಿದ್ದೀರಿ. ಈಗಾಗಲೇ ಮಾತನಾಡಿರತಕ್ಕ ಮಾನ್ಯ ವಿರೋಧಪಕ್ಷದ ನಾಯಕರು ಮತ್ತಿತರರು ಮಾತನಾಡಿರಬಹುದೆಂದು ನನ್ನ ಭಾವನನೆ. ನೀವು ಕೊಟ್ಟಿರತಕ್ಕ ಸೌಲಭ್ಯಗಳು ಏನಾಗಿವೆ ? ಸೌಲಭ್ಯಗಳನ್ನು ಕೊಡಬೇಕು, ಕೊಡಬಾರದೆನ್ನುವ ಅಭಿಪ್ರಾಯ ನನ್ನದಲ್ಲ. ಅನೇಕ ವರ್ಷಗಳಿಂದ ಸಾಲದಲ್ಲಿ ಸಿಕ್ಕಿಕೊಂಡಿರತಕ್ಕ ರೈತ ಇವತ್ತು ಉಳಿಯುವುದಿಲ್ಲ. ಶಕ್ತಿವಂತ ರೈತರು ತೆಗೆದುಕೊಂಡ ಸಾಲವನ್ನು ವಾಪಸ್ಸು ಕೊಡುವುದಿಲ್ಲ. ಆದ್ದರಿಂದ ನೀವು ರೈತರಿಗೆ ಕೊಟ್ಟಿರತಕ್ಕ ಸಾಲ ಸೌಲಭ್ಯಗಳನ್ನು ಉಪಯೋಗ ಮಾಡಿಕೊಳ್ಳತಕ್ಕ ಶಕ್ತಿ ಸಮಾಜದಲ್ಲಿ ಇವತ್ತು ಯಾವ ರೈತರಿಗೆ ಇದೆ ಅಂದರೆ. ಯಾರು ತತ್‌ಕ್ಷಣ ಬೇರೆ ಕಡೆಯಿಂದ ಸಾಲ ತಂದು, ತಮ್ಮ ಆಸ್ತಿಯನ್ನು ಬ್ಯಾಂಕಿನಲ್ಲಿಟ್ಟು ಸೌಲಭ್ಯಗಳನ್ನು ಪಡೆದುಕೊಳ್ಳುತ್ತಾರೆ. ಯಾರು ಆ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಾರೆಂದರೆ ೧೦೦ ಎಕರೆ, ೫೦ ಎಕರೆ ೨೫ ಎಕರೆ ಭೂಮಿ ಇರತಕ್ಕವರು ತಮ್ಮ ಆಸ್ತಿಪಾಸ್ತಿಗಳನ್ನು ಒತ್ತೆ ಇಟ್ಟು ಸಾಲವನ್ನು ತಂದು ನೀವು ಕೊಟ್ಟಿರತಕ್ಕ ಸೌಲಭ್ಯಗಳನ್ನು ಉಪಯೋಗ ಮಾಡಿಕೊಳ್ಳುತ್ತಾರೆ. ಸಣ್ಣ ರೈತರಿಗೆ ನೀವು ಕೊಟ್ಟಿರತಕ್ಕ ಸಾಲದಸೌಲಭ್ಯ ದೊರೆತ್ತಿಲ್ಲ. ನಾನು ರೈತರ ವಿರೋಧಿಯಲ್ಲ. ಆದರೆ ಇವತ್ತು ಸಮಾಜದಲ್ಲಿ ಕಡು ಬಡವ ರೈತರು ಇದ್ದಾರೆ. ಸಹಕಾರ ಸಂಘಗಳ ಮುಖಾಂತರ ಪಡೆದು ಕೊಂಡಿರತಕ್ಕ ಸಾಲವನ್ನು ಬಿಟ್ಟಿದ್ದೀರಿ. ನಿಮ್ಮ ಕಳಕಳಿ ಹೆಚ್ಚಿಗೆ ಬಡ ರೈತ ವರ್ಗದ ಕಡೆಗೆ ಇರಬೇಕು. ಸಮಾಜನಲ್ಲಿ ಶಕ್ತಿವಂತ ರೈತರು ಇದ್ದಾರೆ. ಅವರು ಮಾತ್ರ ನೀವು ಕೊಟ್ಟಿರತಕ್ಕ ರಿಯಾಯಿತಿಗಳನ್ನು ಪಡೆದುಕೊಳ್ಳುತ್ತಾರೆ. ಬಡ ರೈತರ ಹತ್ತಿರ ಸಾಲವನ್ನು ವಸೂಲಿ ಮಾಡಲಿಕ್ಕೆ ಕೈಹಾಕಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಹೇಳಿಕೆ ಕೊಡುವಾಗ ಒಂದು ಮಾತು ಹೇಳಿದ್ದಾರೆ. ಅದೇನೆಂದರೆ ಸದನದ ಸದಸ್ಯರು ಅವರವರ ಕ್ಷೇತ್ರದಲ್ಲಿ ಸಹಕಾರ ಸಂಘಗಳ ಸಾಲ ಇರಬಹುದು, ಭೂ ಅಭಿವೃದ್ಧಿ ಬ್ಯಾಂಕು ಮುಖಾಂತರ ತೆಗೆದುಕೊಂಡಿರತಕ್ಕ ಸಾಲಇರುಹುದು, ಸರ್ಕಾರದ ವತಿಯಿಂದ ತೆಗೆದುಕೊಂಡಿರುವಸಾಲ ಇರಬಹುದು. ತಾಲ್ಲೂಕು ಆಫೀಸುಗಳಲ್ಲಿ ಹಿಂದೆ ಕೊಟ್ಟಿರತಕ್ಕ ಸಾಲ ಇರಬಹುದು ಯಾವುದೇ ಸಾಲವನ್ನು ವಸೂಲಿ ಮಾಡುವಾಗ ರೈತರ ಮನೆಗಳನ್ನು ಜಪ್ತಿ ಮಾಡಬಾರದೆನ್ನುವ ಆದೇಶವನ್ನು ಸಾಲ ವಸೂಲಿ ಮಾಡತಕ್ಕ ಆಡಳಿತ ಯಂತ್ರಕ್ಕೆ ಕೊಡಲಾಗಿದೆಯೆಂದು ಹೇಳಿದ್ದಾರೆ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷವಾಯಿತು. ನನ್ನ ಕ್ಷೇತ್ರದ ಒಂದು ಉದಾಹರಣೆಯನ್ನು ಹೇಳುತ್ತೇನೆ. ತಮ್ಮ ಕ್ಷೇತ್ರವಾದ ಕ್ಯೊರಟಗೆರೆಯಲ್ಲಿ ಇದೇ ತರಹ ಆಗಿರಬಹುದು. ಬೇರೆಯವರ ಕ್ಷೇತ್ರಗಳಲ್ಲೂ ಈ ತರಹ ಆಗಿರಬಹುದು. ನನ್ನ ಕ್ಷೇತ್ರವಾದ ಸೊರಬ ತಾಲ್ಲೂಕಿನಲ್ಲಿ ಶಕುನಹಳ್ಳಿ ಎಂಬ ಗ್ರಾಮವಿದೆ. ಅಲ್ಲಿ ಮೊನ್ನೆ ಮೊನ್ನೆ ಹೋಗಿ

ರೈತರ ಬಗ್ಗೆ ಕಳಕಳಿ ಇರತಕ್ಕವರು ಜಪ್ತಿ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈಗತಾನೇ ಹೇಳಿಕೆ ಕೊಟ್ಟರು. ರೈತರಿಗೆ ಒಂದು ವರ್ಷಕ್ಕೆ ಎಷ್ಟು ದವಸ ಬೇಕು ಅದನ್ನು ಮುಟ್ಟುವುದಿಲ್ಲವೆಂದು ಹೇಳಿದ್ದಾರೆ. ಭತ್ತ ಆಗಿರಬಹುದು, ರಾಗಿ ಆಗಿರಬಹುದು, ಮೆಣಸಿನಕಾಯಿ ಆಗಿರಬಹುದು ಜೋಳ ಆಗಿರಬಹುದು, ನವಣೆಯಾಗಿರಬಹುದು, ಸಜ್ಜೆ ಆಗಿರಬಹುದು, ಯಾವುದೇ ಆಹಾರ ಪದಾರ್ಥಗಳನ್ನು ಮುಟ್ಟುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ರೈತರ ಆಹಾರ ಪದಾರ್ಥಗಳನ್ನು ಮುಟ್ಟತಕ್ಕ ಕೆಲಸವನ್ನು ಮಾಡದಿದ್ದರೆ ಶಿವಮೊಗ್ಗ ಜಿಲ್ಲೆಯ ತಾಲ್ಲೂಕುಗಳಲ್ಲಿ ರೈತರ ಮನೆಗಳನ್ನು ಜಪ್ತಿ ಮಾಡಿದ್ದಾರೆ.

೩-೦೦ ಪಿ.ಎಂ.

ಈ ಚೀಲಗಳ ಮೇಲೆ ಜಪ್ತಿ ಮಾಡಿರತಕ್ಕಂಥ ಪ್ರಕರಣಗಳು ಇವೆ. ಸುಮಾರಾಗಿ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ನೋಡಿದ ಮೇಲೆ ಇವರಿಗೆ ರೈತರ ಬಗ್ಗೆ ಎಷ್ಟೊಂದು ಕಳಕಳಿ ಇದೆ ಎಂದರೆ, ಇವರಿಗೆ ಇರುವ ಕಳಕಳಿ ರೈತರು ಉಪಯೋಗ ಮಾಡತಕ್ಕಂಥ ಭತ್ತ, ಜೋಳ, ರಾಗಿ ವಗೈರೆ ಚೀಲಗಳನ್ನು ಜಪ್ತಿ ಮಾಡುವ ಬಗ್ಗೆ ಇಲ್ಲ. ನೂರಾರು ಕೇಸುಗಳು ನಮ್ಮಲ್ಲಿವೆ. ಇವತ್ತು ಒಂದು ಕುಟುಂಬಕ್ಕೆ ಎಷ್ಟು ಭತ್ತ. ಜೋಳ, ಅಕ್ಕಿ ಬೇಕು ಎಂಬ ವಿವರ ಸರ್ಕಾರಕ್ಕೆ ತಿಳಿದಿಲ್ಲ. ಅದೇ ಹಳೆಯ ಕಾನೂನು. ಹಿಂದಿನ ಸರ್ಕಾರ ಇದ್ದಾಗಲೂ ಅದೇ ಕಾನೂನು, ಈಗ ಇರತಕ್ಕಂಥಾದ್ದು ಕೂಡ ಅದೇ ಕಾನೂನು. ಅದೇ ಆಡಳಿತ ಯಂತ್ರ, ಅದೇ ವಿಚಾರಧಾರೆ. ಅದೇ ರೀತಿ ಜಪ್ತಿ ಮಾಡತಕ್ಕಂಥ ಕಾರ್ಯ ವಿಧಾನ ಕಾನೂನಿನ ಚೌಕಟ್ಟಿನಲ್ಲಿ ಇರುವುದರಿಂದ, ಈ ಸರ್ಕಾರದವರು ವಿಭಿನ್ನವಾಗಿರತಕ್ಕಂಥ ಆದೇಶವನ್ನು ಏನಾದರೂ ಕೊಟ್ಟಿದ್ದರೆ. ಒಂದು ವೇಳೆ ಜಪ್ತಿಯಾಗಿರತಕ್ಕಂಥ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಹಿಂದಕ್ಕೆ ಕೊಟ್ಟಿದ್ದೇವೆ ಎಂದು ತೋರಿಸಿದರೆ, ಈ ಆದೇಶವನ್ನು ತನ್ಮೂಲಕ ಆಡಳಿತ ಯಂತ್ರಕ್ಕೆ ಕೊಟ್ಟಿದ್ದರೆ ನಿಜವಾಗಿಯೂ ನಾನು ಇವರಿಗೆ ಶಹಬಾಸ್‌ಗಿರಿಯನ್ನು ಕೊಡುತ್ತಿದ್ದೆನು. ನಿಮ್ಮ ಹೃದಯಾಂತರಾಳದಿಂದ ಬಂದ ಭಾವನೆ ಮತ್ತು ಚಿಂತನೆ ಕಾರ್ಯರೂಪಕ್ಕೆ ಬಂದಿದೆ. ನೂರಾರು ಕೇಸುಗಳಲ್ಲಿ ಜಪ್ತಿಯನ್ನು ಮಾಡಿದ್ದೀರಿ ಎಂದು ರೈತರು ನಿಮ್ಮನ್ನು ಅನುಮಾನದಿಂದ ನೋಡುತ್ತಿದ್ದಾರೆ. ಹೀಗಿರುವಾಗ ಸುಲಿದ ಬಾಳೆಹಣ್ಣಿನ ತೆರದಿಂದ ಬಹಳ ನೈಸ್ ಆಗಿ ಮುಖ್ಯಮಂತ್ರಿಗಳು ಆಡುವ ಮಾತನ್ನು ಕೇಳಬೇಕು. ರೈತರ ಬಗ್ಗೆ ಇಷ್ಟೊಂದು ಕಳಕಳಿ ಇರುವ ಮುಖ್ಯಮಂತ್ರಿ ಹೆಗಡೆಯವರನ್ನು ಬಿಟ್ಟರೆ ಬೇರೆ ಯಾರೂ ಸಿಗುವುದಿಲ್ಲ ಎನ್ನು ಭಾವನೆ ಅದನ್ನು ಕೇಳಿದವರ ಮನಸ್ಸಿಗೆ ಬರಬೇಕು. ಜಪ್ತಿ ಮಾಡಿರತಕ್ಕಂಥ ಪ್ರಕರಣಗಳನ್ನು ವಿಚಾರ ಮಾಡಿದಾಗ ನಿಮ್ಮ ಮಾತಿಗೂ ಮತ್ತು ಕೃತಿಗೂ ಸಮುದ್ರದ ಅಗಲದಷ್ಟು ವ್ಯತ್ಯಾಸ ಇರುವುದನ್ನು ಈಗಾಗಲೇ ರೈತವರ್ಗ ನೋಡಿದೆ. ಈ ಸರ್ಕಾರ ಬಂದಮೇಲೆ ಈ ರಾಜ್ಯದಲ್ಲಿ ಎಷ್ಟು ಸಂದರ್ಭಗಳಲ್ಲಿ ಜಪ್ತಿ ಮಾಡಲಾಗಿದೆ ಎಂಬುದರ ಸಂಪೂರ್ಣ ಅಂಕಿಅಂಶಗಳನ್ನು. ಅವುಗಳ ಪಟ್ಟಿಯನ್ನು ಈ ಸದನದ ಮುಂದೆ ಇಡಿ. ಅದನ್ನು ಇಲ್ಲಿನ ಕಲಾಪಗಳಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ. ನಾವು ಕೂಡ ನಮೂದಾಗಿರತಕ್ಕಂಥ ಕೇಸುಗಳ ಬಗ್ಗೆ ಮಾಹಿತಿಯನ್ನು ಈ ಸದನದ ಮುಂದೆ ಇಡುವುದಕ್ಕೆ ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ರೈತರು ಊಟ ಮಾಡುವ ಅಕ್ಕಿಯ ಚೀಲಗಳನ್ನು ನೀವು ಜಪ್ತಿ ಮಾಡಿದ್ದೀರಿ ಎಂದರೆ ನಿಮ್ಮ ಮೇಲೆ ಆಗ್ರಹ ರೈತರಿಗೆ ಬರುವುದಿಲ್ಲವೆ? ಅದ್ದರಿಂದ ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರೈತರ ಸಂಘ ಎನ್ನುವಾಗ ನಾನು ಹೆಚ್.ಎಸ್. ರುದ್ರಪ್ಪನವರ ಸಂಘದ ಬಗ್ಗೆ ಮಾತನಾಡುತ್ತಿದ್ದೇನೆ. ನಿಮ್ಮ ಮೇಲೆ ಇದ್ದಂತಹ ನಂಬಿಕೆ ಸಂಪೂರ್ಣವಾಗಿ ಹೊರಟುಹೋಗಿದೆ ಎಂದು ಅವರು ಹೇಳಿದ್ದಾರೆ. ಒಂದು ಮಾತನ್ನು ತಮ್ಮ ಮೂಲಕ ಈ ಸಭೆಯ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ಅದೇನೆಂದರೆ, ಈ ಸರ್ಕಾರ ರಚನೆಯಾದ ಮೇಲೆ ''ಯಾರು ಶಾಸಕರು ಈ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದಾರೆ, ಅವರು ತಮ್ಮ ಬೆಂಬಲವನ್ನು ಹಿಂದಕ್ಕೆ ತೆಗೆದುಕೊಂಡರೆ ಅಂಥವರ ವಿರುದ್ಧ ನಾವು ಪ್ರತಿಭಟಿಸುತ್ತೇವೆ'' ಇದು ಪ್ರೊಫೆಸರ್ ನಂಜುಂಡಸ್ವಾಮಿಯವರ ಹೇಳಿಕೆ ''ಇದು ಅಪರೂಪವಾಗಿರತಕ್ಕಂಥ ಸರ್ಕಾರ, ರೈತರ ಬಗ್ಗೆ ಕಳಕಳಿ ಇರತಕ್ಕಂಥ ಸರ್ಕಾರ, ಈ ಸರ್ಕಾರಕ್ಕೆ ರೈತರ ಬಗ್ಗೆ ಒಳ್ಳೆಯ ಹೃದಯ ಇವೆ. ಇಂತಹ ಸರ್ಕಾರ ಇಡೀ ಕರ್ನಾಟಕ ರಾಜ್ಯ ರೈತರ ಹಿತರಕ್ಷಣೆ ಮಾಡಲಿಕ್ಕೆ ಸಿದ್ಧವಾಗಿದೆ. ಆದ್ದರಿಂದ ಯಾರೂ ಕೂಡ ಈ ಸರ್ಕಾರಕ್ಕೆ ಕೊಟ್ಟಿರುವ ಬೆಂಬಲವನ್ನು ಕಿಂಚಿತ್ತೂ ಕಡಿಮೆ ಮಾಡಕೂಡದು' ಎಂದು ಅವರು ಹೇಳಿದರು. ನಾವೂ ಕೂಡ ಸಂತೋಷ ಪಟ್ಟೆವು. ಒಳ್ಳೆಯ ಪ್ರಜಾಪ್ರಭುತ್ವ ರೀತಿಯಲ್ಲಿ ಸರ್ಕಾರ ಬರುತ್ತಿದೆ. ಎಲ್ಲರಿಗೂ ಒಳ್ಳೆಯದಾಗುತ್ತದೆ ಎನ್ನುವ ಕಲ್ಪನೆ ನಮಗೂ ಬಂತು, ನಿಮಗೂ ಬಂತು. ಎಲ್ಲರಿಗೂ ಬಂತು. ಆದರೆ ಹಿಂದೆ ಯಾರು ಬೆಂಬಲವನ್ನು ವ್ಯಕ್ತಪಡಿಸಿದ್ದರೋ, ಅದೇ ರೈತಸಂಘದವರೇ, ''ಈ ಸರ್ಕಾರವನ್ನು ಉರುಳಿಸುವವರೆಗೆ ನಾವು ಬಿಡುವುದಿಲ್ಲ''. ಎಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ''ರಾಮಕೃಷ್ಣ

ಹೆಗಡೆಯವರನ್ನು ಅಧಿಕಾರದಿಂದ ಕೆಳಗೆ ಇಳಿಸುವವರೆಗೆ ನಾವು ಸುಮ್ಮನೆ ಕೂರುವುದಿಲ್ಲ'' ಎನ್ನುವ ನಿಲುವಿಗೆ ರೈತಸಂಘದವರು ಈಗಾಗಲೇ ಬಂದಿದ್ದಾರೆ. ಆದ್ದರಿಂದ ಯಾರ ಬೆಂಬಲವನ್ನು ಆಗಿನ ಇಸವಿಯ ಜನವರಿ ತಿಂಗಳಿನಲ್ಲಿ ನಡೆದ ಚುನಾವಣೆಯಲ್ಲಿ ಉಪಯೋಗಪಡಿಸಿಕೊಂಡಿರೋ, ಅದರ ದುರುಪಯೋಗ ಪಡಿಸಿಕೊಂಡಿರೋ ಅದೇ ರೈತ ಸಂಘದವರು ನಿಮ್ಮ ಮೇಲೆ ಇಂದು ನಿಮ್ಮ ಆಡಳಿತ ವೈಖರಿಯ ಪರಿಣಾಮವಾಗಿ ತಿರುಗಿ ಬಿದ್ದಿದ್ದಾರೆ. ನಾನು ನಿಜವಾಗಿಯೂ ರೈತಸಂಘದವರನ್ನು ಅಭಿನಂದಿಸುತ್ತೇನೆ. ಕಟು ಸತ್ಯವನ್ನು ಅತೀ ಕಡಿಮೆ ಕಾಲದಲ್ಲಿ ಅವರು ತಿಳಿದುಕೊಂಡಿದ್ದಾರೆ. ರಾಮಕೃಷ್ಣ ಹೆಗಡೆಯವರ ಮುಂದಾಳುತನದಲ್ಲಿರುವ ಸರ್ಕಾರದ ಕಾರ್ಯ ನೀತಿಯನ್ನು ತಿಳಿದುಕೊಂಡ ತಕ್ಷಣ ಅವರ ಬಗ್ಗೆ ಮುಂಚಿದ್ದ ಅಭಿಪ್ರಾಯವನ್ನು ಬದಲಾವಣೆ ಮಾಡಿದರಲ್ಲ, ಅದಕ್ಕಾಗಿ ರೈತಸಂಘದವರನ್ನು ಈ ಸಂದರ್ಭದಲ್ಲಿ ನಾನು ಅಭಿನಂದಿಸುತ್ತೇನೆ. ಈ ಕಟು ಸತ್ಯವನ್ನು ಅವರು ಬಹಳ ಬೇಗನೇ ಪತ್ತೆಹಚ್ಚಿದರು. ಮಾನ್ಯ ಅಧ್ಯಕ್ಷರೇ, ಕನಕಪುರದಲ್ಲೂ ಅಷ್ಟೆ. ಅದು ಅವರ ಸೇವಾಕ್ಷೇತ್ರ ಇವತ್ತು ಪತ್ರಿಕೆಗಳಲ್ಲಿ ಬೇಕಾದಷ್ಟು ಬಂದಿದೆ. ಈಗಾಗಲೇ ರೈತರು ಶಾಂತರೀತಿಯಿಂದ ಚಳುವಳಿ ಮಾಡಿದಾಗ ಗೂಂಡಾಗಿರಿಯನ್ನು ಮಾಡಿದರು. ರೈತರು ಶಾಂತವಾಗಿಯೇ ನಡೆದುಕೊಂಡರು. ಇಲ್ಲದಿದ್ದರೆ ಅಹಿತಕರವಾದ ಘಟನೆಗಳು ನಡೆಯುತ್ತಿದ್ದವು. ಶಾಂತಯುತವಾಗಿ ಅವರು ಇವತ್ತು ಚಳುವಳಿಯನ್ನು ಮುಂದುವರೆಸುತ್ತಿದ್ದಾರೆ. ಆದರೂ ಕೂಡ ಪ್ರಚೋದನೆ ಸರ್ಕಾರದ ಪೋಲೀಸ್ ಇಲಾಖೆಯಿಂದ ಚಿಕ್ಕಮಗಳೂರಿನಲ್ಲಿ ಚಳುವಳಿಯಲ್ಲಿ ಬಂತು ಎಂಬುದನ್ನು ಪತ್ರಿಕೆಯಲ್ಲಿ ನೋಡಿದ್ದೇವೆ. ಈ ವಿಚಾರದಲ್ಲಿ ಶ್ರೀಮಾನ್ ಗೋವಿಂದ ಗೌಡರು ಪ್ರಸ್ತಾಪ ಮಾಡಿದ ಮೇಲೆ ತನಿಖೆ ಮಾಡುತ್ತೇವೆ ಎಂಬ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ನಾನು ಕೇಳುತ್ತಿದ್ದೇನೆ ಏನೆಂದರೆ ತಪ್ಪಿತಸ್ಥ ಪೋಲೀಸ್ ಅಧಿಕಾರಿಗಳ ಮೇಲೆ ತತ್‌ಕ್ಷಣ ಕ್ರಮ ತೆಗೆದುಕೊಳ್ಳದೇ ಇದ್ದರೆ ರೈತಸಂಘದವರು ಹಾಗೆಯೇ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ರೈತರು ಸುಮ್ಮನೆ ಕೂರುವುದಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಫೈರಿಂಗ್ ಮಾಡಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ ಯಾವುದೇ ಸರ್ಕಾರದ ಪರವಾಗಿ ನಾವು ಇಲ್ಲಿ ವಕಾಲತ್ತು ಮಾಡುವುದಕ್ಕೆ ಬಂದಿಲ್ಲ. ಆದರೆ ಹಿಂದಿನ ಸರ್ಕಾರ ಚಳುವಳಿ ನಡೆದಾಗ ಗೋಳಿಬಾರು ಆಗಿ ಜನ ಸತ್ತದ್ದು ನಿಜ. ಯಾವುದೇ ಸರ್ಕಾರ ಬರಲಿ ಜನರು ಸಾಯುವುದು ಬೇಡ. ರೈತರು ಬಹಳ ಅಮೂಲ್ಯವಾಗಿರತಕ್ಕಂಥ ಜೀವಿಗಳು. ಈ ಜೀವಗಳನ್ನು ಕಾಯತಕ್ಕಂಥ ಜವಾಬ್ದಾರಿ ಎಲ್ಲರ ಮೇಲೂ ಇದೆ. ಅಂತಹ ವಾತಾವರಣವನ್ನು ಸೃಷ್ಟಿ ಮಾಡುವ ಅಭಿಪ್ರಾಯವನ್ನು ಯಾರಾದರೂ ಕೂಡ ಇಟ್ಟುಕೊಳ್ಳಬಾರದು. ಎಲ್ಲರ ಜೀವಗಳೂ ಕೂಡ ಅಮೂಲ್ಯವಾಗಿರತಕ್ಕಂಥಾದ್ದು, ಮಾನ್ಯ ಅಧ್ಯಕ್ಷರೇ, ಇಲ್ಲಿ ಅನೇಕ ಸಂಘಗಳು ಇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಎಚ್.ಎಸ್. ರುದ್ರಪ್ಪನವರ ಸಂಘ ಅಲ್ಲದೆ, ಶ್ರೀಮಾನ್ ಸೂರ್ಯನಾರಾಯಣರದ್ದು ರೈತರ ಬಗ್ಗೆ ಕಳಕಳಿ ಇರತಕ್ಕಂಥ ಪಕ್ಷ. ಅವರ ಪಕ್ಷದ ರೈತ ಸಂಘ ಇದೆ. ಅದೇ ರೀತಿ ಸಿ.ಪಿ.ಐ. ಪಕ್ಷ ಇದೆ. ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಶ್ರೀಮಾನ್ ರೇವಣ್ಣಸಿದ್ದಪ್ಪನವರ ರೈತ ಸಂಘ ಇದೆ. ಶ್ರೀಮಾನ್ ರೇವಣ್ಣಸಿದ್ದಪ್ಪನವರ ಸಂಘ ರಚನೆಯಾದ ಮೇಲೆ ಕರ್ನಾಟಕ ರಾಜ್ಯದಲ್ಲಿ ಬೇರೆ ಯಾವ ಪ್ರಬಲವಾದ ರೈತಸಂಘಗಳೂ ಇಲ್ಲವೆಂದು ನಾನು ಅಭಿಪ್ರಾಯ ಪಡುವುದಿಲ್ಲ. ಸಂಘಗಳು ಅನೇಕ ಇದ್ದಾವೆ. ಸಂಘ ದೊಡ್ಡದು ಇರಬಹುದು, ಸಣ್ಣದು ಇರಬಹುದು ಎಲ್ಲರನ್ನೂ ಕರೆದು ಮಾತನಾಡದಿರಿ. ಆದರೆ ತಾವು ಸರ್ಕಾರವನ್ನು ರಚನೆ ಮಾಡಿದ ಮೇಲೆ ಯಾವ ಕರ್ನಾಟಕ ರಾಜ್ಯ ರೈತ ಸಂಘವನ್ನು ಜನವರಿ ತಿಂಗಳು ಚುನಾವಣೆ ಕಾಲದಲ್ಲಿ ಉಪಯೋಗಮಾಡಿಕೊಂಡರೋ, ಅದೇ ಸಂಘವನ್ನು ಒಡೆಯತಕ್ಕಂಥ ಪ್ರಯತ್ನವನ್ನು ರಾಮಕೃಷ್ಣ ಹೆಗಡೆಯವರು, ಅವರ ಮಂತ್ರಿಮಂಡಲದ ಸಹದ್ಯೋಗಿಗಳು ಮಾಡಿದ್ದಾರೆ, ಅಂತಹ ಪ್ರಯತ್ನಕ್ಕೆ ಕೈಹಾಕಿದ್ದಾರೆ. ಈ ವಿಚಾರ ನನಗೆ ಸ್ಪಷ್ಟವಾಗಿ ಗೊತ್ತಿರತಕ್ಕಂಥಾದ್ದು ಅದಕ್ಕಾಗಿ ಈ ರೈತಸಂಘ ಮುಂದೆ ಪ್ರಬಲವಾಗಿ ಬೆಳೆದರೆ ಸರ್ಕಾರಕ್ಕೆ ತೊಂದರೆಯಾಗಬಹುದು ಎಂದು ಅದನ್ನು ಒಡೆಯತಕ್ಕಂಥ ಪ್ರಯತ್ನವನ್ನು ಮಾಡಿದ್ದರಿಂದ, ಅದರ ಪರಿಣಾಮವಾಗಿ ರೇವಣಸಿದ್ದಪ್ಪನವರು ಅಧ್ಯಕ್ಷರಾಗಿರುವಂಥ ರೈತಸಂಘ ಹುಟ್ಟಿತು. ಈ ಸಂಘದ ಉದ್ಘಾಟನೆಗೆ ಯಾರ್ಯಾರು ಹೋಗಿದ್ದಾರೆ. ನಿಮ್ಮ ಬೆಂಬಲಿಗರು ಮತ್ತು ಸ್ನೇಹಿತರು ಹೋಗಿ, ನನಗೆ ನೆನಪಿರುವ ಹಾಗೆ......

ಶ್ರೀ ಎಸ್.ಆರ್. ಬೊಮ್ಮಾಯಿ.—ರೈತಸಂಘ ಇಬ್ಭಾಗವಾದದ್ದು ಚುನಾವಣೆಗಿಂತ ಮೊದಲು.

ಶ್ರೀ ಎಸ್. ಬಂಗಾರಪ್ಪ.—ಅದರ ಉದ್ಘಾಟನೆ ಆದದ್ದು ನಿಮ್ಮಿಂದ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮಗೆ ಗೊತ್ತಿದೆ. ಅದು ಆದದ್ದು ಚುನಾವಣೆಗಿಂತ ಮೊದಲು. ಚುನಾವಣೆ ಆದಮೇಲೆ ಅಲ್ಲ.

ಶ್ರೀ ಎಸ್. ಬಂಗಾರಪ್ಪ.—ಆದರೆ ಅದನ್ನು ಎಲ್ಲರೂ ಉಪಯೋಗಿಸಿಕೊಂಡರು.

ಶ್ರೀ ಎಂ. ಪಿ. ಪ್ರಕಾಶ್(ಸಾರಿಗೆ ರಾಜ್ಯ ಮಂತ್ರಿಗಳು).—ಮಾನ್ಯ ಬಂಗಾರಪ್ಪನವರಿಗೆ ಒಂದು ವಿಷಯವನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ಶ್ರೀಮಾನ್ ರೇವಣಸಿದ್ದಯ್ಯ ನವರು ಹಿಂದೆ ಅವರು ಕರ್ನಾಟಕ ರೈತ ಸಂಘದ ಉಪಾಧ್ಯಕ್ಷರಾಗಿದ್ದರು. ಅವರು ಚುನಾವಣೆ ಸಂದರ್ಭದಲ್ಲಿ ರೈತ ಸಂಘದಿಂದಲೇ ನೇರವಾಗಿ ಅವರು ಭಾಗವಹಿಸಬೇಕೇ ಬೇಡವೇ ಎನ್ನುವ ಪ್ರಶ್ನೆ ಬಂದಾಗ ಆವಾಗ ಶ್ರೀಮಾನ್ ಹೆಚ್. ಎಸ್. ರುದ್ರಪ್ಪನವರ ರೈತಸಂಘದವರು ಅವರನ್ನು ಬೇಡ ಎಂದು ಕಿತ್ತು ಹಾಕಿದರು. ಆದ್ದರಿಂದ ಅವರು ತಮ್ಮ ಒಂದು ರೈತ ಸಂಘವನ್ನು ಮುಂಚೆ ನಿಂದಲೆ ಪ್ರತ್ಯೇಕವಾಗಿ ಮಾಡಿಕೊಂಡು ಬಂದಿದ್ದಾರೆ. ಅವರು ಈಗ ಹೊಸದಾಗಿ ಆ ರೈತ ಸಂಘ ವನ್ನು ರಚಿಸಿಕೊಂಡಿದಲ್ಲ.

ಶ್ರೀ ಎಸ್. ಬಂಗಾರಪ್ಪ.—ಈ ಸಂದರ್ಭದಲ್ಲಿ ನಾನು ಒಂದು ಮಾತು ಹೇಳುತ್ತೇನೆ. ಮಾನ್ಯ ರಾಜ್ಯ ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್‌ರವರು ಶ್ರೀಮಾನ್ ರೇವಣ್ಣಸಿದ್ದಯ್ಯನವರ ಜಿಲ್ಲೆಯ ವರಾದ ಬಳ್ಳಾರಿಯವರೇ. ಅದಕ್ಕೆ ಅವರು ಆ ಮಾತು ಹೇಳಿದರು. ಮತ್ತೇನು ಹೇಳಿದರು ಎಂದರೆ ಅವರು ಹಿಂದೆ ಚುನಾವಣೆಯಲ್ಲಿ ಭಾಗವಹಿಸಬೇಕೇ ಬೇಡವೇ ಅನ್ನು ಪ್ರಶ್ನೆ ಬಂದಾಗ ಭಿನ್ನಾಭಿಪ್ರಾಯ ಬಂದು ಅವರನ್ನು ಹೊರಗಡೆ ಹಾಕಿದರು ಅನ್ನು ಮಾತನ್ನು ಹೇಳಿದರು. ಆ ಒಳ್ಳೆಯ ಸುಸಂದರ್ಭವನ್ನು ಅವರು ಉಪಯೋಗಿಸಿಕೊಂಡು ಅದರ ಒಂದು ಹಿನ್ನೆಲೆಯಲ್ಲಿ ಈ ಒಂದು ಪ್ರತ್ಯೇಕವಾದ ಸಂಘವನ್ನು ಕಟ್ಟಿದರು. ಆದರೆ ನಾನು ಈ ಸಂದರ್ಭದಲ್ಲಿ ಅವರ ವಿಚಾರ ವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಮುಂದೆ ಸಂದರ್ಭ ಬಂದಾಗ ಹೇಳುತ್ತೇನೆ. ಅದೇನೇ ಇರಲಿ ಮಾನ್ಯ ಉಪಾಧ್ಯಕ್ಷರೇ ಈ ಬಂದು ಸಂದರ್ಭವನ್ನು ಉಪಯೋಗಿಸಿಕೊಂಡು ಅವರ ಸಂಘವನ್ನು ಬೆಳೆಸುವುದಕ್ಕೆ ಸರ್ಕಾರದವರೆ ಪ್ರಚೋದನೆ ಮಾಡುತ್ತಿದ್ದಾರೆ. ಎನ್ನುವ ಮಾತನ್ನು ನಾನು ಹೇಳ ಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಒಂದು ವಿಷಯವನ್ನು ಅವರ ಗಮನಕ್ಕೆ ತರು ತ್ತೇವೆ. ಅದೇನೆಂದರೆ ಈ ವಿಚಾರದಲ್ಲಿ ಮಾನ್ಯ ರುದ್ರಪ್ಪನವರಿಗೂ ಮತ್ತು ಮಾನ್ಯ ರೇವಣ ಸಿದ್ದಯ್ಯನವರಿಗೂ ಹೊಂದಾಣಿಕೆ ಮಾಡಲು ನಾನು ಮೂರು ಬಾರಿ ಪ್ರಯತ್ನ ಮಾಡಿದ್ದೇನೆ. ಆ ಎರಡೂ ಸಂಘಗಳೂ ಒಂದೇ ಆಗಬೇಕು ಅನ್ನುವ ಉದ್ದೇಶದಿಂದ ನಾನು ೩ ಬಾರಿ ಸಭೆಯನ್ನು ಕರೆಯಲು ಪ್ರಯತ್ನ ಮಾಡಿದೆ.

ಶ್ರೀ ಎಸ್. ಬಂಗಾರಪ್ಪ.—ಈ ಸಂದರ್ಭದಲ್ಲಿ ನಾನು ಒಂದು ಮಾತು ಹೇಳುತ್ತೇನೆ. ಅದೇನೇ ಇರಲಿ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುವಾಗ ಏನು ಹೇಳಿದರು ಎಂದರೆ ಮಾನ್ಯ ರುದ್ರಪ್ಪ ನವರು ಒಳ್ಳೆಯವರು ಅನ್ನುವ ಮಾತನಾಡಿದರು. ಅವರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದನ್ನು ನಾನು ಬರೆದು ಇಟ್ಟುಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಅವರೊಬ್ಬರನ್ನೇ ಒಳ್ಳೆಯವರು ಅಂತ ಹೇಳಿದ ಮೇಲೆ ಇನ್ನು ಇಬ್ಬರು ಇದ್ದಾರಲ್ಲಾ ಯಾರೆಂದರೆ ಪ್ರೊಫೆಸರ್ ನಂಜುಂಡಸ್ವಾಮಿ ಮತ್ತು ಶ್ರೀ ಸುಂದರೇಶ್ ಇವರಿಬ್ಬರನ್ನೂ ಕೂಡ ಅವರು ಒಳ್ಳೆಯವರು ಅಂತ ಹೇಳದೇ ಇರುವುದರಿಂದ ಅವರು ಒಳ್ಳೆಯವರಲ್ಲ ಅನ್ನುವ ಭಾವನೆ ಆಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಹಾಗಾದರೆ ನಾನು ಒಂದು ಮಾತು ಹೇಳುತ್ತೇನೆ ಏನೆಂದರೆ ಶ್ರೀ ಬಂಗಾರಪ್ಪನವರು ಒಳ್ಳೆಯವರು ಎಂದು ಹೇಳಿದ ಮಾತ್ರಕ್ಕೇನೇ ಶ್ರೀಮಾನ್ ಶ್ರೀಕಂಠಯ್ಯ ನವರು ಒಳ್ಳೆಯವರಲ್ಲ ಅನ್ನುವ ಅರ್ಥ ಹೇಗಾಗುತ್ತದೆ. ಯಾವುದಕ್ಕೂ ಸಹ ಒಂದು ಮಿತಿ ನಿಯಮ ಇದೆ. ಎಲ್ಲದರ ಬಗ್ಗೆಯೂ ತರ್ಕ ಮಾಡುತ್ತಾ ಹೋದರೆ ಕೊನೆಗೆ ಅದು ವಿತರ್ಕ ವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ಲಕ್ಷ್ಮೀಸಾಗರ್‌ರವರ ವಿಚಾರದ ಬಗ್ಗೆ ಆಮೇಲೆ ಮಾತನಾಡುತ್ತೇನೆ. ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಮೊದಲೇ ಹೇಳಿದ ಹಾಗೆ ಶ್ರೀಮಾನ್ ಹೆಚ್. ಎಸ್. ರುದ್ರಪ್ಪನವರು ಒಳ್ಳೆಯವರು ಎಂದು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರೋ ಅದರ ಹಿನ್ನೆಲೆ ಏನು ಅನ್ನುವುದು ನನಗೂ ಗೊತ್ತಿದೆ. ಆದರೆ ವಿವರಗಳನ್ನು ಈ

ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ ಅದನ್ನು ಬಹಿರಂಗಪಡಿಸುವುದಕ್ಕೂ ಕೂಡ ನನಗೆ ಇಷ್ಟವಿಲ್ಲ. ನಿಮಗೂ ಇಷ್ಟವಿರುವುದಿಲ್ಲ. ಅದರ ಮಾಹಿತಿ ನನ್ನ ಹತ್ತಿರ ಇದೆ, ಸಂದರ್ಭ ಬಂದಾಗ ಅದನ್ನು ಉಪಯೋಗ ಮಾಡಿಕೊಳ್ಳೋಣ. ಅದೇನೇ ಇರಲಿ, ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ಶ್ರೀಮಾನ್ ಹೆಚ್.ಎಸ್. ರುದ್ರಪ್ಪನವರು ಒಳ್ಳೆಯವರು ಎಂದು ಏತಕ್ಕೆ ಹೇಳಿದರು ನಮಗೂ ಗೊತ್ತಾಗಿದೆ, ಅವರಿಗೂ ಗೊತ್ತಾಗಿದೆ. ಏತಕ್ಕೆಂದರೆ ಮೊದಲನೆಯದಾಗಿ ಹೇಳಬೇಕಾದರೆ ಅವರು ಯಜಮಾನರು, ಎರಡನೆಯದಾಗಿ ಅವರಿಗೆ ವಯಸ್ಸಾಗಿದೆ. ಅವರ ಸ್ವಭಾವ ನಮಗೂ ಗೊತ್ತು, ನಿಮಗೂ ಗೊತ್ತು. ಅವರು ಯಾವ ಕೆಲಸವನ್ನೇ ಮಾಡಲಿ ಒಂದು ತರಹ ಕಪಿಮುಷ್ಟಿ ಇದ್ದ ಹಾಗೆ. ಅವರು ಹಿಡಿದ ಸ್ವಭಾವ ಬಿಡುವವರಲ್ಲ, ಇದರಲ್ಲಿ ಇನ್ನಿಬ್ಬರು ರಾಜಕಾರಿಣಿಗಳು ಏನು ಇದ್ದಾರೆ ಪ್ರೊ. ನಂಜುಂಡಸ್ವಾಮಿ ಮತ್ತು ಶ್ರೀ ಸುಂದರೇಶ್ ಅವರು ಇವರು ಹೇಳಿದ ಹಾಗೆ ಕೇಳುವವರಲ್ಲ, ಅದಕ್ಕೆ ಅವರು ಒಳ್ಳೆಯವರಲ್ಲ ಅಂತ ನನ್ನ ಅಭಿಪ್ರಾಯ. ಕೆಲವು ಸಂದರ್ಭದಲ್ಲಿ ಒಳ್ಳೆಯವರು ಚಳುವಳಿ ಮಾಡಿದರೂ ಕೂಡ ಅವರು ನಮಗೆ ಕೆಟ್ಟವರಾಗುತ್ತಾರೆ, ಇವರ ಅರ್ಥದಲ್ಲಿ ನನಗೆ ಸ್ಪಷ್ಟವಾಗಿ ಗೊತ್ತಾಯಿತು. ಈ ಸಂದರ್ಭದಲ್ಲಿ ನಾನು ಹೇಳಬೇಕಾದರೆ ಈ ರೇವಣ್ಣಸಿದ್ದಯ್ಯನವರು ಪ್ರತ್ಯೇಕವಾಗಿ ರೈತ ಸಂಘವೊಂದನ್ನು ಕಟ್ಟುವಂತೆ ಪ್ರಯತ್ನ ಮಾಡಿ ಶ್ರೀಮಾನ್ ಹೆಚ್. ಎಸ್. ರುದ್ರಪ್ಪನವರು ಒಂದು ರೈತ ಸಂಘಕ್ಕೆ ಬೆಂಕಿ ಬೀಳುವ ಹಾಗೆ ಮಾಡಿದರು. ಇವರು ರೈತ ಸಂಘವನ್ನು ಒಗ್ಗಟ್ಟು ಮಾಡುವ ಕೆಲಸವನ್ನು ಮಾಡುವುದರ ಬದಲು ಹಿಡಿಯುವ ಕೆಲಸಕ್ಕೆ ನೇರವಾಗಿ ಕೈಹಾಕಿದ್ದಾರೆ ಅನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇವರಿಗೆಲ್ಲಾ ಟೆಲಿಗ್ರಾಂ ಕಳುಹಿಸಿದ್ದು, ಇವರಿಗೆಲ್ಲಾ ಹೇಳಿ ಕಳುಹಿಸಿದ್ದು ಹಾಗೂ ಶ್ರೀಮಾನ್ ಬೊಮ್ಮಾಯಿನವರ ಮುಖಾಂತರವೆ ಸಭೆಯನ್ನು ಕರೆಯುವ ಏರ್ಪಾಡು ಮಾಡಿದ್ದು ನೋಡಿದರೆ ಇವರು ಈ ಸಂಘವನ್ನು ಒಡೆಯುವ ಕೆಲಸಕ್ಕೆ ಕೈಹಾಕಿದ್ದಾರೆ ಅಂತ ಹೇಳಬಹುದೇ ವಿನಾ ಅವರಲ್ಲಿ ಒಗ್ಗಟ್ಟು ಮಾಡಿಸುವುದಕ್ಕಲ್ಲ ಅನ್ನುವುದು ಗೊತ್ತಾಗುತ್ತದೆ.

ಉಪಾಧ್ಯಕ್ಷರು.—ತಾವು ತಮ್ಮ ಭಾಷಣವನ್ನು ಸಭೆಯ ಮುಂದೆ ಇರತಕ್ಕಂಥಾ ವಿಷಯಕ್ಕೆ ಮಾತ್ರ ಸೀಮಿತಗೊಳಿಸಬೇಕು. ಇದರಲ್ಲಿ ಒಡೆಯುವ ಕೆಲಸ ಅನ್ನುವುದು ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ಸಂಬಂಧಪಟ್ಟಂತೆ ಮಾತನಾಡಬೇಕಾದರೆ ಇದರ ಬಗ್ಗೆ ಸ್ವಲ್ಪವಾದರೂ ಸಹ ಹಿನ್ನೆಲೆಯನ್ನು ಹೇಳಬೇಕಾಗುತ್ತದೆ. ಇವರು ಅರೆಸ್ಟ್ ಬಗ್ಗೆ ಮಾತನಾಡಿರುವುದು ಹಾಗೂ ವಾರೆಂಟ್ ಬಗ್ಗೆ ಮಾತನಾಡಿರುವುದನ್ನು ನೋಡಿದರೆ, ಸರ್ಕಾರದ ಬಗ್ಗೆ ಯಾವ ರೈತ ಸಂಘಕ್ಕಾದರೂ ನಂಬಿಕೆ ಇಲ್ಲದೇ ಹೋಗಿದೆ. ಅದಕ್ಕೋಸ್ಕರ ನಾನು ಈ ಮಾತನ್ನು ಹೇಳುತ್ತಿದ್ದೇನೆ. ರೈತ ಸಂಘವನ್ನು ಒಡೆಯುವ ಒಂದು ಸನ್ನಿವೇಶ ಬಂದಾಗ ಅದು ಯಾವ ಸರ್ಕಾರವೇ ಇರಲಿ ಆ ಸರ್ಕಾರದಲ್ಲಿ ರೈತರ ನಂಬಿಕೆ ಇಟ್ಟುಕೊಳ್ಳುವುದು ಹೇಗೆ? ರೈತ ಸಂಘವನ್ನು ಒಡೆಯುವ ಕೆಲಸ ಮಾಡುತ್ತಾರೆ ಅನ್ನುವುದರ ಬಗ್ಗೆ ಅವರಿಗೆ ಅನುಮಾನ ಬಂದಾಗ, ಆ ರೈತರಿಗೆ ಕೋಪ ಬಂದಾಗ, ನಂಬಿಕೆ ಬರದೇ ಇದ್ದಾಗ ನೀವು ಮೋಸ ಮಾಡುತ್ತೀರಿ ಅನ್ನುವ ಅನುಮಾನ ಆ ಜನರಿಗೆ ಉಂಟಾಗುತ್ತದೆ. ಅದಕ್ಕೋಸ್ಕರವಾಗಿ ನಾನು ಈ ಮಾತನ್ನು ಆಡಿದೆ. ಈವೊತ್ತಿನ ದಿವಸ ರೈತರು ಇದರ ಬಗ್ಗೆ ಏನು ಕಣ್ಣೀರು ಹಾಕುತ್ತಿದ್ದಾರೆ ಅದನ್ನು ತಪ್ಪಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು. ತಾವು ಅವರಿಗೆ ನಂಬಿಕೆ ಬರುವ ಮಾತನಾಡಬೇಕು. ಕರ್ನಾಟಕ ರಾಜ್ಯದ ರೈತ ಸಂಘ ಚೆನ್ನಾಗಿ ಬೆಳೆಯಲಿ ಅನ್ನುವ ಭಾವನೆ ತಮ್ಮಲ್ಲಿರುವ ಹಾಗೆ ಅವರಿಗೆ ಉಂಟಾಗಬೇಕು. ಒಡೆಯುವಂಥಾ ಕೆಲಸ ಮಾಡಬಾರದು. ತಮ್ಮಲ್ಲಿ ಆ ಅಭಿಪ್ರಾಯ ಬಂದಿಲ್ಲವಾದ್ದರಿಂದ ಆ ರೈತ ಸಂಘದ ಮುಖಂಡರು ಹೀಗೆ ಹೇಳಿದ್ದಾರೆ. ಏನೆಂದರೆ ಅವರು ತಮ್ಮಲ್ಲಿ ಮಾತುಕತೆಗೆ ಬರಬೇಕಾದರೆ ಈ ಒಂದು ಕಂಡೀಷನ್ ಹಾಕಿದ್ದಾರೆ. ನಮ್ಮ ಬೇಡಿಕೆಗಳನ್ನು ಒಪ್ಪಿಕೊಂಡರೆ ನಿಮ್ಮ ಮಾತುಕತೆಗೆ ಬರುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ತಪ್ಪೇನಿದೆ? ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯ ಪ್ರಕಾರ ನಾವು ವಿಚಾರ ಮಾಡುವುದಾದರೆ ನಿಮ್ಮ ದಾರಿ ನಿಮಗೆ, ನಮ್ಮ ದಾರಿ ನಮಗೆ ಅಂತ ಅನ್ನುವುದಾದರೆ ಇದರ ಒಂದು ಪರಿಣಾಮ ಸಾರ್ವಜನಿಕರಿಗೆ ಮುಟ್ಟುತ್ತದೆ. ಆ ರೀತಿ ಸಾರ್ವಜನಿಕರಿಗೆ ಮುಟ್ಟುವುದಾದರೆ ಇದರಿಂದ ಎಷ್ಟು ಕಷ್ಟನಷ್ಟಗಳಾಗುತ್ತದೆ ಅನ್ನುವುದು ಗೊತ್ತಿದೆ. ಆದುದರಿಂದಲೇ ನಾನು ಹೇಳುವುದೇನೆಂದರೆ ಏನಾದರೂ ಮಾಡಿ ಈ ರೈತ ಚಳುವಳಿಯನ್ನು ನಿಲ್ಲಿಸಲು ಪ್ರಯತ್ನ ಮಾಡಬೇಕು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದನ್ನು ತಪ್ಪಿಸಬೇಕು. ಅವರು ತಮ್ಮ ಬೇಡಿಕೆಗಳನ್ನು ಏನು ಇಟ್ಟಿದ್ದಾರೋ ಅದರಲ್ಲಿ ಯಾವುದಾದರೂ ನ್ಯಾಯವಾದ ಬೇಡಿಕೆ ಇದ್ದರೆ ಅದನ್ನು ವಿಮರ್ಶೆ ಮಾಡುತ್ತೇನೆಂದು ಸ್ಪಷ್ಟವಾಗಿ ಹೇಳಿದರೆ ಅವರು ತಿಳಿದುಕೊಳ್ಳುತ್ತಾರೆ, ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಕರ್ನಾಟಕ ರಾಜ್ಯದ ರೈತ ಸಂಘಕ್ಕೆ ಸಂಬಂಧಪಟ್ಟ ಹಾಗೆ ಅವರ ಸಮಸ್ಯೆ

ಗಳ ಬಗ್ಗೆ ಹಿಂದೆ ನನ್ನ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಅದೇರೀತಿ ಅಭಿಪ್ರಾಯವನ್ನು ಅವರು ಈಗಲೂ ಇಟ್ಟುಕೊಂಡಿದ್ದಾರೆ ಎನ್ನುವ ಮಾತನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಾವು ಈ ರೈತ ವರ್ಗವನ್ನು ಸಂಪೂರ್ಣವಾಗಿ ಕೈಬಿಡದೆ ಅವರಿಗೆ ಅನುಕೂಲವಾಗುವ ಹಾಗೆ, ಅವರಿಗೆ ನಂಬಿಕೆ ಬರುವ ಹಾಗೆ ಮಾಡಬೇಕು. ತಾವು ಈ ರೈತರ ಬಗ್ಗೆ ಶಾಸನಸಭೆಯಲ್ಲಾಗಲಿ ಅಥವಾ ಹೊರಗಡೆಯಲ್ಲಾಗಲಿ ಕೊಟ್ಟಿರತಕ್ಕಂಥ ಹೇಳಿಕೆ ಬಗ್ಗೆ ಹೇಳಬೇಕಾದರೆ ಅದು ಯಾರಿಗಾದರೂ ಕೂಡ ಉದ್ರೇಕ ಬಂದಂತಾಗುತ್ತದೆ. ನಾನು ಕೆಲವು ಪೋಲೀಸ್ ಆಫೀಸರ್ಸ್ ಹತ್ತಿರ ಹೋಗಿದ್ದೆ. ಅವರ ಹೆಸರು ಹೇಳುವುದಿಲ್ಲ. ಏತಕ್ಕೆಂದರೆ ಅವರು ನಿಮ್ಮ ಕೈ ಕೆಳಗೆ ಕೆಲಸ ಮಾಡತಕ್ಕಂಥವರು, ಏನಾದರೂ ಹೇಳಿದರೆ ನಮಗೇನಾದರೂ ಮಾಡಿಯಾರು ಅನ್ನುವ ಭಯ ಇದೆ. ನೀವು ಇದರ ಬಗ್ಗೆ ಏನಾದರೂ ಹೇಳಿಕೆ ಕೊಟ್ಟರೆ ಅದು ಹುರುಪಾಗಿರಬೇಕು. ಆದರೆ ಅದು ಅಷ್ಟು ಹುರುಪಾಗಿಲ್ಲ. ಏತಕ್ಕೆಂದರೆ ನಾಳೆ ಒಂದು ವೇಳೆ ಏನಾದರೂ ಚಳುವಳಿಯಾದರೆ ಅವರನ್ನು ನೋಡಿ ಕೊಳ್ಳತಕ್ಕಂಥಾವರು ಯಾರು? ಪೋಲೀಸ್ ಇಲಾಖೆಯೇ ನೋಡಿಕೊಳ್ಳಬೇಕು. ಅವರಿಗೆ ಈವೊತ್ತಿನ ದಿವಸ ಬಹಳ ಕಷ್ಟ ಇದೆ. ಇದರ ಪರಿಣಾಮ ಏನಾಗುತ್ತದೆ, ಇದರಿಂದ ತೊಂದರೆ ಸಾರ್ವಜನಿಕರ ಮೇಲೆ ಬೀಳುತ್ತದೆ. ತಮಗೆ ಹೇಳಬೇಕಾದರೆ ಹಾಸನದಲ್ಲಿ ಚಳುವಳಿಯಾದಾಗ ತರಕಾರಿ ಮಾರುವವರ ಮೇಲೆ ಹಾಲು ಮಾರುವವರ ಮೇಲೆ ಹಾಗೂ ಇನ್ನೂ ಇತರರಿಗೆ ತೊಂದರೆಯಾಯಿತು. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಯಿತೇ ವಿನಾ ಇನ್ನಾರಿಗೂ ಅಲ್ಲ. ರಾಜ್ಯದಲ್ಲಿ ಯಾವುದಾದರೂ ಒಂದು ಚಳುವಳಿ ನಡೆದಾಗ, ಒಂದು ಬಂದ್ ನಡೆದಾಗ, ಸತ್ಯಾಗ್ರಹ ನಡೆದಾಗ ವ್ಯಾಪಕವಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತದೇ ವಿನಾ ಇನ್ನಾರಿಗೂ ತೊಂದರೆಯಾಗುವುದಿಲ್ಲ. ಈ ಒಂದು ಹಿನ್ನೆಲೆಯಿಂದ ಸಾರ್ವಜನಿಕರಿಗೆ ಯಾವ ರೀತಿಯಾಗಿ ತೊಂದರೆ ಉದ್ಭವಿಸುತ್ತದೆ ಅನ್ನುವುದನ್ನು ನಾವು ಯೋಚನೆ ಮಾಡಬೇಕು.

ಈ ಸಂದರ್ಭದಲ್ಲಿ ಸಾರ್ವಜನಿಕರಿಗೆ ತರಕಾರಿ ಸಿಗದಿದ್ದರೆ, ಹಾಲು ಸಿಗದಿದ್ದರೆ ಪ್ರಯಾಣಕ್ಕೆ ತೊಂದರೆ ಆಗಿದ್ದರೆ, ಯಾವುದೇ ರೀತಿಯಲ್ಲಿ ತೊಂದರೆಯಾಗಿದ್ದರೆ ಅದಕ್ಕೆ ನೇರವಾದ ಹೊಣೆಗಾರಿಕೆ ಯನ್ನು ಸರ್ಕಾರದವರೇ ವಹಿಸಿಕೊಳ್ಳಬೇಕಾಗುತ್ತದೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರದವರೆ ಪ್ರಾರಂಭ ಮಾಡಿರತಕ್ಕ ಈ ಕೆಲಸಕ್ಕೆ ಅವರೇ ಹೊಣೆಯಾಗಬೇಕಾಗುತ್ತದೆ. ಜೈಲು ಗಳ ಬಗ್ಗೆ ಪತ್ರಿಕೆಯಲ್ಲಿ ಬಂದಿರುವ ಕೆಲವು ವಿಚಾರಗಳನ್ನು ನಾವು ಓದಿದ್ದೇವೆ. ರೈತ ಚಳುವಳಿ ಯಿಂದಾಗಿ ಸುಮಾರು ೩೦ ಸಾವಿರ ಜನ ರೈತರು ಇದರಲ್ಲಿ ಭಾಗವಹಿಸಿ ಅರೆಸ್ಟ್ ಆಗಿರತಕ್ಕವರು ಸುಮಾರು ೨೬ ಸಾವಿರ ಜನ ಎಂದು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದೀರಿ, ಸುಮಾರು ೨೧ ಸಾವಿರ ಜನ ರೈತರು ಯಾವ ಯಾವ ಜೈಲುಗಳಲ್ಲಿ ಇದ್ದಾರೆ ಎನ್ನುವ ವಿವರಗಳನ್ನು ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಈ ವಿವರಗಳನ್ನು ತಾವು ತಮ್ಮ ಹೇಳಿಕೆಯಲ್ಲಿ ತಿಳಿಸಬೇಕಾಗಿತ್ತು. ಜೈಲಿನ ಹೊರಗಡೆ ಇರತಕ್ಕಂಥ ವರಿಗೆ ತಾವು ಆಹಾರವನ್ನು ಒದಗಿಸುತ್ತಿದ್ದೀರಿ ಎಂದರೆ ಏನು ಅರ್ಥ? ಜೈಲಿನಲ್ಲಿ ಇರತಕ್ಕ ರಾಜಕೀಯ ಬಂದಿ ಮತ್ತು ಕ್ರಿಮಿನಲ್ ಬಂದಿಗೂ ಯಾವ ಯಾವ ರೀತಿಯಲ್ಲಿ ಆಹಾರ ಮತ್ತು ಅನುಕೂಲಗಳನ್ನು ಕೊಡಬೇಕೆಂದು ಜೈಲ್ ಮ್ಯಾನ್ಯುಯಲ್‌ನಲ್ಲಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಜೈಲ್ ಮ್ಯಾನ್ಯುಯಲ್‌ನಲ್ಲಿ ಕ್ರಿಮಿನಲ್ಸ್ ಬಗ್ಗೆ ಹೇಳಲಾಗಿದೆಯೇ ಹೊರತು ಪೊಲಿಟಿಕಲ್ ಪ್ರಿಸನರ್ಸ್ ಬಗ್ಗೆ ಏನನ್ನೂ ಹೇಳಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಅನುಭವಕ್ಕೆ ನಾನು ಸಂತೋಷ ಪಡುತ್ತೇನೆ. ಮತ್ತು ತಮ್ಮನ್ನು ಅಭಿನಂದಿಸುತ್ತೇನೆ.

ಡಾ|| ವಿ. ಎಸ್. ಆಚಾರ್ಯ.—ಜೈಲಿನಲ್ಲಿ ಕ್ರೋಟೋನ್ ಸಾರನ್ನು ಮಾಡಿ ಕುಡಿಸಿದ್ದಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಪೊಲಿಟಿಕಲ್ ಪ್ರಿಸನರ್ಸ್ ಎನ್ನುವುದಕ್ಕೆ ಡೆಫಿನೇಷನ್ ಇಲ್ಲದೇ ಇರುವುದರಿಂದ ಇವರನ್ನು ಸಾಮಾನ್ಯ ಬಂದಿಗಳು ಎಂದು ಪರಿಗಣಿಸಲಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಬಂಧಿಗಳು ಎಂದರೆ ಪೋಲೀಸ್ ಸ್ಟೇಷನ್ನಿನಲ್ಲಿ ಇದ್ದು, ಅನ್ಯಾಯ ವನ್ನು ಅನುಭವಿಸಿದವರು ಸಾವಿರಾರು ಜನ ಇದ್ದು, ಅವರ ಮಧ್ಯದಲ್ಲಿ ಹುಟ್ಟಿ ಬಂದಿರತಕ್ಕ ಜನ ನಾವೂ ಕೂಡ ಇದ್ದೇವೆ. ಇಲ್ಲಿ ಬಂಧಿತರಿಗೆ ಆಹಾರವನ್ನು ಕೊಡತಕ್ಕ ನಿಯಮಗಳು ಏನೇನು ಇವೆ ಅದರ ಪ್ರಕಾರ ಅವರಿಗೆ ಆಹಾರವನ್ನು ಕೊಡಬೇಕು. ಇದರ ಬಗ್ಗೆ ತಮ್ಮ ಹೇಳಿಕೆಯಲ್ಲಿ ವಿವರಣೆ ಯನ್ನು ಕೊಡಬೇಕಾಗಿತ್ತು ಕೊಟ್ಟಿಲ್ಲ. ನಂತರ ಜೈಲುಗಳ ಕೆಪಾಸಿಟಿ ಎಷ್ಟು ಇತ್ತೋ ಅದನ್ನು

ಮಾರಿದಾಗ ಕೆಲವು ಕಡೆ ಬಯಲುಗಳಲ್ಲಿ ಬಂಧೀಖಾನೆಯನ್ನು ನಿರ್ಮಿಸಲಾಗಿದೆ. ಹಾಸನದಲ್ಲಿರತಕ್ಕ ಎಗ್ಗಿ ಮಿಷನ್ ಬಿಲ್ಡಿಂಗ್‌ನ್ನು ಬಂಧೀಖಾನೆಯಾಗಿ ಮಾಡಲಾಗಿತ್ತು. ಹಿಂದೆ ಬ್ರಿಟೀಷರ ಕಾಲದಲ್ಲಿ ಇದೇ ರೀತಿಯಾಗಿ ಚಳುವಳಿ ನಡೆದಾಗ ಬಂಧೀಖಾನೆಗಳನ್ನು ಪ್ರಕಟಣೆ ಮಾಡುತ್ತಿದ್ದರು. ಇದು ಹೊಸದೇನಲ್ಲ. ತಾವೂ ಅದನ್ನು ಮಾಡಿದ್ದೀರಿ. ಈ ಚಳುವಳಿಯಲ್ಲಿ ಕಾನೂನು ಪ್ರಕಾರ ದಸ್ತಗಿರಿ ಮಾಡಿದ ಮೇಲೆ ಅವರು ತಮ್ಮ ವಶದಲ್ಲಿಯೇ ಇರುತ್ತಾರೆ. ಅವನನ್ನು ತಮ್ಮ ವಶದಲ್ಲಿ ಇಟ್ಟುಕೊಳ್ಳುವುದಕ್ಕೆ ನಿಮ್ಮಿಂದ ಆಗಿಲ್ಲ. ಬೆಳಗಾಂ ಜೈಲಿನಲ್ಲಿರಬೇಕಾದಂಥವರು ಬೆಳಗಾಂ ನಗರದಲ್ಲಿ ಓಡಾಡಿಕೊಂಡು ಇದ್ದಾರೆ. ಇಂಥವರಿಗೆ ನೀವು ಊಟ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಆದರೆ ಅವರು ಹೊರಗಡೆ ಹೋಟೆಲ್‌ಗಳಲ್ಲಿ ಊಟ ಮಾಡಿಕೊಂಡು ರೋಡುಗಳಲ್ಲಿ ತಿರುಗಾಡುತ್ತಿದ್ದಾರೆ. ತಾವು ಇವರಿಗೆ ಕಾನೂನು ಪ್ರಕಾರ ಊಟ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಎಂಥಾ ಹೇಳಿಕೆ ನಿಮ್ಮದು. ಪತ್ರಿಕೆಯ ವರದಿಯನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ಬಳ್ಳಾರಿ ಜೈಲಿನಲ್ಲಿಯೂ ರಾಜಕೀಯ ಬಂಧಿತರನ್ನು ರೆಗ್ಯುಲರ್ ಕ್ರಿಮಿನಲ್ಸ್ ಜೊತೆಗೆ ಇಟ್ಟಾಗ ಅಲ್ಲಿ ಗಲಾಟೆ ನಡೆದಿದೆ. ಅದೇರೀತಿ ಕರ್ನಾಟಕ ರಾಜ್ಯದ ಹಲವಾರು ಕಡೆಗಳಲ್ಲಿ ಜೈಲುಗಳೆಲ್ಲಾ ತುಂಬಿ ದಸ್ತಗಿರಿ ಮಾಡಿದಂಥ ರೈತರು ಹೊರಗಡೆ

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇದ್ದಾರೆ. ಹೊರಗಡೆ ಇರುವಂಥ ರೈತರಿಗೆ ಯಾವ ವ್ಯವಸ್ಥೆಯನ್ನು ತಾವು ಒದಗಿಸುತ್ತೀರಿ? ಅರೆಸ್ಟ್ ಮಾಡಿದ ಮಾರನೇ ದಿವಸ ನಾಲ್ಕು ಗಂಟೆಯವರೆಗೂ ಕೂಡ ಅವರನ್ನು ಹೊರಗಡೆ ಕೂಡ ಬಿಟ್ಟಿಲ್ಲ. ಮತ್ತು ಊಟವನ್ನು ಕೂಡ ಕೊಟ್ಟಿಲ್ಲ. ರೈತರನ್ನು ನೀವು ಚೆನ್ನಾಗಿ ನೋಡಿಕೊಂಡಿದ್ದೇವೆ ಎಂದು ಹೇಳುವುದಕ್ಕೆ ನಿಮಗೆ ಯಾವ ಹಕ್ಕು ಇದೆ ? ಎಂದು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಮತ್ತೊಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದಂಥ ಮಾತನ್ನು ನಾನು ಪ್ರಸ್ತಾಪ ಮಾಡಬೇಕಾಗಿದೆ. ರೈತರೆ ಇಂದು ರೈತರ ಸಂಘವನ್ನು ವಿರೋಧ ಮಾಡತಕ್ಕಂಥ ಕಾಲ ಬಂದಿದೆ. ಯಾವ ರೈತ ನಿಮ್ಮ ಪ್ರಕಾರ ಸಂಘವನ್ನು ಹುಟ್ಟಿಸಿ, ಬೆಳೆಸಿ ನೀರು ಎರೆದಿದ್ದಾನೆಯೋ ಅದನ್ನು ಒಡೆದು ಚೂರು ಚೂರು ಮಾಡತಕ್ಕಂಥ ವಿಚಾರ ನಡೆದಿದೆ. ಬಳ್ಳಾರಿ ಜಿಲ್ಲೆಯಲ್ಲಿರುವ ರೈತ ಸಂಘದ ಅಧ್ಯಕ್ಷರಾದ ಶ್ರೀ ರೇವಣ ಸಿದ್ದಪ್ಪನವರು ಇವರಿಂದ ಮೂಲ ರೈತ ಸಂಘವನ್ನು ಹೊಡೆಯತಕ್ಕಂಥಾದ್ದು ನಡೆದಿದೆಯೇ ಎಂದು ನಾನು ನೇರವಾಗಿ ನಿಮ್ಮನ್ನು ಕೇಳುತ್ತೇನೆ. ಇಂಥಹ ಒಂದು ಚಿಂತನೆ ನಿಮ್ಮಲ್ಲಿದ್ದರೆ ಇದನ್ನು ತಾವು ದಯವಿಟ್ಟು ಕೈಬಿಡಬೇಕು. ರೈತ ಸಂಘವನ್ನು ಹೊಡೆಯತಕ್ಕ ಕೆಲಸ ಬೇಡ. ಇದು ನಿಮಗೆ ತಕ್ಕದುದಲ್ಲ. ರೈತರಿಗೆ ವಿರೋಧವಾಗಿ ಮಾಡತಕ್ಕ ಕೆಲಸಕ್ಕೆ ತಾವು ಕೈಹಾಕುತ್ತಿದ್ದೀರಿ ಎಂದು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ರೈತರ ಬಗ್ಗೆ ಹೇಳಿಕೆಯನ್ನು ಕೊಟ್ಟಾಗ ಅವರು ಯಾವ ರೀತಿ ಹೇಳಿದ್ದಾರೆಂದು ಎಲ್ಲರಿಗೂ ಗೊತ್ತಿದೆ. ಇವೊತ್ತು ನಾವು ಒಂದು ಕೆಲಸ ಮಾಡೋಣ. ಈ ಸದನದ ಸದಸ್ಯರ ಒಂದು ಸಮಿತಿಯನ್ನು ಮಾಡಿಕೊಂಡು ಸರ್ಕಾರದವರು ದಸ್ತಗಿರಿಯಾಗಿರುವ ರೈತರ ಬಗ್ಗೆ ಏನೇನು ಅನುಕೂಲತೆಗಳನ್ನು ಮಾಡಿದ್ದಾರೆ ಎಂದು ನೋಡುವುದು ಒಳ್ಳೆಯದು. ಇವರನ್ನು ಅಧಿಕಾರಕ್ಕೆ ಬರುವರಿಸಿ ಮಾಡಿರುವವರು ರೈತರು ಇವರು ಘನತೆ ಗೌರವ, ಮಾನ ಮರ್ಯಾದೆಯಿಂದ ಬಾಳತಕ್ಕ ಜನ. ಇಂಥಹವರು ಇಂದು ಹೊಟ್ಟೆಗೆ ಅನ್ನ ಇಲ್ಲದೆ, ಜೈಲಿನಲ್ಲಿ ಇರುವ ರೀತಿ ಮಾಡಿದ್ದೀರಿ. ರೈತರು ನಮ್ಮ ದೇಶದ ಬೆನ್ನೆಲುಬು ಎಂದು ಹೇಳುತ್ತಾ ನಿಜವಾಗಿಯೂ ಅವರನ್ನು ದೇಹದ ಎಲುಬನ್ನಾಗಿ ಮಾಡತಕ್ಕ ಕೆಲಸಕ್ಕೆ ಕೈಹಾಕಿದ್ದೀರಿ. ಈ ಮಾತನ್ನು ನಾವು ಆಡಿದರೆ ನಿಮ್ಮ ಮನಸ್ಸಿಗೆ ಅದು ಹಿಡಿಸುವುದಿಲ್ಲ. ರೈತರ ಬಗ್ಗೆ ನಾವು ನಿಮಗೆ ತೋಚುವ ರೀತಿಯಲ್ಲಿ ಮಾಡಿದರೆ, ಆಗ ಮಾತ್ರ ನಿಮಗೆ ಹಿಡಿಸುತ್ತದೆ. ಇಂಥಹ ಒಂದು ರಾಜಕೀಯ ಇಲ್ಲಿ ಬೆಳೆಯುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಈ ವಿಷಯದ ಬಗ್ಗೆ ಇನ್ನೂ ಬಹಳ ಜನ ಸದಸ್ಯರು ಮಾತನಾಡುವವರಿದ್ದಾರೆ. ತಾವು ಆದಷ್ಟು ಜಾಗ್ರತೆ ಮುಕ್ತಾಯ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಮಾತನಾಡುತ್ತಾ ನಾನು ಸ್ವತಃ ರೈತ, ಅಡಿಕೆ ಮರವನ್ನು ಹತ್ತಿದ್ದೇನೆ, ಎಂದು ಮುಂತಾಗಿ ಹೇಳಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ.—ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಹಿಂದಿನ ಸರ್ಕಾರದವರು ಬಂಗಾರಪ್ಪ ಸಮಿತಿಯನ್ನು ರಚಿಸಿದ್ದರು. ಆಗ ಇವರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೋ ಅದನ್ನು ಅವರೇ ಅಧಿಕಾರದಲ್ಲಿದ್ದಾಗ ಏಕೆ ಜಾರಿಗೆ ತರಲಿಲ್ಲ? ಇವರು ಈ ವಿಷಯದ ಬಗ್ಗೆ ಸ್ವಲ್ಪ ಒತ್ತಡ ತಂದಿದ್ದರಿಂದ ಇವರು ಬಿದ್ದುಹೋದರು. ಇವರ ಕಮಿಟಿಯು ಬಿದ್ದುಹೋಯಿತು.

ಶ್ರೀ ಎಸ್. ಬಂಗಾರಪ್ಪ.—ತಾವು ಬಹಳ ಹೊಸ ಪಾಯಿಂಟನ್ನು ಹೇಳಿದ್ದೀರಿ. ನಿಮ್ಮಂಥಹ ಪರಿಣತರು ಅಧಿಕಾರಕ್ಕೆ ಬರುತ್ತಾರೆಂದು ಹಿಂದಿನ ಸರ್ಕಾರದವರು ಇವರ ಬಗ್ಗೆ ತೀರ್ಮಾನ ಮಾಡಲಿಲ್ಲ ಮಾನ್ಯ ಅಧ್ಯಕ್ಷರೆ, ನಮ್ಮ ಸಮಿತಿ ಆದಾಗ ಸಲಹೆಗಳನ್ನು ಕೊಟ್ಟಿದ್ದೆವು.

ಶ್ರೀ ಆರ್. ಎಲ್. ಜಾಲಪ್ಪ.—ನೀವು ಕೂಡ ಅಂದಿನ ಸರ್ಕಾರದಲ್ಲಿ ಜವಾಬ್ದಾರಿಯುತವಾದ ಸ್ಥಾನದಲ್ಲಿದ್ದಿರಿ.

ಶ್ರೀ ಎಸ್. ಬಂಗಾರಪ್ಪ.—ಆ ಸರ್ಕಾರ ಕೂಡ ಸುಮಾರು ೮೦ ಕೋಟಿ ರೂಪಾಯಿವರೆವಿಗೂ ರೈತರಿಗೆ ಸಹಾಯ ನೀಡಿದೆ. ನೀವೊಬ್ಬರೆ ಮೇಧಾವಿಗಳಲ್ಲ. ನಿಮ್ಮಂತ ಅಪರೂಪದ ಪರಿಣತರು

೩–೩೦ ಪಿ. ಎಂ.

ಬರುತ್ತಾರೆಂದು, ಹಿಂದಿನವರು ಮಾಡಲಿಲ್ಲ. ಈಗಾಗಲೇ ರೈತ ಸಂಘದವರನ್ನು ಮಾತುಕತೆಗೆ ಆಹ್ವಾನ ಮಾಡಿದ್ದೀರಿ, ಅದಕ್ಕೆ ಮೊದಲು ನೀವು ಹುಟ್ಟು ಹಾಕಿದಂಥ ಸಂಘಗಳನ್ನು ವಜಾಮಾಡಿ, ತೆಗೆದು ಹಾಕಿ. ಅದು ನಿಮ್ಮದೇ ಆನಂಥ ಸಂಘ ಅದರ ಉದ್ಘಾಟನೆಗೆ ನಿಮ್ಮ ಜನರನ್ನೇ ಕಳುಹಿಸಿದ್ದಿರಿ, ಅದನ್ನು ಸಂಪೂರ್ಣವಾಗಿ ವಜಾ ಮಾಡಿ, ನಂಬಿಕೆ ಇರತಕ್ಕ ಕಾರ್ಯಕ್ರಮಗಳನ್ನು ಹಾಕಿ ರೈತ ಸಂಘದವರನ್ನು ಕರೆಯಿರಿ. ಅವರು ಬರುತ್ತಾರೆ. ಇರತಕ್ಕ ಸಮಸ್ಯೆಗಳನ್ನು ಇತ್ಯರ್ಥ ಮಾಡತಕ್ಕ ಒಂದು ವಾತಾವರಣಕ್ಕೆ ಬನ್ನಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಪತ್ರಿಕೆಯಲ್ಲಿ ಚಿಕ್ಕಮಗಳೂರಿನಲ್ಲಿ ನಡೆದಿರತಕ್ಕ ಒಂದು ಘಟನೆ ಬಂದಿದೆ. ಅಲ್ಲಿನ ಪತ್ರಿಕಾ ಸಂಪಾದಕರೊಬ್ಬರು, ಅದು ಸ್ಥಳೀಯ ಪತ್ರಿಕೆ, ರೈತರ ಪರವಾಗಿ ಬರೆದ್ದಕ್ಕೆ ಜನತಾ ಪಕ್ಷದ ಗೂಂಡಾಗಳು ದಾಳಿ ಮಾಡಿದ್ದಾರೆ ಪ್ರೊಫೆಸರ್ ನಂಜುಂಡಸ್ವಾಮಿ ಹಾಗೂ ಇತರರನ್ನು ಬಂಧನ ಮಾಡಿದ್ದಕ್ಕೆ ಹೊರಗಡೆ ಇದ್ದಂಥ ಜನತಾ ಪಕ್ಷದ ಕಾರ್ಯಕರ್ತರು ಅವರನ್ನು ನಮ್ಮ ಕೈಗೆ ಕೊಡಿ ಎನ್ನುವ ಮಟ್ಟಕ್ಕೆ ಹೋಗಿದ್ದಾರೆನ್ನುವ ವಿಷಯ ಪತ್ರಿಕೆಯಲ್ಲಿ ಬಂದಿದೆ. ಇದು ನಿಜವಾಗಿದ್ದರೆ ಸರ್ಕಾರದ ಧೋರಣೆ ಎನ್ನುವುದನ್ನು ತೋರಿಸುತ್ತದೆ. ಇದು ನಿಮಗೆ ಸೇರಿರತಕ್ಕ ವಿಚಾರ. ಇವೊತ್ತು ಪ್ರಚೋದನೆ ನಿಮ್ಮ ಪಕ್ಷದ ಕಾರ್ಯಕರ್ತರಿಂದ, ನಿಮ್ಮ ಪಕ್ಷದ ಮುಖಂಡರುಗಳಿಂದ ಬಂದಿದೆ ಎನ್ನುವ ಮಾತನ್ನು ಆಡಿ, ಸಭಾಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಈ ವಿಷಯದಲ್ಲಿ ನೋಟೀಸು ಕೊಟ್ಟವರಿಗೆ ಮಾತ್ರ ಸೀಮಿತ ಮಾಡಬೇಕಾಗಿಲ್ಲ.

ಶ್ರೀ ಭೀಮಣ್ಣ ಎಸ್. ಖಂಡ್ರೆ.—ಈ ವಿಚಾರದಲ್ಲಿ ಎಲ್ಲಾ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಡಿ.

† ಶ್ರೀ ಗೋವಿಂದ ಪಿ. ಒಡೆಯರಾಜ್ (ಕಲ್ಮಲ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ರೈತರು ಹೂಡಿದಂಥ ಚಳುವಳಿ ೫ನೇ ದಿನಕ್ಕೆ ಬಂದಿದೆ ಜನವರಿ ೨೬ನೆ ತಾರೀಖಿನಿಂದ ರೈತರು ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಚಳುವಳಿ ಹೂಡಿದ್ದಾರೆ. ಇವತ್ತಿನ ದಿವಸ ಸುಮಾರು ೨೦,೦೦೦ಕ್ಕೂ ಮೇಲ್ಪಟ್ಟು ರೈತರು ಬಂಧನಕ್ಕೆ ಒಳಗಾಗಿದ್ದಾರೆ. ರಾಜ್ಯದಲ್ಲಿ ಅಶಾಂತವಾದ ವಾತಾವರಣ ನಿರ್ಮಾಣವಾಗಿ ಜನತೆಗೆ ಅನಾನುಕೂಲವಾಗಿದೆ. ಸರ್ಕಾರ ಮಾತ್ರ ಅನಾನುಕೂಲಕ್ಕೆ ಒಳಗಾಗಿರತಕ್ಕ ಜನತೆಗೆ ಸವಲತ್ತುಗಳನ್ನು ಕೊಡುವುದರಲ್ಲಿ, ರಕ್ಷಣೆ ಕೊಡುವುದರಲ್ಲಿ ಅನುಕೂಲಗಳನ್ನು ಕಲ್ಪಿಸಿಕೊಡುವುದರಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆಯೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇದರ ಹಿನ್ನೆಲೆಯಲ್ಲಿ ವಿರೋಧ ಪಕ್ಷದವರಾದ ನಾವು ಸರ್ಕಾರ ಏನೇನು ಮುಂಜಾಗ್ರತೆ ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ ಎನ್ನುವುದನ್ನು ತಿಳಿಯುವುದಕ್ಕೋಸ್ಕರ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆವು. ತಾವು ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆ ಕೊಡಲು ಆಸ್ಪದ ಮಾಡಿಕೊಟ್ಟಿರಿ. ಅವರ ಹೇಳಿಕೆಯ ನಂತರ ಮಾತನಾಡಿ ಎಂದು ಹೇಳಿದಿರಿ. ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಂತ ಹೇಳಿಕೆಯನ್ನು ವಿಚಾರ ಮಾಡಿದರೆ ಸರ್ಕಾರ ತನ್ನ ಕೆಲಸವನ್ನು ಮಾಡುವ ಬದಲು......

ಅಧ್ಯಕ್ಷರು.—ನನ್ನ ಪ್ರಕಾರ ಹೇಳಿಕೆ ಕೊಟ್ಟಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸರ್ಕಾರ ತನ್ನ ಕರ್ತವ್ಯ ಮಾಡುವ ಬದಲು ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯೇ ಬೇರೆ ಅರ್ಥ ಕೊಡುತ್ತಿದೆ. ನಾನು ಮಾನ್ಯ ಮುಖ್ಯಮಂತ್ರಿ

ಯವರು ಹೇಳಿಕೆಯನ್ನು ಬಹಳ ಸೂಕ್ಷ್ಮ ದೃಷ್ಟಿಯಿಂದ ಆಲಿಸಿದೆ, ಈ ಹಿಂದೆ ೩-೪ ಹೇಳಿಕೆಗಳನ್ನು ಏನು ಕೊಟ್ಟಿದ್ದಾರೆ, ಬಹುಶ: ಅದನ್ನೇ ಮತ್ತೆ ಹೇಳಿದ್ದಾರೆ. ಹೊಸದಾಗಿ ಯಾವ ಮಾತನ್ನು ಹೇಳಿಲ್ಲ. ಸರ್ಕಾರದವರು ಹಾಕಿಕೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಏನೂ ಹೇಳಲಿಲ್ಲ. ಇವತ್ತು ಇಡೀ ರಾಜ್ಯದಲ್ಲಿ ವಿಷಾದಕರವಾದ ಪರಿಸ್ಥಿತಿ ಇದ್ದು, ಸಾರ್ವಜನಿಕ ಜೀವನಕ್ಕೆ ಅಡ್ಡಿಯುಂಟಾಗಿದೆ, ಬಸ್ಸುಗಳಲ್ಲಿ ಹಾಗೂ ರೈಲುಗಳಲ್ಲಿ ಜನ ಓಡಾಡುವುದು ಕಷ್ಟವಾಗಿದೆ. ಈ ವಿಚಾರದಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದು ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯಿಂದ ಹೊರಬರಬೇಕಾಗಿತ್ತು, ಅದರ ಬಗ್ಗೆ ಏನು ಹೇಳಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಬಹಳ ಸಂತೋಷದಿಂದ ಶಿವಮೊಗ್ಗ ಮುಂತಾದ ಕಡೆಗೆ ಜನಗಳಿಗೆ ಹಣ್ಣು ಹಂಪಲು ಸಿಗುತ್ತಿಲ್ಲ, ಜನಗಳಿಗೆ ಬಹಳ ತೊಂದರೆಯಾಗಿದೆ ಎಂದು ಹೇಳಿದರು. ನಾನು ಇವತ್ತು ಸರ್ಕಾರದ ಮೇಲೆ ಆಪಾದನೆ ಮಾಡುತ್ತಿದ್ದೇನೆ. ಸರ್ಕಾರ ಜನತೆಗೆ ಆಗಿರತಕ್ಕ ತೊಂದರೆಗಳನ್ನು ನಿವಾರಿಸುವ ದಿಸೆಯಲ್ಲಿ, ಸಂಪೂರ್ಣವಾಗಿ ವಿಫಲಗೊಂಡಿದೆಯೆಂದು ಹೇಳುತ್ತೇನೆ. ಇವತ್ತು ಆಗಿರತಕ್ಕ ತೊಂದರೆಗಳನ್ನು ನಿವಾರಣೆ ಮಾಡುವ ಬದಲು ಜನತೆಯನ್ನು ರೈತರ ಮೇಲೆ ರೈತ ಚಳುವಳಿಗಾರರ ಮೇಲೆ ಎತ್ತಿಕಟ್ಟತಕ್ಕ ಪ್ರಯತ್ನ ಮಾಡುತ್ತಿದೆಯೆಂದು ನಾನು ಆಪಾದನೆ ಮಾಡುತ್ತೇನೆ. ತಾವೇ ಬೆಳಸಿರತಕ್ಕ ರೈತ ಸಂಘದವರನ್ನು ರುದ್ರಪ್ಪನವರ ಅಧ್ಯಕ್ಷತೆಯಲ್ಲಿರತಕ್ಕ ರೈತ ಸಂಘದವರ ಮೇಲೆ ಎತ್ತಿಕಟ್ಟುವುದು. ಅವರ ಮೂಲಕ ರಾಜಕೀಯ ಮಾಡುವುದು ಇಂದು ನಡೆಯುತ್ತಿದೆ. ರೈತ ಸಂಘಗಳಲ್ಲಿಯೇ ಜಗಳ ಹತ್ತಿಸಿ, ತಮಗೆ ಬೇಕಾಗಿರತಕ್ಕ ರೈತಸಂಘಕ್ಕೆ ಅನುಕೂಲ ಮಾಡಿಕೊಡುವುದು ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಯವರು ರೈತ ಸಂಘದವರಲ್ಲಿ ಕೈಜೋಡಿಸಿ ಕೇಳಿಕೊಂಡಿದ್ದೇನೆಂದು ಹೇಳಿದ್ದಾರೆ. ಯಾವ ಅರ್ಥದಲ್ಲಿ ಹೇಳಿದರೋ ಗೊತ್ತಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ರೈತರಲ್ಲಿ ಪ್ರಚೋಧನೆ ಬರುವಂಥ ರೀತಿಯಲ್ಲಿ ಹೇಳಿಲ್ಲ.

ಎಲೆಕ್ಷನ್ ಟೈಮ್‌ನಲ್ಲಿ ಎಲ್ಲಾ ರೈತ ಸಂಘದವರನ್ನು ಉಪಯೋಗಿಸಿಕೊಂಡು ಅಧಿಕಾರಕ್ಕೆ ಬಂದಿರಿ. ಅಧಿಕಾರಕ್ಕೆ ಬಂದಮೇಲೆ ಅವರು ಏನು ತಮ್ಮಲ್ಲಿ ವಿಶ್ವಾಸವನ್ನು ಇಟ್ಟುಕೊಂಡಿದ್ದರೂ ಆ ವಿಶ್ವಾಸವನ್ನು ಕಾಪಾಡಿಕೊಳ್ಳುವುದಕ್ಕೆ ಆಗಲಿಲ್ಲ. ನಿಮ್ಮ ಕಡೆಯಿಂದ ಇದಕ್ಕಾಗಿ ಒಂದು ತರಹದ ಪ್ರಚೊದನೆ ಮಾಡಿದ್ದೀರಿ ಎರಡನೆಯದಾಗಿ ಎಂದರೆ ಒಂದು ಕಡೆ ಸಭೆಯಲ್ಲಿ ಕೈ ಮುಗಿದು ಕೇಳಿಕೊಳ್ಳತಕ್ಕಂಥದ್ದು ಮತ್ತೆ ಇನ್ನೊಂದು ಕಡೆ ಇನ್ನೊಂದು ರೀತಿಯಲ್ಲಿ ಪ್ರಚೋದನೆ ಮಾಡತಕ್ಕಂಥ ರೀತಿಯಲ್ಲಿ ಕೆಲಸವನ್ನು ಸರ್ಕಾರದವರು ಮಾಡಿದ್ದಾರೆ. ಈ ರೀತಿ ಪ್ರಚೋದನೆ ಮಾಡದೇ ಸಮಸ್ಯೆಗಳನ್ನು ಬಗೆಹರಿಸುವುದರ ಬದಲು ಉಲ್ಬಣಾವಸ್ಥೆಗೆ ಈ ಸಮಸ್ಯೆಯನ್ನು ಸರ್ಕಾರವು ತೆಗೆದುಕೊಂಡು ಹೋಗಿದ್ದಾರೆ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಸರ್ಕಾರದವರು ಪ್ಯಾರಲಲ್ ಗವರ್ನ್‌ಮೆಂಟ್ ಬಗ್ಗೆ ಮಾತನಾಡಿದರು ಈಗ ಚಿಕ್ಕಮಗಳೂರಿನಲ್ಲಿ ಪ್ರೊಫೆಸರ್ ನಂಜುಂಡಸ್ವಾಮಿ ಅವರನ್ನು ಅರೆಸ್ಟ್ ಮಾಡಿ ಕೋರ್ಟಿಗೆ ತೆಗೆದುಕೊಂಡು ಹೋದ ತಕ್ಷಣ ಕೆಲವು ಜನತಾ ಮಿತ್ರರು ಪ್ರೊ।। ನಂಜುಂಡಸ್ವಾಮಿಯವರಿಗೆ ರಿಮೆಂಡ್ ಮಾಡಬೇಡಿ, ನಾವು ನೋಡಿಕೊಳ್ಳುತ್ತೇವೆ. ನಮ್ಮ ಕೈಗೆ ಅವರನ್ನು ಕೊಡಿ ಎಂದು ಹೇಳಿದರೆ ಇದು ಪ್ಯಾರಲಲ್ ಗವರ್ನ್‌ಮೆಂಟ್ ಅಲ್ಲವೇ ? ಈ ರೈತ ಚಳುವಳಿಗಾರರೂ ಏನಾದರೂ ಪ್ಯಾರಲಲ್ ಗವರ್ನ್‌ಮೆಂಟ್ ಮಾಡುತ್ತೇವೆಂದು ಹೇಳಿದಾಕ್ಷಣ ಅವರ ತಲೆಗೆ ಕಟ್ಟುತ್ತೀರಿ ಆದರೆ ಈಗ ನಿಮ್ಮ ಸರ್ಕಾರದ ಕಡೆಯಿಂದ ಆಗುತ್ತಿಲ್ಲವೇ ? ಜನತಾ ಪಕ್ಷದ ಕಾರ್ಯಕರ್ತರು ಹೇಳಿದರೆ, ಅದು ಪ್ಯಾರಲಲ್ ಸರ್ಕಾರ ಆಗಲಿಲ್ಲವೇ ?

ಒಬ್ಬ ಮಾನ್ಯ ಸದಸ್ಯರು.—ನಿಮ್ಮ ಪಕ್ಷದ ಸದಸ್ಯರೊಬ್ಬರು ಸಕಲೇಶಪುರದಲ್ಲಿ ಹಸಿರು ಟವೆಲನ್ನು ಕಟ್ಟಿಕೊಂಡು ಸೇಂದಿ ಅಂಗಡಿಗಳನ್ನು ವಶಪಡಿಸಿಕೊಂಡಿದ್ದಾರೆ. ಅದರ ಬಗ್ಗೆ ಏಕೆ ಪ್ರಸ್ತಾಪ ಮಾಡುತ್ತಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಇನ್ನು ಮುಖ್ಯ ಮಂತ್ರಿಗಳವರು ಸುಮಾರು ೨೧ ಸಾವಿರ ರೈತರನ್ನು ಅರೆಸ್ಟ್ ಮಾಡಿದ್ದೇವೆ, ಅವರಲ್ಲಿ ಒಂದು ಸಾವಿರ ಮಹಿಳೆಯರು ಇದ್ದಾರೆ ಎಂದು ಹೇಳಿದರು. ಈ ರೀತಿ ಮಹಿಳೆಯರನ್ನು ಸಹ ಅರೆಸ್ಟ್ ಮಾಡಿದ ಮೇಲೆ ಅವರುಗಳನ್ನು ಜೈಲಿನಲ್ಲಿ ಯಾವ ರೀತಿಯಾಗಿ ನೋಡಿಕೊಳ್ಳಲಾಗುತ್ತಿದೆ ಎನ್ನುವ ಬಗ್ಗೆ ಒಂದು ಮಾತನ್ನು ಹೇಳಲಿಲ್ಲ. ಅವರ ಗತಿ ಏನಾಗಿದೆ ? ಅವರನ್ನು ಹೇಗೆ ನೋಡಿಕೊಳ್ಳುತ್ತಿದ್ದಾರೆ ? ಅವರನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದಾರೋ ಇಲ್ಲವೋ ಅಥವಾ ಬೇರೆಯವರ ಹಾಗೆ ಬಯಲು ಬಂಧೀಖಾನೆಯಲ್ಲಿ ಅವರನ್ನೇ ತುಂಬಿದ್ದಾರೋ ? ಅವರಿಗೆ ಊಟ ಕೊಡುತ್ತಿದ್ದಾರೆಯೋ ಇಲ್ಲವೋ ಎನ್ನುವ ಬಗ್ಗೆ ಏಕೆ ವಿಚಾರ

ಮಾಡಲಿಲ್ಲ. ಒಂದು ಸಾವಿರ ಮಹಿಳೆಯರನ್ನು ಅರೆಸ್ಟ್ ಮಾಡಿದ ಮೇಲೆ ಅವರಿಗೆ ಊಟದ ವ್ಯವಸ್ಥೆ ಮಾಡುವ ಬಗ್ಗೆ ಕರ್ಟಸಿ ಕೂಡ ನಿಮ್ಮ ಸರ್ಕಾರದವರಿಗೆ ಇಲ್ಲವೆಂದು ಬಹಳ ವಿಷಾದದಿಂದ ಹೇಳ ಬೇಕಾಗುತ್ತದೆ. ಇವತ್ತು ಹೆಣ್ಣುಮಕ್ಕಳನ್ನು ಅರೆಸ್ಟ್ ಮಾಡಿದ ಮೇಲೆ ಅವರನ್ನು ಜೈಲಿನಲ್ಲಿ ನೋಡಿಕೊಳ್ಳುವುದಕ್ಕೆ ಸರ್ಕಾರದವರು ಏನು ತುರ್ತು ಕ್ರಮ ಕೈಗೊಂಡಿದ್ದಾರೆ ಎನ್ನತಕ್ಕಂಥಾದ್ದನ್ನು ಈ ಸದನಕ್ಕೆ ತಿಳಿಸಬೇಕು. ಇನ್ನು ಬಂಧೀಖಾನೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳ ತಕ್ಕಂಥಾದ್ದು ಅವಶ್ಯಕ ಇದೆ. ಎಲ್ಲಾ ಸೆಂಟ್ರಲ್ ಜೈಲುಗಳಲ್ಲೂ ಓವರ್‌ಫ್ಲೋ ಆಗುತ್ತದೆ. ಸಬ್ ಜೈಲಿನಲ್ಲಿಯೂ ಕೂಡ ತುಂಬಿ ತುಳುಕಾಡುವ ಪರಿಸ್ಥಿತಿ ಬಂದಿರುವಾಗ ಅಲ್ಲೂ ಕೂಡ ಜಾಗ ಸಾಲದೆ ಬಯಲು ಬಂದೀಖಾನೆಯಲ್ಲಿ ರೈತರನ್ನು ಇಡತಕ್ಕಂಥಾ ಪರಿಸ್ಥಿತಿ ಬಂದಿದೆ. ಅದಕ್ಕೋಸ್ಕರ ಸರ್ಕಾರ ದವರು ಸ್ಕೂಲುಗಳನ್ನು ಮತ್ತು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದ ದಾಸ್ತಾನು ಗೋಡೌನು ಗಳನ್ನು ಸಹ ತೆಗೆದುಕೊಳ್ಳತಕ್ಕ ಪರಿಸ್ಥಿತಿ ಬಂದಿದೆ. ಅವರಿಗೆ ಕುಡಿಯುವುದಕ್ಕೆ ನೀರು ಇಲ್ಲ. ಊಟದ ವ್ಯವಸ್ಥೆ ಇಲ್ಲಾ, ಮಲಗಿಕೊಳ್ಳುವುದಕ್ಕಂತೂ ದೇವರೇ ಗತಿ. ಈ ಮಾತನ್ನು ನಾನು ಕಲ್ಪನೆ ಮಾಡಿ ಹೇಳುತ್ತಿಲ್ಲ. ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿರತಕ್ಕ ವಿಷಯವನ್ನೇ ಹೇಳಬೇಕೆಂದರೆ ''ಬಳ್ಳಾರಿ ಜೈಲಿನಲ್ಲಿ ಹೊರಗೆ ರೈತರಿಗೆ ಬಿಡಾರ'' ಎಂದು ದಪ್ಪ ಅಕ್ಷರಗಳಲ್ಲಿ ಈ ರೀತಿಯಾಗಿ ಬಂದಿದೆ. ''ಅಪಾರ ಸಂಖ್ಯೆಯಲ್ಲಿ ಬರುತ್ತಿರುವ ಈ ಬಂಧಿತ ರೈತರಿಗೆ ಊಟತಿಂಡಿ ಇರಲಿ, ಕುಡಿಯುವ ನೀರನ್ನೂ ಒದಗಿಸುವುದೂ ಭಾರಿಯ ಸಮಸ್ಯೆಯಾಗಿದೆ. ಇದಕ್ಕಾಗಿ ಸೆರೆಮನೆ ಅಧಿಕಾರಿಗಳು ಭಾರಿ ಪರದಾಡುತ್ತಿದ್ದಾರೆ. ಡ್ರಂಗಳನ್ನು ಹೊತ್ತ ಲಾರಿಗಳು ಈ ಸೆರೆಮನೆಗೆ ಬರುತ್ತಿವೆ''.

ಡಾ|| ವಿ.ಎಸ್. ಆಚಾರ್ಯ.—೧೯೭೫-೭೬ನೇ ಇಸವಿಯಲ್ಲಿ ಎಮರ್ಜೆನ್ಸಿ ಕಾಲದಲ್ಲಿ ನಾನು ಅಲ್ಲಿದ್ದೆ ಆದುದರಿಂದ ಅದು ನನಗೆ ಗೊತ್ತಿದೆ, ಮೊದಲಿನಿಂದಲೂ ಇದೇ ಹಣೆಬರಹವಿದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಆಗ ಅಂಥ ಪರಿಸ್ಥಿತಿ ಇರಲಿಲ್ಲ.

ಡಾ|| ವಿ.ಎಸ್. ಆಚಾರ್ಯ.—ಅಲ್ಲಿ ಒಂದು, ಒಂದೂವರೆ ವರ್ಷಗಳ ಕಾಲ ಕಳೆದಿದ್ದೇನೆ. ಆದುದರಿಂದ ನನಗೆ ಅಲ್ಲಿಯ ವಿಷಯ ನಿಮಗಿಂತಲೂ ನನಗೆ ಚೆನ್ನಾಗಿ ಗೊತ್ತಿದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ, ಈಗ ಬೆಳಗಾಂ ಜಿಲ್ಲೆಯಲ್ಲಿ ಯಾವ ಪರಿಸ್ಥಿತಿ ಇದೆ ಎಂದರೆ, ಬೆಳಿಗ್ಗೆ ೯ ಗಂಟೆಗೆ ಬಂದ ರೈತರಿಗೆ ರಾತ್ರಿ ೧ ಗಂಟೆ ೨ ಗಂಟೆಯಾದರೂ ಊಟ ಸಿಗುತ್ತಿಲ್ಲ. ಬೆಳಗಾಂ ಜಿಲ್ಲೆಯ ಹಿಂಡಲಗ ಜೈಲಿನಲ್ಲಿಯೂ ಸಹ ಅನೇಕ ಜನ ರಾತ್ರಿ ಹೊರ ಗಡೆ ಊಟ ಇಲ್ಲದೆ ದುಡ್ಡು ಕೊಟ್ಟು ಊರಿನಲ್ಲೆಲ್ಲ ತಿರುಗಾಡಿ ಬಂದು ಊಟ ಮಾಡಿಕೊಂಡು ಬರುತ್ತಿದ್ದಾರೆ. ಬಳ್ಳಾರಿ ಸೆಂಟ್ರಲ್ ಜೈಲಿನಲ್ಲಿ ಕೂಡ ಇದೇ ಪರಿಸ್ಥಿತಿ ಇದೆ. ಮಾನ್ಯ ಪ್ರಕಾಶ್ ಅವರಿಗೂ ಕೂಡ ಗೊತ್ತಿರಬಹುದು. ಈಗ ಯಾರ್‍ಯಾರ ಹತ್ತಿರ ದುಡ್ಡು ಇದೆ ಅಂತಹ ರೈತರು ಹೊರಗಡೆ ಹೋಗಿ ಊಟ ಮಾಡಿಕೊಂಡು ಬರುತ್ತಿದ್ದಾರೆ. ದುಡ್ಡಿಲ್ಲದೆ ಇರುವ ರೈತರ ಗತಿ ಏನಾಗ ಬೇಕು? ಇದು ಸರ್ಕಾರದ ಜವಾಬ್ದಾರಿ ಅಲ್ಲವೆ? ಒಂದು ಸಾರಿ ಅರೆಸ್ಟ್ ಮಾಡಿದ ತಕ್ಷಣ ಅವರನ್ನು ನೋಡಿಕೊಳ್ಳತಕ್ಕ ಜವಾಬ್ದಾರಿ ಸರ್ಕಾರದಲ್ಲವೇ ? ಈ ಕರ್ತವ್ಯದ ನಿರ್ವಹಣೆಯನ್ನು ಸರಿಯಾಗಿ ಮಾಡಲಿಲ್ಲ ಎಂಬುದು ಸ್ಪಷ್ಟವಾಗಿದೆ. ಹಿಂಡಲಗ ಜೈಲಿನ ಬಗ್ಗೆ ಬಹಳ ಚೆನ್ನಾಗಿ ವ್ಯವಸ್ಥೆ ಮಾಡಿ ದ್ದೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ, ಆದರೆ ಬೆಳಗಾಂ ಜಿಲ್ಲೆಯ ರೈತ ಸಂಘದ ಅಧ್ಯಕ್ಷ ರಾದ ಶ್ರೀ ಬಾಪೂಗೌಡರವರು ಹೇಳಿರತಕ್ಕ ಮಾತನ್ನು ಹೇಳುವುದಾದರೆ......

ಶ್ರೀ ವಿ.ಎಲ್. ಪಾಟೀಲ್.—ನಾನು ಬೆಳಗಾಂ ಜಿಲ್ಲೆಗೆ ಹೋಗಿ ಎಲ್ಲಾ ವ್ಯವಸ್ಥೆ ಮಾಡಿ ಬಂದಿದ್ದೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನೀವು ಹೋಗಿದ್ದು ೨೫-೨೬ನೇ ತಾರೀಖಿನ ದಿವಸ. ಆದರೆ ಇವತ್ತಿನ ದಿವಸದ ಸ್ಟೇಟ್‌ಮೆಂಟನ್ನು ನೋಡಿದರೆ ಅಲ್ಲಿ ಅವರಿಗೆ ಊಟ ಕೊಡುವುದಕ್ಕೆ ಆಗು ತ್ತಿಲ್ಲ ಎನ್ನುವಂಥಾ ಪರಿಸ್ಥಿತಿ ಬಂದಿದೆ. ಇವತ್ತಿನ ಸ್ಟೇಟ್‌ಮೆಂಟಿನ ವರದಿಯ ಪ್ರಕಾರ ಎಲ್ಲಾ ಜೈಲುಗಳು ತುಂಬಿ ಹೋಗಿ ಊಟ ಸಹ ಕೊಡುವುದಕ್ಕೆ ಆಗದೇ ಇರತಕ್ಕ ಪರಿಸ್ಥಿತಿ ಉಂಟಾಗಿದೆ. ಮಾನ್ಯ ಅಧ್ಯಕ್ಷರೇ, ಈ ತರಹ ಇವತ್ತು ಇಡೀ ರಾಜ್ಯದಲ್ಲಿರತಕ್ಕ ಶಾಲಾ ಕಾಲೇಜುಗಳು ಬಯಲು ಬಂಧೀಖಾನೆಗಳಾಗಿವೆ. ಅವರನ್ನು ನೋಡಿಕೊಳ್ಳತಕ್ಕ ಕೆಲಸದಲ್ಲಿ ಸರ್ಕಾರ ವಿಫಲವಾಗಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ರೈತರು ಜೈಲಿನಲ್ಲಿ ಬಹಳ ಕಷ್ಟ ಪಡುತ್ತಿದ್ದಾರೆ, ಕಷ್ಟ ಪಡುತ್ತಿರುವವರಿಗೆ ನಮ್ಮ ಸಹಾನುಭೂತಿ ವ್ಯಕ್ತಪಡಿಸಿ ಅವರಿಗೆ ಎಲ್ಲಾ ತರಹ ಅನುಕೂಲಗಳನ್ನು

ಸರ್ಕಾರದವರು ಮಾಡಿಕೊಡಬೇಕು ಅವರ ಜೊತೆಯಲ್ಲಿ ಮಾತುಕತೆ ನಡೆಸಿ ಅವರ ಯೋಗಕ್ಷೇಮ ಗಳನ್ನು ನೋಡಿಕೊಳ್ಳಬೇಕು ಎನ್ನ ತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಜಿ. ಗೋವಿಂದಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರವಾಗಿರ ತಕ್ಕ ನರಸಿಂಹರಾಜಪುರ ತಾಲ್ಲೂಕಿನ ಬಿ. ಹೆಚ್. ಕೈಮರದಲ್ಲಿ ರೈತ ಸಂಘದ ಅಧ್ಯಕ್ಷರು ಮತ್ತು ಕಾರ್ಯಕರ್ತರು ರಸ್ತೆ ರೋಕೋ ಸತ್ಯಾಗ್ರಹದಲ್ಲಿ ಭಾಗವಹಿಸಿರತಕ್ಕ ಸಂದರ್ಭದಲ್ಲಿ ಪೋಲೀಸರು ಲಾಠಿ ಪ್ರಹಾರ ಮಾಡಿರತಕ್ಕದರ ಬಗ್ಗೆ ಸರ್ಕಾರದ ಗಮನಕ್ಕೂ ಮತ್ತು ತಮ್ಮ ಗಮನಕ್ಕೂ ತಂದಿ ದ್ದೇನೆ, ನ್ಯಾಯವಾಗಿ ಹೇಳುವುದಾದರೆ ರೈತ ಸಂಘದ ಅಧ್ಯಕ್ಷರಾಗಲೀ ಅಥವಾ ಕಾರ್ಯಕರ್ತ ರಾಗಲೀ, ಶಾಂತಿಯುತವಾದ ವಾತಾವರಣದಲ್ಲಿ ರಸ್ತೆ ರೋಕೋ ಕೆಲಸವನ್ನು ನಿರ್ವಹಿಸಿರತಕ್ಕ ಸಂದರ್ಭದಲ್ಲಿ ಪೋಲೀಸರು ಲಾಠಿಪ್ರಹಾರ ಮಾಡಿರುವುದು ತುಂಬಾ ಅನ್ಯಾಯ.

ಅಧ್ಯಕ್ಷರು.—ಮುಖ್ಯಮಂತ್ರಿಗಳವರು ಅದನ್ನು ವಿಚಾರ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಹೆಚ್. ಜಿ. ಗೋವಿಂದಗೌಡ.—ಯಾರೇ ತಪ್ಪು ಮಾಡಿರಲಿ ಅದನ್ನು ತಪ್ಪು ಎಂದು ಹೇಳಿ ಅದನ್ನು ಒಪ್ಪಿಕೊಳ್ಳುವುದು ಒಳ್ಳೆಯದೆಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಆಡಳಿತ ಪಕ್ಷದಲ್ಲಿ ಇರುವವರೂ ಸಹ ಕೆಲವು ಸಾರಿ ತಪ್ಪು ಮಾಡುತ್ತಾರೆ ಆದರೆ ಅದನ್ನು ಒಪ್ಪಿಕೊಳ್ಳು ವುದು ಅವರ ದೊಡ್ಡಗುಣ. ಆ ದೃಷ್ಟಿಯಿಂದ ಮುಖ್ಯ ಮಂತ್ರಿಗಳವರು ನ್ಯಾಯಾಂಗ ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರತಕ್ಕ ನರಸಿಂಹರಾಜಪುರ, ಶೃಂಗೇರಿ, ಕೊಪ್ಪ ಅದರಲ್ಲಿಯೂ ಶೃಂಗೇರಿ ರೈತ ಸಂಘದವರು ಸಕ್ರಿಯವಾಗಿ ಭಾಗವಹಿಸಲಿಲ್ಲ. ಅವರು ಸರ್ಕಾರಕ್ಕೆ ಸಂಪೂರ್ಣವಾದ ಸಹಕಾರ ಕೊಟ್ಟಿ ದ್ದಾರೆ. ಕೊಪ್ಪದಲ್ಲಿ ಮತ್ತು ನರಸಿಂಹರಾಜಪುರದಲ್ಲಿ ನಡೆದ ಈ ರೈತ ಚಳುವಳಿ ಬಹಳ ಶಾಂತಿಯುತ ವಾಗಿ ನಡೆಯಿತು. ನನ್ನ ಸ್ನೇಹಿತರು ಹೇಳಿದರು, ರಾಮಕೃಷ್ಣ ಹೆಗಡೆಯವರು ತಮ್ಮ ಭಾಷಣದಲ್ಲಿ ಕೆಲವು ದುಷ್ಟ ಶಕ್ತಿಗಳು ಅಲ್ಲಲ್ಲಿ ಸೇರಿಕೊಂಡಿರತಕ್ಕಂಥಾದ್ದು ಇದೆ, ರೈತರು ಆ ರೀತಿ ಮಾಡುವುದಿಲ್ಲ ಎಂದು ವಿಶ್ಲೇಷಣೆ ಮಾಡಿದರು. ಒಂದು ನಿದರ್ಶನ ಕೊಡುವುದಾದರೆ ಕೊಪ್ಪ ತಾಲ್ಲೂಕಿನಲ್ಲಿ ರೈತರಿಂದ ಯಾವರೀತಿಯ ಅಹಿತಕರ ಘಟನೆಗಳು ನಡೆದಿಲ್ಲ. ದುಷ್ಟ ಶಕ್ತಿಗಳು ಮಧ್ಯೆ ಸೇರಿದ್ದರಿಂದ ಕೊಪ್ಪ ತಾಲ್ಲೂ ಕಿನ ಒಂದು ಹಳ್ಳಿಯಲ್ಲಿ ಸಬ್‌ಓವರ್ಸಿಯರ್ ಮುಂದೆ ಹೋಗತಕ್ಕಂಥಹ ಸಂದರ್ಭದಲ್ಲಿ ಮಾತ್ರ ಆತನ ಬೈಸಿಕಲ್‌ಗೆ ಅನಾಹುತ ಮಾಡಿ ತೊಂದರೆ ಮಾಡಿ ಅವರಿಗೂ ಸಹ ಇನ್‌ಸಲ್ಟ್ ಮಾಡಿರತಕ್ಕಂಥಾದ್ದು ಉಂಟು. ಇದು ರೈತರು ಮಾಡಿರತಕ್ಕ ಕೆಲಸ ಅಲ್ಲ ದುಷ್ಟ ಶಕ್ತಿಗಳು ಮಧ್ಯೆ ಸೇರಿಮಾಡಿರ ತಕ್ಕದ್ದು. ಯಾವ ಕ್ಷೇತ್ರದಲ್ಲಾಗಲೀ ಈ ದುಷ್ಟ ಶಕ್ತಿಗಳು ಸೇರಿರತಕ್ಕದ್ದು ಇದೆ. ದುಷ್ಟ ಶಕ್ತಿ ಗಳಿಂದ ಅನಾಹುತಗಳು ಆಗುವುದು ಸ್ವಾಭಾವಿಕ. ಈ ರೀತಿ ಅನಾಹುತಗಳು ಆಗದ ರೀತಿಯಲ್ಲಿ ತಡೆ ಗಟ್ಟುವುದು ನಮ್ಮೆಲ್ಲರ ಕರ್ತವ್ಯ. ಕೊಪ್ಪ ತಾಲ್ಲೂಕಿನಲ್ಲಿ ನಡೆದಿರತಕ್ಕಂಥ ಅಹಿತಕರ ಘಟನೆಗೆ ಪೋಲೀಸರು ಕೊಡಲೇ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಆಗಲಿಲ್ಲ. ರೈತರು ಮಧ್ಯೆ ಇದ್ದಾಗ ಈ ರೀತಿ ಅಹಿತಕರ ಘಟನೆಗಳು ನಡೆದಾಗ ಪೋಲೀಸರು ನಿಷ್ಕ್ರಿಯರಾಗಿ ಕುಳಿತಿದ್ದರು. ಅದಕ್ಕೆ ಪ್ರತ್ಯುತ್ತರ ವಾಗಿ ಏನೋ ತೊಂದರೆ ಮಾಡಿದರು ಎನ್ನುವ ಭಾವನೆ ಬರುವುದಿಲ್ಲ. ನನ್ನ ಕ್ಷೇತ್ರದಲ್ಲಿರುವ ಬಿ. ಹೆಚ್. ಕೈಮರದಲ್ಲಿ, ಪೋಲೀಸರ ಕೈವಾರಿ ಘಟನೆ ನಡೆದಿದೆ. ಇದರ ಬಗ್ಗೆ ನ್ಯಾಯಾಂಗ ತನಿಖೆ ನಡೆಸುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ನ್ಯಾಯವಾಗಿ ವಿಚಾರಣೆ ಮಾಡಿ ತಪ್ಪಿತಸ್ಥರಿಗೆ ಸೂಕ್ತ ಶಿಕ್ಷೆಯಾಗಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಕಳಕಳಿಯಿಂದ ಪ್ರಾರ್ಥಿಸುತ್ತಾ ಇದ್ದೇನೆ.

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ನೋಟೀಸ್ ಕೊಡಬೇಕು. ಸುಮ್ಮನೆ ಎದ್ದುನಿಂತುಕೊಂಡು ಮಾತನಾಡುವುದ ಕ್ಕಾಗುವುದಿಲ್ಲ.

ಶ್ರೀ ಜೆ. ಡಿ. ಸೋಮಪ್ಪ.—ನೋಟೀಸ್ ಕೊಡುವುದಕ್ಕೆ ಬರಬೇಕೆಂದರೆ ಬಸ್ ಇಲ್ಲವಲ್ಲ. ಬಸ್ ಇದ್ದರೆ ತಾನೆ ನಾವು ಬರುವುದು. ನೋಡಿ ಇದು ಕರ್ನಾಟಕ ರಾಜ್ಯ ರೈತ ಸಂಘ, ಸಕಲೇಶಪುರ ಅವರು ಕೊಟ್ಟಿರುವ ರಹದಾರಿ. ಈ ರೀತಿ ಇದೆ. "ಜಯದೇವಣ್ಣ ಇವರು ನಮ್ಮ ಸಂಘದವ ರಾಗಿದ್ದಾರೆ. ಕೆಳಕಂಡ ಕಾರುಗಳಲ್ಲಿ ತಿರುಗಾಡಲು ಅನುಮತಿ ಪಡೆದಿದ್ದಾರೆ. ಸತ್ಯಾಗ್ರಹಿಗಳು ಇವರಿಗೆ ಯಾವ ತೊಂದರೆ ಕೊಡಕೂಡದು. ಕಾರ್ ನಂ. ಎಂ.ಇ.ಜಿ. ೫೯೩೨" ಅಂತ ಇದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಇದನ್ನೇ ಪ್ಯಾರಲಲ್ ಗೌರ್ನ್ಮೆಂಟ್ ಎನ್ನುವುದು.

ಶ್ರೀ ಜಿ. ಡಿ. ಸೋಮಪ್ಪ.—ರಾಜ್ಯ ರೈತ ಸಂಘ ಸಕಲೇಶಪುರ, ಹಾಸನ ಜಿಲ್ಲಾ ಅವರ ಕಾರಿನಲ್ಲಿ ಕೆಲವರು ಓಡಾಡುತ್ತಿದ್ದರು. ಅವರಿಂದ ಹಾಸನಕ್ಕೆ ಡ್ರಾಪ್ ತೆಗೆದುಕೊಂಡು ಹಾಸನದಿಂದ ಬೆಳಿಗ್ಗೆ ಬಸ್‌ನಲ್ಲಿ ಬರಬೇಕಾಯಿತು. ಇಲ್ಲದೇ ಹೋಗಿದ್ದರೆ ಮೊದಲೇ ನೋಟೀಸ್ ಕೊಡುತ್ತಿದ್ದೆವು. ಅದಕ್ಕೆ ಅವಕಾಶ ಕೊಡಬೇಕು. ನಮಗೆ ಈ ರೀತಿ ಊಟ ಇಲ್ಲ, ನಿದ್ರೆ ಇಲ್ಲ, ಮಲಗುವಹಾಗೇ ಇಲ್ಲ. ಆಮೇಲೆ ಅವಕಾಶ ಕೊಡುತ್ತೀರಿ ತಾನೆ, ಈ ರಹದಾರಿಯನ್ನು ನಾನು ಕಳುಹಿಸಿಕೊಡುತ್ತಿದ್ದೇನೆ.

ಅಧ್ಯಕ್ಷರು.—ಆಯಿತು, ರೈತ ಸಂಘದವರು ಕೊಟ್ಟಿರುವ ರಹದಾರಿಯನ್ನು ಕಳುಹಿಸಿಕೊಡಿ.

† ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ರೈತ ಚಳುವಳಿ ಬೃಹದಾಕಾರವಾಗಿ ನಡೆದಿದೆ, ಅದರಿಂದ ಅನೇಕರಿಗೆ ಅನೇಕ ರೀತಿಯಾದಂಥ ತೊಂದರೆಗಳು ಕೂಡಾ ಉಂಟಾಗಿದೆ. ೨೬ನೇ ತಾರೀಖಿನಿಂದ ಪ್ರಾರಂಭವಾದ ಈ ಚಳುವಳಿ ಇನ್ನೂ ಮುಂದುವರಿಯುತ್ತಿದೆ ಈ ಚಳುವಳಿಗೆ ಕಾರಣ ಏನೆಂದು ಈಗಾಗಲೇ ನಮ್ಮ ಅನೇಕ ಹಿರಿಯ ನಾಯಕರುಗಳೆಲ್ಲಾ ಮಾತನಾಡಿದ್ದಾರೆ. ಅದು ರೈತರ ಬೇಡಿಕೆಗಳನ್ನು ಈಡೇರಿಸಬೇಕು ಎನ್ನತಕ್ಕಂಥಾದ್ದು. ಅವರ ಬೇಡಿಕೆಗಳು ನ್ಯಾಯವಾಗಿದ್ದಾಗ್ಯೂ ಕೂಡ ಚಳುವಳಿ ದೀರ್ಘಕಾಲದವರೆಗೆ ಮುಂದುವರಿಯುತ್ತಾ ಇರುವುದರಿಂದ ಸಾಮಾನ್ಯವಾಗಿ ಜನರಿಗೆ ತುಂಬಾ ಅನಾನುಕೂಲತೆಗಳು ಉಂಟಾಗುತ್ತವೆ. ಈ ಬಗ್ಗೆ ಆಗಲೇ ಮಾನ್ಯ ಮುಖ್ಯ ಮಂತ್ರಿಗಳು ವಿವರಣೆಯನ್ನು ಕೊಟ್ಟಿದ್ದಾರೆ. ಇದೇ ರೀತಿಯಾದಂಥ ಚಳುವಳಿ ೧೯೮೧ರಲ್ಲಿ ನಡೆದಾಗ ಆಗಿನ ಸರಕಾರ, ಅಂದರೆ ಈಗೇನು ಕಳಕಳಿಯನ್ನು ವ್ಯಕ್ತಪಡಿಸತಕ್ಕಂತಹ ವಿರೋಧ ಪಕ್ಷದ ಹಿರಿಯರು ಅವತ್ತು ಅನೇಕ ರೈತರುಗಳನ್ನು ಗುಂಡಿಟ್ಟು ಕೊಂದು ಹಾಕಿದರು. ಅವತ್ತು ಇಷ್ಟೊಂದು ಬೃಹದಾಕಾರವಾದ ಚಳುವಳಿ ಇರಲಿಲ್ಲ. ರೈತರ ಬೇಡಿಕೆಗಳು ಬಹಳ ಸಾಮಾನ್ಯವಾಗಿದ್ದರೂ ಕೂಡ ಅವರು ಅವತ್ತು ಚಳುವಳಿಯನ್ನು ಏಕಾ ಏಕಿ ಪ್ರಾರಂಭ ಮಾಡಲಿಲ್ಲ. ಬಹಳ ನಿಧಾನವಾಗಿ ಉಪವಾಸ ಸತ್ಯಾಗ್ರಹ ಆಚರಿಸಿ, ಆ ಮೂಲಕ ಅವರ ಬೇಡಿಕೆಗಳು ಈಡೇರದೆ ಇದ್ದಾಗ ಅವರು ನರಗುಂದು ಬಂದ್ ಮಾಡಿದ ಒಂದು ಕಾರಣಕ್ಕೋಸ್ಕರ ಸುಮಾರು ೩೫–೪೦ ಜನ ರೈತರನ್ನು ಗುಂಡಿಟ್ಟು ಕೊಂದುಹಾಕಿದರು. ಆದರೆ ಇಷ್ಟೊಂದು ಬೃಹದಾಕಾರವಾಗಿ ಚಳುವಳಿ ನಡೆದರೂ ಕೂಡ ಇವತ್ತು ಸರಕಾರ ರೈತರ ಬಗ್ಗೆ ಅಭಿಮಾನವನ್ನು ಇಟ್ಟು ಅವರನ್ನು ಮಾತುಕತೆಗೆ ಕರೆಯುತ್ತಿದ್ದಾರೆ. ಮತ್ತು ಈ ಸಮಸ್ಯೆಯನ್ನು ಬಹಳ ಶಾಂತಿಯುತವಾಗಿ ಸಂಯಮದಿಂದ ಇತ್ಯರ್ಥ ಪಡಿಸುವುದಕ್ಕೆ ಸರಕಾರ ಪ್ರಯತ್ನ ಮಾಡುತ್ತಿದೆ. ಆದುದರಿಂದ ನಾವು ಸರಕಾರಕ್ಕೆ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ. ಅದೇ ಹಿಂದಿನ ಸರ್ಕಾರ ಆಗಿದ್ದರೆ ಇಷ್ಟು ಹೊತ್ತಿಗೆ ಎಷ್ಟು ಜನರನ್ನು ಗುಂಡಿಟ್ಟು ಉರುಳಿಸುತ್ತಿತ್ತೋ ಗೊತ್ತಿಲ್ಲ. ನಾವು ನರಗುಂದಕ್ಕೆ ಹೋಗಿದ್ದೆವು. ವಿರೋಧಪಕ್ಷದಲ್ಲಿದ್ದಾಗ, ವಿರೋಧಪಕ್ಷದ ನಾಯಕರು ಅನೇಕ ಜನ ಹೋಗಿ ನರಗುಂದ ನೋಡಿದಾಗ ಆ ಜನ ಹೊರಗಡೆ ಬರುವುದಕ್ಕೆ ಅಂಜುತ್ತಿದರು. ಅಲ್ಲಿ ಒಂದು ದೊಡ್ಡ ಮಿಲಿಟರಿ ದಂಡೇ ಇದ್ದಹಾಗೆ ಇತ್ತು. ಸಾವಿರಾರು ಜನ ಪೊಲೀಸರು, ಇಡೀ ರೈತರನ್ನು ಹೆದರಿಸಿ ಆಡಳಿತವನ್ನು ನಡೆಸತಕ್ಕಂತಹ ಒಂದು ವ್ಯವಸ್ಥೆ ಆಗಿ ಇತ್ತು. ಆದರೆ ಇವತ್ತು ಇಷ್ಟೆಲ್ಲಾ ಗಲಾಟೆಯಾಗಿದೆ, ಎಲ್ಲೋ ಸ್ವಲ್ಪ ಮಟ್ಟಿಗೆ ಲಾಠಿಚಾರ್ಜ್ ಆಗಿರಬಹುದು, ಜನರಿಗೆ ತೊಂದರೆಯಾಗಿರಬಹುದು. ಆದರೆ ಕಾನೂನು ಸುವ್ಯವಸ್ಥೆ ಪಾಲನೆ ಮಾಡುವುದಕ್ಕೆ ಇವತ್ತು ಈ ಸರಕಾರ ಬಹಳ ವ್ಯವಸ್ಥಿತವಾದಂಥ ರೀತಿಯಲ್ಲಿ ಆದೇಶವನ್ನು ಕೊಟ್ಟಿದೆ. ಮೊನ್ನೆ ೨೫ನೇ ತಾರೀಖು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಏನೆಂದರೆ ಚಳುವಳಿ ಮಾಡಿ, ಚಳುವಳಿ ಮಾಡುವುದು ನಿಮ್ಮ ಹಕ್ಕು, ಆದರೆ ಸಾರ್ವಜನಿಕರ ಆಸ್ತಿಗೆ ಧಕ್ಕೆ ಬಾರದಂಥ ರೀತಿಯಲ್ಲಿ ನಿಮ್ಮ ಚಳುವಳಿ ಇರಬೇಕು ಎನ್ನತಕ್ಕಂಥ ಮಾತನ್ನು ಹೇಳಿದರು. ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ರೈತರು ಜಾಗೃತಗೊಳ್ಳುತ್ತಿದ್ದಾರೆ. ಚಳುವಳಿ ಅಗತ್ಯ ಇದೆ. ನ್ಯಾಯವಾದಂಥ ಸಮಸ್ಯೆಗಳನ್ನು ಇವತ್ತು ಸರ್ಕಾರದ ಗಮನಕ್ಕೆ ತರತಕ್ಕದ್ದೂ ಕೂಡ ಅಗತ್ಯ ಇದೆ. ಆದರೆ ಈ ಚಳುವಳಿಯಲ್ಲಿ ಸಾಮಾನ್ಯ ರೈತರ ಬಗ್ಗೆ ಕೂಡ ಒಂದು ಕಳಕಳಿಯನ್ನು ವ್ಯಕ್ತಪಡಿಸತಕ್ಕಂಥಾದ್ದು ರೈತ ಸಂಘದ ಕರ್ತವ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೇವಲ ಲಕ್ಷಾಂತರ ರೂಪಾಯಿ ಬಾಕಿ ಕೂಡ ಬೇಕಾದಂಥ ಜನ ಇವತ್ತು ಆ ಸಾಲವನ್ನು ಕೊಡುವುದಕ್ಕೆ ಸಾಧ್ಯವಾಗದೆ ಅಥವಾ ಕೊಡಬಾರದು ಎನ್ನತಕ್ಕಂಥ ದೃಷ್ಟಿಯಿಂದ ಇವತ್ತು ಅಧಿಕಾರಿಗಳು ಹಳ್ಳಿಗಳಿಗೆ ಬಂದರೆ ಅವರನ್ನು ತಡೆಯುವುದು, ಅವರಿಗೆ ಬೆದರಿಕೆ ಹಾಕುವುದು ಅಥವಾ ಅದರಿಗೆ ಅಪಮಾನ ಮಾಡುವುದು

ಈ ರೀತಿ ಮಾಡುವುದಾದರೆ, ಮುಂದೆ ಸರಕಾರ ಯಾರೇ ನಡೆಸಲಿ, ಜನತಾ ಪಕ್ಷ ಸರಕಾರ ನಡೆಸಲಿ, ಕಾಂಗ್ರೆಸ್ ಪಕ್ಷ ಸರಕಾರ ನಡೆಸಲಿ, ಮತ್ತೆ ಯಾವುದೇ ಪಕ್ಷ ಸರಕಾರ ನಡೆಸಿದರೂ ಕೂಡಾ, ಆಡಳಿತ ನಡೆಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಇಂತಹ ಒಂದು ಪರಿಸ್ಥಿತಿ ಬಂದಾಗ ಎಲ್ಲರೂ ಅದನ್ನು ಖಂಡಿಸಬೇಕಾಗುತ್ತದೆ. ಇವತ್ತು ಉದಾಹರಣೆಗೆ ಹೇಳುವುದಾದರೆ ಹೊಳಗೇರಿ ಎಂಬ ಒಂದು ಹಳ್ಳಿ. ಅಲ್ಲಿನ ತಹಸೀಲ್ದಾರರು ಒಬ್ಬ ಹೆಣ್ಣು ಮಗಳು, ಆ ಹೆಣ್ಣು ಮಗಳು ತಹಸಿಲ್ದಾರರಾಗಿ ಹಳ್ಳಿಗೆ ಹೋದರೆ, ಇಲ್ಲಸಲ್ಲದ ರೀತಿಯಲ್ಲಿ ಮಾತಾಡಿ, ಅವರಿಗೆ ಅಪಮಾನ ಆಗುವ ರೀತಿಯಲ್ಲಿ ವರ್ತನೆ ಮಾಡುವುದಾದರೆ, ಯಾರು ತಾನೆ ಸಹಿಸುವುದಕ್ಕೆ ಸಾಧ್ಯ. ಇವತ್ತು ರೈತ ಸಂಘದ ಮುಂದಾಳುಗಳು ಇದೆಲ್ಲವನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. ತಮ್ಮ ಬೇಡಿಕೆ ಈಡೆರಬೇಕು, ಇವತ್ತು ನ್ಯಾಯ ದೊರೆಯಬೇಕು, ಅವರು ಬೆಳೆದಂಥ ಬೆಳೆಗೆ ಬೆಲೆ ಸಿಗಬೇಕು, ಎಂದು ಕೇಳುವವರು ಅವರು ದುಡಿಸಿ ಕೊಳ್ಳತಕ್ಕಂಥ ದಿನಗೂಲಿ ಗಾರರಿಗೂ ಸರಿಯಾದಂಥ ಕೂಲಿಯನ್ನು ಕೊಡಬೇಕು. ಅವರಿಗೆ ಏನು ಅನುಕೂಲ ಬೇಕು ಎಂದು ಕೇಳುತ್ತಾರೋ, ಆ ಅನುಕೂಲದಲ್ಲಿ ಒಂದು ಪಾಲು ಅವರ ಜಮೀನಿನಲ್ಲಿ ಕೆಲಸ ಮಾಡತಕ್ಕಂಥ ದುಡಿಯತಕ್ಕಂಥಹ ಕೆಲಸಗಾರರಿಗೆ ಸಿಗಬೇಕು ಎಂದು ಅವರ ಬಗ್ಗೆ ಅಷ್ಟೇ ಕಳಕಳಿಯ ಭಾವನೆ ಇರಬೇಕು. ಆದರೆ ಚಳುವಳಿ ಹೂಡುವಾಗ ಸಾಮಾನ್ಯ ಜನರನ್ನು ಉಪಯೋಗಿಸಿಕೊಳ್ಳುತ್ತಾರೆ. ಆದರೆ ಚಳುವಳಿಯಿಂದ ಬರತಕ್ಕಂತಹ ಲಾಭದಲ್ಲಿ ಅವರಿಗೆ ಯಾವುದೇ ರೀತಿಯಾದಂಥ ಪಾಲೂ ಇಲ್ಲ. ಆದುದರಿಂದ ಇದು ರೈತ ಚಳುವಳಿ ಮಾತ್ರ ಆಗಬಾರದು. ರೈತ ಕಾರ್ಮಿಕರ ಚಳುವಳಿ ಆಗಬೇಕು. ರೈತ ಕಾರ್ಮಿಕರು ಇವತ್ತು ಬೆಳೆದಂತಹ ಬೆಳೆಗೆ ಮಾರುಕಟ್ಟೆಯಲ್ಲಿ ಬೆಲೆ ಅಧಿಕ ಆದಾಗ ಅವರಲ್ಲಿ ದುಡಿಯತಕ್ಕಂತಹ ಜನರಿಗೆ ಸರಿಯಾದಂಥ ಕೂಲಿ ಸಿಗದೇ ಹೋದರೆ ಅವರಿಗೆ ಅನ್ಯಾಯವಾಗುತ್ತದೆ.

೪-೦೦ ಪಿ.ಎಂ.

ಆದ್ದರಿಂದ ಇಡೀ ರಾಜ್ಯಾದ್ಯಂತ ಈ ಒಂದು ಚಳುವಳಿ ಕೆಲವು ಕಡೆ ಸ್ವಲ್ಪ ಹೆಚ್ಚು ಮತ್ತೆ ಕೆಲವು ಕಡೆ ಸ್ವಲ್ಪ ಕಡಿಮೆ ಆಗಿದೆ. ಉದಾಹರಣೆಗೆ ಹೇಳುವುದಾದರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಅಷ್ಟೊಂದು ತೀವ್ರವಾಗಿ ಇಲ್ಲ. ಏಕೆಂದರೆ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಹರಿಹರ ಮತ್ತು ದಾವಣಗೆರೆ ತಾಲ್ಲೂಕುಗಳು ಸ್ವಲ್ಪ ನೀರಾವರಿ ಪ್ರದೇಶ. ಅದನ್ನು ಬಿಟ್ಟರೆ, ಚಳ್ಳಕೆರೆ, ಜಗಳೂರು, ಮೊಳಕಾಲ್ಮೂರು, ಹೊಳಲ್ಕೆರೆ ಅಥವಾ ಹೊಸದುರ್ಗ ತಾಲ್ಲೂಕುಗಳಲ್ಲಿ ಇರತಕ್ಕ ರೈತರ ಸಮಸ್ಯೆಯನ್ನು ಇವತ್ತು ಚಳುವಳಿಯನ್ನು ಮಾಡತಕ್ಕಂಥ ರೈತ ಸಂಘದವರು ತಿಳಿದುಕೊಂಡಿದ್ದಾರೆಯೇ ಎನ್ನುವುದು ನನ್ನ ಪ್ರಶ್ನೆ. ಅಥವಾ ಅವರಿಗೆ ಬೇಕಾದ ಸವಲತ್ತುಗಳು ಏನು ಬೇಕು ಆ ಸವಲತ್ತುಗಳನ್ನು ಸರ್ಕಾರದ ಮೂಲಕ ಯಾವ ರೀತಿ ಒದಗಿಸಿಕೊಡಬೇಕು ಎನ್ನತಕ್ಕಂಥದ್ದರ ಬಗ್ಗೆ ಯೋಚನೆ ಮಾಡಬೇಕಾದುದು ರೈತ ಸಂಘದವರ ಕರ್ತವ್ಯ. ಇವತ್ತು ಎಲ್ಲಿ ಹೆಚ್ಚಿಗೆ ನೀರಾವರಿ ಸೌಲಭ್ಯ ಇದೆ, ಎಲ್ಲಿ ಹೆಚ್ಚಿಗೆ ಬೆಳೆಯನ್ನು ಬೆಳೆಯುತ್ತಿದ್ದಾರೆ, ಎಲ್ಲಿ ಹೆಚ್ಚಿಗೆ ಬೆಳೆ ಬರತಕ್ಕ ಜಾಗ ಇದೆ ಅಲ್ಲಿ ಇವತ್ತು ಅವರು ಬೆಳೆದಂತಹ ಬೆಳೆಗೆ ಹೆಚ್ಚು ಬೆಲೆ ಬರಬೇಕು. ಆದರೆ ಈ ರಾಜ್ಯದಲ್ಲಿ ಅಂಕಿ ಅಂಶಗಳ ಪ್ರಕಾರ ನೋಡುವುದಾದರೆ, ಸುಮಾರು ಶೇಕಡ ೨೦ರಷ್ಟು ನೀರಾವರಿ ಪ್ರದೇಶ ಇದ್ದರೆ, ಇನ್ನೂ ಶೇಕಡ ೮೦ರಷ್ಟು ಭೂಮಿಯಲ್ಲಿ ಮಳೆಯಿಂದ ಬೆಳೆಯತಕ್ಕಂತಹ ಪ್ರದೇಶ ಇದೆ. ಆ ಭಾಗದಲ್ಲಿರತಕ್ಕ ರೈತರ ಸಮಸ್ಯೆ ಏನು? ಆ ಭಾಗದಲ್ಲಿರತಕ್ಕ ರೈತರಿಗೆ ನಾವು ಒದಗಿಸಿ ಕೊಡಬೇಕಾದ ಸವಲತ್ತುಗಳೇನು ಎಂಬುದರ ಬಗ್ಗೆ ಇವರು ಈವತ್ತು ಚಿಂತನೆ ಮಾಡಿದ್ದಾರೆಯೇ? ರೈತರ ಬಗ್ಗೆ ನ್ಯಾಯವಾಗಿ ಕಳಕಳಿ ಇದೆ. ರೈತರಿಗೆ ಸಹಾಯ ಮಾಡತಕ್ಕಂತಹ ಯೋಜನೆಯನ್ನು ಇವತ್ತು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಪಟ್ಟಿದ್ದೇವೆಯೇ ಎಂಬುದನ್ನು ನಾವು ಯೋಚನೆ ಮಾಡಬೇಕು. ಆದ್ದರಿಂದ ಈ ರೈತ ಸಂಘದವರ ಸಭೆಯನ್ನು ಸರ್ಕಾರದವರು ಮೊದಲೇ ಕರೆದಿದ್ದಾರೆ. ಅವರನ್ನು ಮಾತುಕತೆಗೆ ಆಹ್ವಾನಿಸದ್ದಾರೆ. ಚಳುವಳಿ ಮಾಡತಕ್ಕಂತಹ ಉದ್ದೇಶ ಏನು ಎಂದರೆ ಸರ್ಕಾರದ ಗಮನಕ್ಕೆ ನಿಮ್ಮ ಸಮಸ್ಯೆಗಳನ್ನು ತರಬೇಕು ಎನ್ನತಕ್ಕಂತಹದ್ದು. ಸರ್ಕಾರದ ಗಮನಕ್ಕೆ ಸಮಸ್ಯೆಯನ್ನು ತಂದಿದ್ದೀರಿ. ಸರ್ಕಾರದ ಗಮನಕ್ಕೆ ಸಮಸ್ಯೆ ಬಂದ ಮೇಲೆ ಸರ್ಕಾರ ಅದನ್ನು ಗಮನಿಸಿ ಅವರೊಡನೆ ಮಾತುಕತೆ ನಡೆಸಿ ಇರತಕ್ಕ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಆದರೆ ಈವತ್ತು ಸಭಾ ನಾಯಕರೂ ಹಾಗೂ ರಾಜ್ಯ ಮುಖ್ಯಮಂತ್ರಿಗಳು ಅವರನ್ನು ಮಾತುಕತೆಗೆ ಆಹ್ವಾನಿಸಿದರೂ ಕೂಡ ಚಳುವಳಿಯನ್ನು ಹೂಡಬೇಕೆಂದು ಹೂಡಿದ್ದಾರೆ. ಚಳುವಳಿಗೋಸ್ಕರ ಚಳುವಳಿಯಾಗಬಾರದು. ಸಮಸ್ಯೆಯನ್ನು ಇತ್ಯರ್ಥಪಡಿಸುವುದಕ್ಕೋಸ್ಕರ ಚಳುವಳಿ ಆಗಬೇಕೇ ಹೊರತು, ಚಳುವಳಿಗೋಸ್ಕರ ಅಲ್ಲ, ಸಮಸ್ಯೆಯ ಬಗ್ಗೆ ಚಳುವಳಿಯನ್ನು ಹೂಡಬೇಕು. ರಾಜ್ಯದಲ್ಲಿ ಗೊಂದಲಮಯವಾದ ವಾತಾವರಣವನ್ನು ಉಂಟು

ಮಾಡಬೇಕು ಎನ್ನತಕ್ಕಂತಹ ದೃಷ್ಟಿಯಿಂದ ಈವತ್ತು ಚಳುವಳಿಯನ್ನು ಮಾಡಬಾರದು. ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತಂದು ಅವುಗಳನ್ನು ಇತ್ಯರ್ಥಪಡಿಸುವುದಕ್ಕೆ ಸರಿಯಾದ ಸಲಹೆಗಳನ್ನು ಕೊಟ್ಟು ಆ ಸಲಹೆಗಳ ಮೂಲಕ ಅನುಕೂಲತೆಯನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು, ಈವತ್ತು ರಾಜ್ಯದಲ್ಲಿ ಒಂದು ದೊಡ್ಡ ಗೊಂದಲಮಯವಾದ ವಾತಾವರಣವನ್ನು ಉಂಟು ಮಾಡಿದರೆ, ಅದರಿಂದ ಅಧಿಕಾರಿಗಳಿಗೆ ತೊಂದರೆ, ಸಾಮಾನ್ಯ ಜನರಿಗೆ ತೊಂದರೆ, ಸಾಗಾಣಿಕೆಗೆ ತೊಂದರೆ ಹಾಗೂ ಕೆಲಸಕ್ಕೆ ಹೋಗತಕ್ಕಂಥಹವರಿಗೆ ತೊಂದರೆಯಾಗುತ್ತದೆ. ಈ ರೀತಿಯ ವಾತಾವರಣವನ್ನು ಉಂಟು ಮಾಡುವುದರಿಂದ, ಯಾವ ಸಾಧನೆಯನ್ನು ಸಾಧಿಸಿದಂತಾಗುತ್ತದೆ ಎನ್ನತಕ್ಕಂತಹ ಪ್ರಶ್ನೆಯನ್ನು ಸಾಮಾನ್ಯವಾಗಿ ನಾವು ಮಾಡಬೇಕಾಗುತ್ತದೆ.

ಅಧ್ಯಕ್ಷರು.—ದಯಮಾಡಿ ಮುಗಿಸಿ. ಇನ್ನೂ ಮಾತನಾಡುವವರು ಬಹಳ ಜನ ಇದ್ದಾರೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ, ಬೇರೆಯವರು ಮಾತನಾಡುವಾಗ ಗಂಟೆಗಟ್ಟಲೇ ಸುಮ್ಮನೇ ಇರುತ್ತೀರಿ. ನಾವು ಮಾತನಾಡುವಾಗ ಗಂಟೆ ಹೊಡೆಯುತ್ತೀರಿ.

ಅಧ್ಯಕ್ಷರು.—ನಿಮ್ಮ ಲೀಡರ್‌ಗಳು ಮಾತನಾಡುವಾಗ ಗಂಟೆಗಟ್ಟಲೇ ಅವಕಾಶ ಕೊಟ್ಟಿದ್ದೇನೆ.

ಶ್ರೀ ಪಂಪಾಪತಿ.—ಲೀಡರ್‌ಗೆ ಗೊತ್ತಿದ್ದ ಹಾಗೆ ಅವರು ಮಾತನಾಡುತ್ತಾರೆ. ನನಗೆ ಗೊತ್ತಿದ್ದ ಕೆಲವು ಅಂಶಗಳನ್ನು ಹೇಳಬೇಕಲ್ಲ.

ಅಧ್ಯಕ್ಷರು.—ಅದಕ್ಕೇ ಲೀಡರ್‌ಗೆ ಹೆಚ್ಚು ಅವಕಾಶ. ನಿಮಗೆ ಕಡಿಮೆ ಅವಕಾಶ.

ಶ್ರೀ ಪಂಪಾಪತಿ,—ನಮ್ಮ ಅನುಭವದ ಅನೇಕ ವಿಷಯಗಳನ್ನು ಹೇಳುತ್ತಿದ್ದೇನೆ. ಹಿಂದೆ ಇದ್ದಂತಹ ಸರ್ಕಾರ ಏನು ಮಾಡುತ್ತಿದ್ದರು. ಯಾರಾದರೂ ೪ ಜನ ಸೇರಿ ಒಂದು ಚಳುವಳಿಯನ್ನು ಮಾಡಿದರೂ ಕೂಡ, ತಕ್ಷಣ ಪೋಲೀಸ್ ಬಂದು ಲಾಠಿ ಚಾರ್ಜ್ ಮಾಡಿ, ಅವರನ್ನು ಹೊಡೆದು ಜೈಲಿಗೆ ಹಾಕುತ್ತಿದ್ದರು. ಆದರೆ ಈವತ್ತು ಅಧಿಕಾರ ಮಾಡತಕ್ಕಂತಹವರು ಆ ರೀತಿ ಮಾಡಿಲ್ಲ. ಅವರಿಗೆ ಮಾಡುವುದಕ್ಕೆ ಬರುವುದಿಲ್ಲ ಎಂದಲ್ಲ, ಅಥವಾ ಮಾಡುವುದಕ್ಕಾಗುವುದಿಲ್ಲ ಎಂದಲ್ಲ. ಆದರೆ ಹಾಗೆ ಮಾಡಬಾರದು ಎಂದು ತಿಳಿದುಕೊಂಡು ಮಾಡುತ್ತಿಲ್ಲ. ರೈತರು ನಮ್ಮವರೇ ಅವರು ನಮ್ಮ ರಾಜ್ಯದವರು, ಅವರೇ ಈ ದೇಶಕ್ಕೆ ಅನ್ನವನ್ನು ಬೆಳೆದು ಕೊಡತಕ್ಕಂತಹವರು ಅವರ ಜೊತೆ ಇವತ್ತು ನಾವು ಸಹಾನುಭೂತಿಯಿಂದ ಅವರ ಪ್ರಶ್ನೆಯನ್ನು ಪರಿಶೀಲಿಸಬೇಕು. ಅವರಿಗೆ ಅನುಕೂಲವನ್ನು ಒದಗಿಸಿಕೊಡಬೇಕು ಎನ್ನತಕ್ಕಂಥಹ ದೃಷ್ಟಿಯಿಂದ ಈವತ್ತು ರೈತರ ಬಗ್ಗೆ ಯಾವುದೇ ರೀತಿಯ ಕ್ರೂರವಾದ ಒಂದು ವ್ಯವಸ್ಥೆಗೆ ಈ ಸರ್ಕಾರದವರು ಹೋಗಲಿಲ್ಲ. ಅವರಿಗೆ ಸಹಾನುಭೂತಿಯನ್ನು ತೋರಿಸಿದ್ದಾರೆ. ಈಗಲೂ ಕೂಡ ಸಭಾ ನಾಯಕರು ಹೇಳಿದ ಹಾಗೆ ಕಾಲ ಮಿಂಚಿ ಹೋಗಿಲ್ಲ. ಈಗಲೂ ಸರ್ಕಾರದ ಜೊತೆಯಲ್ಲಿ ಸಹಕರಿಸಿ ಎಂಬುದಾಗಿ ಹೇಳುತ್ತಿದ್ದಾರೆ. ಇದರ ಬಗ್ಗೆ ಒಂದು ಕಡೆ ಕುಳಿತುಕೊಂಡು ಚರ್ಚೆ ಮಾಡೋಣ. ಎಲ್ಲ ವಿಷಯಗಳನ್ನೂ ಪರಿಶೀಲನೆ ಮಾಡೋಣ ಎಂದು ಹೇಳಿದ್ದಾರೆ. ಈವತ್ತಿನ ಸಮಸ್ಯೆಯನ್ನು ಉಲ್ಬಣಗೊಳಿಸುವುದಕ್ಕಿಂತಲೂ ಬಗೆಹರಿಸತಕ್ಕಂಥದ್ದು ಬಹಳ ಮುಖ್ಯ. ಈವತ್ತು ಕರ್ನಾಟಕ ರಾಜ್ಯದಲ್ಲಿ ಬೆಲೆ ಹೇರುತ್ತಿದೆ. ಜನತೆಗೆ ಮುಂದೆ ಎಂತಹ ಪರಿಸ್ಥಿತಿ ಉಂಟಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇಂತಹ ಸಂದರ್ಭದಲ್ಲಿ ಇವತ್ತು ರೈಲು ರೋಖೋ, ರಸ್ತೆ ರೋಖೋ ಚಳುವಳಿಗಳನ್ನು ಮಾಡಿದರೆ ಹೇಗೆ. ಈ ಚಳುವಳಿ ನಿಜ. ಅದು ಒಂದು ದಿವಸದ ಮಟ್ಟಿಗೆ ಆಗಿದ್ದಿದ್ದರೆ ನಮ್ಮ ಅಭ್ಯಂತರವಿಲ್ಲ. ಏಕೆಂದರೆ ಇವತ್ತು ದುಡಿದು ಜೀವನ ಮಾಡತಕ್ಕಂತಹ ಜನ ಇದ್ದಾರೆ. ಅವನು ದುಡಿಮೆ ಮಾಡದಿದ್ದರೆ, ಅವನ ಮನೆಯಲ್ಲಿರತಕ್ಕವರೆಲ್ಲಾ ಉಪವಾಸ ಇರತಕ್ಕಂತಹ ಪರಿಸ್ಥಿತಿ ಇದೆ. ಅಂತ ಜನ ಎಷ್ಟು ಇದ್ದಾರೆ? ಅಂತಹ ಜನರ ಪರಿಸ್ಥಿತಿ ಏನು ಎಂಬುದನ್ನೂ ಕೂಡ ಯೋಚನೆ ಮಾಡಬೇಕು ಈ ಸದನದ ಮೂಲಕ ರಾಜ್ಯ ರೈತ ಸಂಘದ ನಾಯಕರಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಸಾಮಾನ್ಯ ಜನರ ಹಿತದ ಬಗ್ಗೆ ಗಮನ ಹರಿಸಿ. ತಮ್ಮ ಬೇಡಿಕೆ ಬಗ್ಗೆ ನಾವೆಲ್ಲರೂ ಹಿಂಬಾಲಕರಾಗಿ ತಮ್ಮ ಚಳುವಳಿಯ ಬಗ್ಗೆ ಬೆಂಬಲಿಗರಾಗಿದ್ದೇವೆ. ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ರೈತ ಚಳುವಳಿಯನ್ನು ಗಮನಿಸಬೇಕಾದುದು ಇದೆ. ಅವರದ್ದು ಒಂದೇ ಸಂಘ ಇಲ್ಲ. ೪–೫ ಸಂಘಗಳು ಇವೆ. ಅವರವರ ಮಧ್ಯದಲ್ಲೇ ಇವತ್ತು ಸಂಘಟನೆ ಮಾಡಿಕೊಂಡು ರೈತರ ಸಮಸ್ಯೆಯನ್ನು ವಿಚಾರ ಮಾಡುವುದಕ್ಕಾಗಿ ಅಲ್ಲ. ಕೃಷಿ ಕಾರ್ಮಿಕರ ಸಮಸ್ಯೆಯನ್ನು ವಿಚಾರ ಮಾಡುವುದಕ್ಕಾಗಿ ಹಾಗೂ ಸಾಮಾನ್ಯ ಜನರ ಸಮಸ್ಯೆಯನ್ನು ವಿಚಾರ ಮಾಡುವುದಕ್ಕಾಗಿ ಸಂಘಟನೆ ಮಾಡಿದ್ದು ಎಂಬುದನ್ನು ಮರೆಯಬಾರದು. ಆದ್ದರಿಂದ ಏನು ನಮ್ಮ ಮಾನ್ಯ ಮುಖ್ಯ

ಮಂತ್ರಿಗಳು ತಿಳಿಸಿದಂತಹ ರೀತಿಯಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ಈಗಲೇ ನಮಗೆ ಬರವಣಿಗೆಯ ಮೂಲಕ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ. ಇವೆಲ್ಲವನ್ನೂ ನಾವು ನೋಡಿದಾಗ, ಈ ಸರ್ಕಾರ ಸಾಮಾನ್ಯ ಜನರ ಬಗ್ಗೆ ಹಾಗೂ ರೈತರ ಬಗ್ಗೆ ಎಷ್ಟೊಂದು ಕಾಳಜಿಯನ್ನು ವಹಿಸಿದೆ ಎಂಬುದು ಗೊತ್ತಾಗುತ್ತದೆ. ಸರ್ಕಾರ ಅವರಿಗೆ ವಿರೋಧವಾಗುವ ರೀತಿಯಲ್ಲಿ ನಡೆದುಕೊಂಡಿಲ್ಲ. ಯಾವ ಭಾಗದಲ್ಲೇ ರೈತರ ಮೇಲೆ ಗುಂಡು ಹೊಡೆದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದಾಗ ರೈತರ ಬಗ್ಗೆ ಬಹಳ ಕಾಳಜಿ ವಹಿಸಿ ಮಾತನಾಡುತ್ತಿದ್ದರು. ಅವರು ಹಿಂದೆ ಅಧಿಕಾರದಲ್ಲಿದ್ದಾಗ ಎಷ್ಟು ಜನ ಬೆಂಗಳೂರಿಗೆ ಬಂದಿದ್ದರು? ಲಕ್ಷಾಂತರ ಜನ ರೈತರು ಬಂದಾಗ ಅಂದಿನ ಮುಖ್ಯ ಮಂತ್ರಿಗಳು ಏನು ಹೇಳಿದರು ಎಂದರೆ, ಇಲ್ಲಿಗೆ ಬಂದಿರುವವರೆಲ್ಲಾ ರೈತರಲ್ಲ. ಬಾಡಿಗೆ ಜನ ಎಂದು ಹೇಳಿದರು. ಆವತ್ತು ಆ ರೀತಿ ಹೇಳಿದಂತಹವರು, ಈವತ್ತು ರೈತರ ಬಗ್ಗೆ ಇವರಿಗೆ ಎಷ್ಟೊಂದು ಗೌರವ, ಎಷ್ಟೊಂದು ಅಭಿಮಾನ. ಈವತ್ತು ರೈತರ ಬಗ್ಗೆ ಹಾಗೂ ರೈತರ ಬೇಡಿಕೆಯ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಇವರಿಗೆ ಇಷ್ಟೊಂದು ಸಹಾನುಭೂತಿ ರೈತರ ಮೇಲೆ ಬಂದಿರುವುದು ನನಗೆ ಬಹಳ ಸಂತೋಷವಾಗಿದೆ. ಇದೇ ಸಹಾನುಭೂತಿ ರೈತರ ಬಗ್ಗೆ ಮೊದಲೇ ಇದ್ದಿದ್ದರೆ ಖಂಡಿತವಾಗಿ ಈ ಸಮಸ್ಯೆಗಳನ್ನು ಪರಿಹಾರ ಮಾಡಬಹುದಾಗಿತ್ತು. ಆದುದರಿಂದ, ಈ ಒಂದು ಸಮಸ್ಯೆ ಏನಿದೆ ಇದನ್ನು ನಾವು ಕೂಡ ಅಷ್ಟೊಂದು ಲಘುವಾಗಿ ಭಾವಿಸುವಂತಿಲ್ಲ. ಏಕೆಂದರೆ ಒಬ್ಬೊಬ್ಬರು ಒಂದೊಂದು ರೀತಿ ಮಾತನಾಡಿ ಸಮಸ್ಯೆಯನ್ನು ಉಲ್ಬಣಗೊಳಿಸುವುದಕ್ಕಿಂತಲೂ ಸಮಸ್ಯೆಯನ್ನು ಬಹಳ ಗಹನವಾಗಿ ಯೋಚನೆ ಮಾಡಿ ಪರಿಹಾರ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ರಕ್ಷಣಾ ಇಲಾಖೆಯವರು ಬಹಳ ಸಂಯಮದಿಂದ ವರ್ತನೆ ಮಾಡಿ ರಾಜ್ಯದಲ್ಲಿ ಅಹಿತಕರ ಘಟನೆ ನಡೆಯದಂತೆ ಏನು ಒಂದು ವಾತಾವರಣವನ್ನು ಕಾಪಾಡಿಕೊಂಡು ಬಂದಿದ್ದಾರೆ. ಅದೇ ರೀತಿಯಲ್ಲಿ ಮುಂದೆಯೂ ಕೂಡ ಯಾವುದೇ ಚಳುವಳಿ ನಡೆಯಲಿ ಆಗಲೂ ಸಹ ಇಂಥಾ ವಾತಾವರಣವನ್ನು ಕಾಪಾಡಿಕೊಂಡು ಬರುತ್ತಾರೆಂದು ನಂಬಿದ್ದೇನೆ. ಚಳುವಳಿ ನಡೆಸತಕ್ಕದ್ದು ಪ್ರಜೆಗಳ ಹಕ್ಕು. ಆ ಹಕ್ಕಿಗೆ ಚ್ಯುತಿ ಬಾರದಂತೆ ಪೋಲೀಸ್ ಇಲಾಖೆ ತಹಬಂದಿಗೆ ಬಂದಿದೆ. ಅದಕ್ಕೆ ಪೋಲೀಸ್ ಇಲಾಖೆಯವರನ್ನು ಅಭಿನಂದಿಸಬೇಕು. ಈಗ ಅಲ್ಲಿ ಇಲ್ಲಿ ಸ್ವಲ್ಪ ತೊಂದರೆಗಳು ಆಗಿವೆ. ಇನ್ನು ಮುಂದೆ ಆ ರೀತಿ ಆಗದಂತೆ ದಕ್ಷ ರೀತಿಯಲ್ಲಿ ಆಡಳಿತ ನಡೆಸುವುದಕ್ಕೆ ಪೋಲೀಸರ ಸಹಕಾರ ಅಗತ್ಯ. ರುದ್ರಪ್ಪನವರ ನಾಯಕತ್ವದಲ್ಲಿರತಕ್ಕ ಸಂಘಟನೆ ಹಾಗೂ ಅವರ ನಾಯಕತ್ವದಲ್ಲಿರತಕ್ಕ ನಾಯಕರು ಕೂಡ ನಮ್ಮ ರಾಜ್ಯದಲ್ಲಿ ಹೆಚ್ಚಿನ ಗೊಂದಲ ಏರ್ಪಾಡು ಮಾಡದಂತೆ ಜನರಿಗೆ ತೊಂದರೆ ಆಗದಂತೆ ಸರ್ಕಾರದ ಜೊತೆಯಲ್ಲಿ ಮಾತುಕತೆ ನಡೆಸಿ ಅವರ ಬೇಡಿಕೆಗಳನ್ನು ಇತ್ಯರ್ಥಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗಾಗಲೇ ಇದರ ಬಗ್ಗೆ ೪ ಗಂಟೆಗಳ ಕಾಲ ಚರ್ಚೆಯಾಗಿದೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ಎಲ್ಲ ಪಕ್ಷಗಳವರು ಮಾತನಾಡಬೇಕು. ನಮ್ಮ ಪಕ್ಷದ ನಿಲುವನ್ನು ನಾವು ಹೇಳಬೇಕು. ಜನರಿಗೆ ತಿಳುವಳಿಕೆ ಆಗಬೇಕು.

ಅಧ್ಯಕ್ಷರು.—ಈ ಸಭೆಯನ್ನು ಕೆಲವು ನಿಯಮದ ವ್ಯಾಪ್ತಿಯೊಳಗೆ ನಡೆಸಬೇಕಾಗುತ್ತದೆ. ಯಾರ್ಯಾರು ನೋಟೀಸು ಕೊಟ್ಟಿದ್ದಾರೆ ಅವರ ಹೆಸರನ್ನು ಮೊದಲು ಕರೆಯುತ್ತೇನೆ. ನಂತರ ನಿಮಗೆ ಕೊಡುತ್ತೇನೆ.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೆ, ಮುಖ್ಯ ಮಂತ್ರಿಗಳ ಹೇಳಿಕೆಯನ್ನು ಸಮರ್ಥಿಸುತ್ತಾ, ಕೇವಲ ಎರಡು ನಿಮಿಷಗಳಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ನಾವು ಚುನಾವಣಾ ಪ್ರಣಾಳಿಕೆಯಲ್ಲಿ ಏನು ಒಂದು ಮಾತು ಕೊಟ್ಟಿದ್ದೇವೆ ಅದರಂತೆ ರೈತರ ಮತ್ತು ಕಾರ್ಮಿಕರ ಬಗ್ಗೆ ಸರ್ಕಾರ ನಡೆದುಕೊಂಡಿರತಕ್ಕ ರೀತಿಯೇ ಜ್ವಲಂತ ಸಾಕ್ಷಿಯಾಗಿದೆ ಎಂದರೆ ತಪ್ಪಾಗಲಾರದೆಂದು ಅಂದುಕೊಂಡಿದ್ದೇನೆ. ಅಂದು ಮತ್ತು ಇಂದು ನಡೆದ ರೈತರ ಚಳುವಳಿಗೆ ಎಷ್ಟು ವ್ಯತ್ಯಾಸ ಇದೆ ಎಂಬುದನ್ನು ನೋಡಬಹುದು. ಅಂದು ಚಳುವಳಿ ಆದಾಗ ಅದೇ ಪೋಲೀಸರು ಇದ್ದರು. ಆಗ ಯಾವ ರೀತಿ ರೈತರ ಮೇಲೆ ದಮನ ಮಾಡತಕ್ಕ ರೀತಿಯಲ್ಲಿ ಅಶ್ರುವಾಯು, ಲಾಠಿ ಪ್ರಹಾರ ಮಾಡಿರತಕ್ಕದ್ದನ್ನು ಗೋಲೀಬಾರ್ ಆಗಿರತಕ್ಕದ್ದನ್ನು ನೋಡಿ ಚರ್ಚೆ ಮಾಡಿದ್ದೇವೆ. ಇಂದು ಒಂದೇ ವರ್ಷದಲ್ಲಿ ಎಷ್ಟು ವ್ಯತ್ಯಾಸವಾಗಿದೆ ಎಂಬುದಕ್ಕೆ ಇದೊಂದು ಉದಾಹರಣೆ. ಇವತ್ತಿನ ದಿವಸ ಎಲ್ಲಿ ಶಾಂತಿಯುತವಾಗಿ ಚಳುವಳಿ ಆಗುತ್ತದೆ ಅದೇ ಬೇಡಿಕೆಯ ಕೊನೇ ಅಸ್ತ್ರ. ಅದಕ್ಕೆ ಬೆಲೆ

ಇದೆ. ನಾವು ಸಂಪೂರ್ಣವಾಗಿ ಕ್ರಾಂತಿಯಲ್ಲಿ ನಂಬಿಕೆ ಇರುವವರು, ಲೋಕಶಕ್ತಿ ನಿರ್ಮಾಣ ಮಾಡತಕ್ಕವರು. ಚಳುವಳಿಯನ್ನು ಕೊನೇ ಅಸ್ತ್ರವಾಗಿ ಉಪಯೋಗಿಸತಕ್ಕವರು. ಮೊದಲು ಪ್ರಜಾಪ್ರಭುತ್ವದಲ್ಲಿ ಮಾತುಕತೆ ಆಗಬೇಕೆಂಬುದನ್ನು ಪುನಃ ಒತ್ತಿ ಹೇಳುತ್ತೇನೆ. ಇವತ್ತು ಚಳುವಳಿ ಆಗಿದೆ, ಲಕ್ಷಾಂತರ ರೈತರು ಚಳುವಳಿಯಲ್ಲಿ ಪ್ರವೇಶ ಮಾಡಿ ಸಾಕಷ್ಟು ರೈತರು ದಸ್ತಗಿರಿ ಆಗಿದ್ದಾರೆ, ಮತ್ತು ಅಷ್ಟೇ ಶಾಂತ ರೀತಿಯಲ್ಲಿ ನಡೆದುಕೊಂಡು ಬಂದಿದ್ದಾರೆ, ಹಾಗೂ ಅಷ್ಟೇ ಶಾಂತ ರೀತಿಯಲ್ಲಿ ಚಳುವಳಿ ಮಾಡುವುದಕ್ಕೆ ಸರ್ಕಾರ ಅವಕಾಶ ಕೊಟ್ಟಿರುವುದನ್ನು ನೋಡುತ್ತಿದ್ದೇವೆ. ಈ ಸಂದರ್ಭದಲ್ಲಿ ನಾನಾದರೂ ಮನವಿ ಮಾಡಿಕೊಳ್ಳುವುದು ಏನೆಂದರೆ, ರೈತ ಚಳುವಳಿಯಾಗಲಿ ಅಥವಾ ಕಾರ್ಮಿಕ ಚಳುವಳಿ ಆಗಲಿ ರಾಜಕೀಯ ಜಂಜಾಟ ಮಾಡುವುದು ಬೇಡವೆಂದು ಹೇಳುತ್ತೇನೆ. ರಾಜಕೀಯವಾಗಿ ಅದನ್ನು ನೋಡದೆ ಮತ್ತು ಅದನ್ನು ರಾಜಕೀಯಕ್ಕೆ ಉಪಯೋಗ ಮಾಡಿಕೊಳ್ಳದೆ ಇರುವುದು ಒಳ್ಳೆಯದು. ಅದಕ್ಕೆ ಸರ್ಕಾರದ ಸಹಾನುಭೂತಿ ಇದೆ, ಅವರು ಬಂದು ಮಾತನಾಡುವುದು ಮತ್ತು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡುವುದು ಒಳ್ಳೆಯದು. ಇವತ್ತಿನ ದಿವಸ, ಸರ್ಕಾರ ತನ್ನ ಅಸ್ತ್ರವನ್ನು ಮುಂದೆ ಚಾಚದೆ ದೈನ್ಯದಿಂದ ಕೇಳಿಕೊಂಡಿದೆ. ಈ ರೀತಿ ಹಿಂದೆ ಯಾವ ಸರ್ಕಾರವೂ ಮಾಡಿಲ್ಲ. ಕೈಜೋಡಿಸಿ ಬಂದು ಮಾತುಕತೆ ಆಡಿ ಎಂದು ಹಿಂದೆ ಯಾವ ಸರ್ಕಾರವೂ ಕರೆದಿಲ್ಲ. ಈ ಒಂದು ಸ್ನೇಹ ಸೂತ್ರವನ್ನು ಹಿಡಿದುಕೊಂಡು ಮಾತುಕತೆಗೆ ಬರತಕ್ಕದ್ದು ಒಳ್ಳೆಯದೆಂದು ನಾನಾದರೂ ಭಾವಿಸುತ್ತೇನೆ. ಪಂಜಾಬಿನಲ್ಲಿ ರೈಲು ಸತ್ಯಾಗ್ರಹ ಆದಾಗ ರೈಲನ್ನು ಬಂದ್ ಮಾಡಿದರು. ರಸ್ತೆ ಸತ್ಯಾಗ್ರಹ ಮಾಡುವಾಗ ಬಸ್ಸುಗಳನ್ನು ಬಂದ್ ಮಾಡಿದರು. ಇದು ಹೊಸ ತರಹದ ಸತ್ಯಾಗ್ರಹಗಳ ಬಗ್ಗೆ ಸರ್ಕಾರ ನಡೆದುಕೊಂಡಿರುವ ರೀತಿ. ಏಕೆಂದರೆ, ಕಾನೂನು ತೊಂದರೆ ಆಗಬಾರದು, ನಷ್ಟ ಆಗಬಾರದೆಂದು ಸರ್ಕಾರ ಮಾಡತಕ್ಕ ಕ್ರಮ. ಇದನ್ನು ನಿಷ್ಕ್ರಿಯತೆ ಎಂದು ಹೇಳುವುದು ಸರಿಯಲ್ಲ. ಇದು ನಿಷ್ಕ್ರಿಯತೆ ಅಲ್ಲ. ನಿಷ್ಕ್ರಿಯತೆ ಸರ್ಕಾರದ ದುರ್ಬಲತೆ ಎಂದರೆ ತಪ್ಪಾಗುತ್ತದೆ. ಈಗಲಾದರೂ ಚಳುವಳಿಗಾರರು ಸರ್ಕಾರದೊಡನೆ ಮಾತುಕತೆಗೆ ಬರುವುದು ಒಳ್ಳೆಯದೆಂದು ನಾನು ಅವರಲ್ಲಿ ವಿನಂತಿಸಿಕೊಂಡು ಇಷ್ಟು ವೇಳೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ನಾರಾಯಣ ಕುಮಾರ್ (ಬಿನ್ನಿಪೇಟೆ).—ಮಾನ್ಯ ಅಧ್ಯಕ್ಷರೆ, ಕಳೆದ ೪ ಗಂಟೆಗಳಿಂದ ಕರ್ನಾಟಕ ರಾಜ್ಯದ ರೈತರ ಸಮಸ್ಯೆಗಳ ಬಗ್ಗೆ ಚರ್ಚೆಯಾಗುತ್ತಿದೆ. ಆದರೂ ಇದನ್ನು ತೀವ್ರತರವಾಗಿ ತೆಗೆದುಕೊಳ್ಳದೆ ಹುಡುಗಾಟಿಕೆಯಿಂದ ಚೆಲ್ಲಾಟವಾಡುತ್ತಿದ್ದಾರೆ. ಸಮಸ್ಯೆ ಗಂಭೀರವಾಗಿದೆ. ಕಳೆದ ನಾಲ್ಕೂಮುಕ್ಕಾಲು ದಿನಗಳಿಂದ ಕರ್ನಾಟಕ ರಾಜ್ಯಾದ್ಯಂತ ರೈತರ ಚಳುವಳಿ ಉಗ್ರವಾಗಿ ನಡೆಯುತ್ತಿದೆ. ಸುಮಾರು ೪೦ ಸಾವಿರ ಜನರನ್ನು ಸರ್ಕಾರ ದಸ್ತಗಿರಿ ಮಾಡಿದೆ ಎಂಬುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಅಲ್ಲಿಂದ ಈಚೆಗೆ ಪೋಲೀಸ್ ವರದಿ ಕೂಡ ಬಂದಿದೆ. ಸಹಸ್ರಾರು ಸಂಖ್ಯೆಯಲ್ಲಿ ರೈತರನ್ನು ದಸ್ತಗಿರಿ ಮಾಡಿರತಕ್ಕ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳು ಒಂದು ಹೇಳಿಕೆ ನೀಡಿದ್ದಾರೆ. ಅವರು ಬಹಳ ಬುದ್ಧಿವಂತರು ಮತ್ತು ಚತುರರು. ಅವರ ಚತುರತೆಯನ್ನು ಸದನದಲ್ಲಿ ಚೆನ್ನಾಗಿ ಪ್ರದರ್ಶನ ಮಾಡಿದ್ದಾರೆ. ಮೊಟ್ಟ ಮೊದಲನೆಯದಾಗಿ ನಿಲುವಳಿ ಸೂಚನೆಯನ್ನು ಕಳುಹಿಸಿದಂತಹ ನಮಗೆ ಮಾತುಕತೆಗೆ ಅವಕಾಶ ಇರಬೇಕು, ನಂತರ ಹೇಳಿಕೆ ನೀಡಬೇಕೆಂಬುದು ಗಂಭೀರವಾದ ಮಾತು.

ಅಧ್ಯಕ್ಷರು.—ನೀವು ನಿಲುವಳಿ ಸೂಚನೆ ಕಳುಹಿಸಿಲ್ಲ.

ಶ್ರೀ ಜಿ. ನಾರಾಯಣ ಕುಮಾರ್.—ವಿರೋಧ ಪಕ್ಷದ ನಾಯಕರು ಕಳುಹಿಸಿರುವುದರಿಂದ ಅದನ್ನೇ ನಮ್ಮದು ಅಂದುಕೊಂಡಿದ್ದೇನೆ. ಆದ್ದರಿಂದ, ಕಳೆದ ನಾಲ್ಕೂ ಮುಕ್ಕಾಲು ದಿನಗಳಿಂದ ಏನು ರಾಜ್ಯಾದ್ಯಂತ ರೈತರ ಹೋರಾಟ ನಡೆದಿದೆ ಆ ಬಗ್ಗೆ ಮುಖ್ಯ ಮಂತ್ರಿಗಳು ಮಾತನಾಡಿ ಅವರ ಬೇಡಿಕೆಗಳನ್ನು ಈಡೇರಿಸುವ ಸಲುವಾಗಿ ಮಾತುಕತೆಗೆ ಕರೆದಿದ್ದೆ, ಆದರೆ ಅವರು ಬರಲಿಲ್ಲವೆಂಬ ಮಾತನ್ನು ಹೇಳಿದ್ದಾರೆ. ನಾನೂ ಕೂಡ ದೆಹಲಿಗೆ ಹೋಗುವ ಮುನ್ನ ಮಾತನಾಡಿ ರೈತರನ್ನು ಕರೆದು ಚರ್ಚೆ ಮಾಡಬೇಕು ಎಂದು ಸಲಹೆ ನೀಡಿದ್ದೆ. ೧೫ ದಿನಗಳಿಂದ ಕರೆಯುತ್ತಿದ್ದೇನೆ, ಇದುವರೆಗೆ ಯಾರೂ ಬಂದಿಲ್ಲವೆಂದು ಹೇಳಿದರು. ಕೆಲವು ಅಧಿಕೃತ ವರದಿಗಳನ್ನು ನೀಡಿದ್ದಾರೆ, ಅದರ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ಕಳೆದ ೪ ೩/೪ ದಿನಗಳಿಂದ ಕರ್ನಾಟಕ ರಾಜ್ಯಾದ್ಯಂತ ಬೃಹದಾಕಾರವಾಗಿ ಚಳುವಳಿ ಏನು ನಡೆಯುತ್ತಿದೆ ಅದರಲ್ಲಿ ಪೋಲೀಸರು ಯಶಸ್ವಿಯಾಗಿದ್ದಾರೆ. ಎಲ್ಲಿಯೂ ಗುಂಡು ಹಾರಿಸಿಲ್ಲ, ಪ್ರಾಣ ಹಾನಿ ಮಾಡಿಲ್ಲವೆಂಬುದನ್ನು ಬಿಟ್ಟರೆ ಉಳಿದುದೆಲ್ಲ ನಡೆದಿದೆ. ಲಾಠಿ ಪ್ರಹಾರ ಮಾಡಿದ್ದಾರೆ, ಟಿಯರ್ ಗ್ಯಾಸ್ ಬಿಟ್ಟಿದ್ದಾರೆ. ಬೆಂಗಳೂರಿನಲ್ಲಿರತಕ್ಕ ಬಂದೀಖಾನೆಯಲ್ಲಿ ೨೪೦ ಮಂದಿ ಖೈದಿಗಳನ್ನು ಹಾಕಲಿಕ್ಕೆ ಮಾತ್ರ ಅವಕಾಶ ಇದೆ.

ಕಾರಾಗೃಹದಲ್ಲಿ ಇರತಕ್ಕವರ ಸಂಖ್ಯೆ ಒಂದೂವರೆ ಸಾವಿರ ಇದೆ. ಕಳ್ಳರು ಕಾಕರು ಕೊಲೆಗಡುಕರು ಎಲ್ಲರನ್ನೂ ಸೇರಿಸಿ ಒಂದೂವರೆ ಸಾವಿರ ಜನರನ್ನು ಕಾರಾಗೃಹದಲ್ಲಿ ಹಾಕಿದ್ದಾರೆ. ಗುಂಡು ಹಾರಿಸುವುದಕ್ಕಿಂತ ಲಾಠಿ ಪ್ರಹಾರ ಮಾಡುವುದಕ್ಕಿಂತ ಹಿಂಸೆ ಎಂದರೆ ಕಾರಾಗೃಹದಲ್ಲಿ ಹಾಕುವುದು. ಪ್ರಾಣ ತೆಗೆಯದೇ ಬೇರೆ ರೀತಿಯಲ್ಲಿ ರೈತರಿಗೆ ಹಿಂಸೆ ಕೊಟ್ಟಿದ್ದಾರೆಂದು ಹೇಳಿದರೆ ತಪ್ಪಾಗಲಾರದು ಎಂಬ ಅಂಶವನ್ನು ನಾನು ತಮ್ಮಲ್ಲಿ ನಿವೇದಿಸಿಕೊಳ್ಳುತ್ತಿದ್ದೇನೆ ಮಾನ್ಯ ಅಧ್ಯಕ್ಷರೂ ರೈತ ಜನಾಂಗಕ್ಕೆ ಸೇರಿದವರು. ತಮಗೆ ರೈತರ ಕಷ್ಟ ಸುಖ ಗೊತ್ತಿದೆ. ಆ ಕಡೆ ಕುಳಿತಿರುವ ಜನರಿಗೂ ಕಷ್ಟಸುಖದ ಅರಿವಾಗಿರಬಹುದು ನೀವಿದ್ದಾಗ ಗುಂಡು ಹಾರಿಸಿದ್ದಿರಿ ಎಂದು ವಿರೋಧಪಕ್ಷದವರಿಗೆ ಅವರು ಹೇಳುತ್ತಿದ್ದಾರೆ ಅದು ಇರಬಹುದು ಆ ಸಂದರ್ಭಕ್ಕೆ ಅದು ಆಗಿರಬಹುದು ಯಾವ ಜನ ಗುಂಡು ಹಾರಿಸಿ ಕೊಲೆ ಮಾಡಿದರೋ ಅದಕ್ಕಿಂತ ಉತ್ತಮವಾದವರು ಜನತಾಪಕ್ಷದವರು ಎಂದು ಜನ ಚುನಾವಣೆಯಲ್ಲಿ ಅವರನ್ನು ಆರಿಸಿದರು. ಹೀಗಿರುವಾಗ ಅವರ ತರಹವೆ ನೀವೂ ಅನುಸರಿಸಬೇಕು ಎಂಬ ನಿಯಮ ಇಲ್ಲ. ಜನತಾ ಸರ್ಕಾರದವರು ನಾವು ತಪ್ಪು ಮಾಡಿದ್ದೇವೆ ಎಂದು ಸರಿಯಾಗಿ ಬಾಯಿ ತೆಗೆದು ಹೇಳುತ್ತಿಲ್ಲ. ಇದೇ ಜಾಗದಲ್ಲಿ ಅಂದರೆ ವಿರೋಧಪಕ್ಷದ ಕುರ್ಚಿಯ ಮೇಲೆ ದಿವಂಗತ ಶಾಂತವೇರಿ ಗೋಪಾಲಗೌಡರಾಗಲೀ ಅಥವಾ ಶಿವಪ್ಪನವರಾಗಲೀ ಕುಳಿತಿದ್ದಿದ್ದರೆ ಈ ಸದನವನ್ನು ನಡೆಸುವುದಕ್ಕೆ ಬಿಡುತ್ತಿರಲಿಲ್ಲ. ಸದನವೂ ನಡೆಯುತ್ತಿರಲಿಲ್ಲ. ಇವತ್ತಿನ ದಿವಸ ಕೃತಜ್ಞತಾಪೂರ್ವಕವಾಗಿ ಅವರನ್ನು ನೆನೆಯಬೇಕಾಗಿದೆ. ಶಾಂತವೇರಿ ಗೋಪಾಲಗೌಡರು ಈ ವಿರೋಧಪಕ್ಷದ ಕುರ್ಚಿಯ ಮೇಲೆ ಕುಳಿತಿದ್ದಿದ್ದರೆ ಈ ಸದನ ಅಲ್ಲೋಲಕಲ್ಲೋಲವಾಗುತ್ತಿತ್ತು. ರಾಜ್ಯಾದ್ಯಂತ ದಸ್ತಗಿರಿ ಮಾಡಿ ಈ ಆಡಳಿತ ಪಕ್ಷದವರು ಇಲ್ಲಿ ಅಲ್ಲಿ ಹೊಡೆಯುತ್ತಿದ್ದಾರೆಂದು ಹೇಳಿದರೆ ಇದಕ್ಕಿಂತ ನಾಚಿಕೆಗೇಡಿನ ಪ್ರಸಂಗ ಇನ್ನೊಂದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಲ್ಲಿದ್ದು ಬಂದಿದ್ದಾರೆ. ಇಲ್ಲಿನ ಚಳುವಳಿಗೆ ನೀವೇ ಪ್ರಚೋದನೆ ಮಾಡಿದ್ದೀರೋ ಗೊತ್ತಿಲ್ಲ. ಈ ಸರ್ಕಾರದಲ್ಲಿ ಒಡೆದು ಆಳುವ ನೀತಿ ವಿಶೇಷವಾಗಿ ಮೂಡಿಬಂದಿದೆ. ಆ ರೈತ ಸಂಘ ಕ್ರಮಬದ್ಧವಲ್ಲ, ಆ ರೈತ ಸಂಘದವರು ಮಾತನಾಡುವುದು ಬೇಡ, ಇನ್ನೊಂದು ರೈತ ಸಂಘದವರು ಬಂದರೆ ಮಾತನಾಡುತ್ತೇವೆ ಎಂದು ಹೇಳಿರಬೇಕಾದರೆ ಜನತಾ ಸರ್ಕಾರವೇ ಮತ್ತೊಂದು ರೈತ ಸಂಘವನ್ನು ನಿರ್ಮಾಣ ಮಾಡಿರಬಹುದು, ಆದ್ದರಿಂದ ಇನ್ನೊಂದು ರೈತ ಸಂಘದವರ ಜೊತೆಯಲ್ಲಿ ಮಾತನಾಡುವುದಕ್ಕೆ ತಯಾರಿಲ್ಲ ಎಂದು ಹೇಳಿರಬೇಕೇ ವಿನಹ ಬೇರೆ ನೂ ಇಲ್ಲ ಎಂದು ಹೇಳಬೇಕಾಗಿದೆ. ''ರೋಮ್ ನಗರ ಉರಿಯುತ್ತಿದ್ದರೆ ದೊರೆ ಪಿಟೀಲು ಬಾರಿಸುತ್ತಿದ್ದ'' ಎಂಬಂತೆ ಇಲ್ಲಿ ರಾಜ್ಯಾದ್ಯಂತ ರೈತ ಚಳುವಳಿ ನಡೆದು ಬೆಂಕಿ ಉರಿಯುತ್ತಿರುವಾಗ ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಲ್ಲಿ ಕೂರತಕ್ಕ ಅಗತ್ಯ ಏನಿತ್ತು, ಇದು ಆಡಳಿತದ ನೀತಿಯೇ ಎಂದು ಕೇಳಬೇಕಾಗಿದೆ. ಇದನ್ನು ನೋಡಿದರೆ ಆಡಳಿತ ನೀತಿ ಯಾವ ರೀತಿ ಹೋಗಿದೆ ಎಂಬುದನ್ನು ತಾವೆಲ್ಲರೂ ಯೊಚನೆ ಮಾಡಬಹುದು. ಇದರಲ್ಲಿ ಪರಾಪರ ಎಂಬ ಮಾತು ಇಲ್ಲ. ಹಿಂದೆಂದೂ ಇಷ್ಟೊಂದು ಜನರ ದಸ್ತಗಿರಿ ಆಗಿರಲಿಲ್ಲ. ಇವರ ಅಭಿಪ್ರಾಯದಲ್ಲಿ ನಾವು ಗುಂಡಿಟ್ಟು ಹೊಡೆಯಲಿಲ್ಲ, ಲಾಠಿ ಚಾರ್ಜ್ ಮಾಡಲಿಲ್ಲ ಎಂದು ಹೇಳುತ್ತಾರೆ. ರಾಜ್ಯದಲ್ಲಿ ಎದ್ದಿರುವ ಹಾಹಾಕಾರ ಮತ್ತು ರೀತಿನೀತಿಯನ್ನು ನೋಡಿದಾಗ ಕೋಟಿಗಟ್ಟಲೆ ಸಾಮಾನ್ಯ ಜನರಿಗೆ ತೊಂದರೆಯಾಗಿದೆ, ರಾಜ್ಯದಲ್ಲಿ ಪ್ರಜಾಪ್ರಭುತ್ವ ಇಲ್ಲ ಎಂದು ಹೇಳಬೇಕಾಗಿದೆ. ಈ ರಾಜ್ಯದಲ್ಲಿ ಜನತಾ ಸರ್ಕಾರ ಆಡಳಿತ ಮಾಡುತ್ತಿಲ್ಲ. ಈ ಸರ್ಕಾರಕ್ಕೆ ಆಡಳಿತ ಮಾಡುವುದಕ್ಕೆ ಯಾವುದೇ ನೈತಿಕ ಬಲ ಇಲ್ಲ ಎಂದು ಹೇಳುತ್ತಿದ್ದೇನೆ. ಜನತಾ ಸರ್ಕಾರದಲ್ಲಿ ನಿಷ್ಠೆ ಇದ್ದಿದ್ದರೆ ಬೆಂಗಳೂರಿನಲ್ಲಿ ಅಥವಾ ಕರ್ನಾಟಕದ ಯಾವುದೇ ಮೂಲೆಯಲ್ಲಿ ರೈತ ಮುಖಂಡರನ್ನು ಕರೆಸಿ ಮಾತುಕತೆ ಆಡಬೇಕಾಗಿತ್ತು. ದೆಹಲಿಯಲ್ಲಿ ಕುಳಿತುಕೊಳ್ಳಬೇಕಾಗಿರಲಿಲ್ಲ. ರೈತ ಮುಖಂಡರನ್ನು ಕರೆದು ಅವರ ಮನವೊಲಿಸುವ ಕಾರ್ಯವನ್ನು ಅವರು ಮಾಡಬೇಕಾಗಿತ್ತು. ಅದನ್ನು ಬಿಟ್ಟು ಈ ಚಳುವಳಿಯನ್ನು ದಮನ ಮಾಡುತ್ತೇವೆ, ನಮ್ಮಲ್ಲಿ ಶಕ್ತಿ ಇದೆ, ಪೋಲೀಸು ಇದೆ ಎಂದು ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಯಾವ ಸರ್ಕಾರವೇ ಇದ್ದರೂ ಪೊಲೀಸರು ಅವರು ಹೇಳಿದಂತೆ ಕೇಳುತ್ತಾರೆ. ಯಾವ ಸರ್ಕಾರ ಇರುತ್ತದೋ ಅವರ ಮಾತನ್ನು ಪೊಲೀಸರು ವಿಧಿ ಇಲ್ಲದೆ ಕೇಳಬೇಕು. ಕುಳಿತುಕೋ ಎಂದರೆ ಕುಳಿತುಕೊಳ್ಳಬೇಕು, ಏಳು ಎಂದರೆ ಏಳಬೇಕು. ಇವತ್ತು ರೈತರು ಸಾವಧಾನವಾಗಿರಬಹುದು. ರೈತ ಮುಖಂಡರನ್ನು ನೀವು ದಸ್ತಗಿರಿ ಮಾಡಿದ್ದೀರಿ. ನಾಳೆ ಇದು ಉಗ್ರರೂಪ ತಾಳಬಹುದು. ೩೦ ಸಹಸ್ರ ಜನರೆಂದರೆ ಇದು ಕಡಿಮೆ ಸಂಖ್ಯೆಯಲ್ಲ. ಇದು ೬೦ ಸಾವಿರ ಆಗಿ ಲಕ್ಷ ಆಗಿ ರಾಜ್ಯಾದ್ಯಂತ ಬೆಂಕಿ ಹಾಕತಕ್ಕ ಪ್ರಸಂಗ ಒದಗಿಬರಬಹುದು. ಅದಕ್ಕೆ ಅವಕಾಶವನ್ನು ಜನತಾ ಸರ್ಕಾರವೇ ಮಾಡಿಕೊಟ್ಟಿದೆ ಎಂದು ಹೇಳುತ್ತಾ ಈ ಹೊರೆ ತಮ್ಮ ಮೇಲೆ ಬೀಳುತ್ತದೆ ಎಂದು ಹೇಳುತ್ತಿದ್ದೇನೆ. ರೈತ ಸಂಘದ ಎಲ್ಲ ಬೇಡಿಕೆಗಳನ್ನೂ ಪರಿಹಾರ ಮಾಡುವುದಕ್ಕಾಗುವುದಿಲ್ಲ, ಅವರು ಕೇಳಿದಂತಹ ಬೇಡಿಕೆಗಳು ಸಲ್ಲದು ಎಂದು ಹೇಳಿದ್ದಾರೆ. ಜನತಾ ಸರ್ಕಾರದವರು ಒಡೆದು ಆಳುವ ನೀತಿಯನ್ನು ಕೈಬಿಟ್ಟು ಒಂದು ಸಾರಿ ಅಲ್ಲ ೧೦೦ ಸಾರಿಯಾದರೂ

ರೈತ ಮುಖಂಡರನ್ನು ಕರೆದು ಮಾತನಾಡಿ ಕ್ರಮ ಕೈಗೊಳ್ಳಬೇಕು. ಪ್ರಜೆಗಳಿಂದ ಮತ ಪಡೆದ ಜನತಾ ಸರ್ಕಾರ ಈ ಬಗ್ಗೆ ಸರ್ವ ಪ್ರಯತ್ನವನ್ನೂ ಮಾಡಬೇಕು. ಅದನ್ನು ಬಿಟ್ಟು ಈ ರೀತಿ ಚೆಲ್ಲಾಟ ಆಡುತ್ತಿರುವುದು ಸರಿಯಲ್ಲ. ಮುಂದೇನಾದರೂ ಇದು ಉದ್ರೇಕವಾಗಿ ಅನಾಹುತವಾದರೆ ಅದಕ್ಕೆ ಈ ಜನತಾ ಸರ್ಕಾರ ಜವಾಬ್ದಾರಿ ತೆಗೆದುಕೊಂಡು ರಾಜೀನಾಮೆ ಕೊಡಬೇಕಾಗುತ್ತದೆ ಎಂದು ಒತ್ತಾಯಪೂರ್ವಕವಾಗಿ ನಾನು ಹೇಳುತ್ತಿದ್ದೇನೆ. ಅದಕ್ಕಿಂತ ಮುನ್ನ ನೀವು ಎಚ್ಚರಿಕೆ ವಹಿಸಿ. ಜೈಲಿನಲ್ಲಿರುವ ಎಲ್ಲ ರೈತರನ್ನೂ ಬಿಡುಗಡೆ ಮಾಡಬೇಕು. ರೈತರ ಬೇಡಿಕೆಗಳೇನಿವೆ ಅದರ ಬಗ್ಗೆ ಸರ್ಕಾರದವರು ಹಠಮಾರಿತನ ಮಾಡಬಾರದು. ಸಾಮಾನ್ಯ ಪ್ರಜೆಗಳ ಮೇಲೆ ಅಧಿಕಾರಾರೂಢ ಮುಖ್ಯಮಂತ್ರಿಗಳು ಹಠ ಸಾಧಿಸಭಾರದು. ಈ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಕನ್ನಡ ಚಳುವಳಿಗಾರರ ಪರವಾಗಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಆದಷ್ಟು ಜಾಗ್ರತೆ ರೈತ ಮುಖಂಡರನ್ನು ಕರೆದು ಮಾತನಾಡಿ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಕರೆದು ಮಾತನಾಡ ದಿದ್ದರೆ ರಾಜ್ಯಾದ್ಯಂತ ದಂಗೆ ಏಳುತ್ತದೆ. ಆಗ ನಿಮ್ಮ ಸರ್ಕಾರ ಅಧಿಕಾರ ಕಳೆದುಕೊಳ್ಳುತ್ತದೆ. ನೀವು ಕಂಗಾಲಾಗುತ್ತೀರಿ. ಆದ್ದರಿಂದ ಆದಷ್ಟು ಜಾಗ್ರತೆ ಇದರ ಬಗ್ಗೆ ತೀವ್ರ ಗಮನಹರಿಸಬೇಕು ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಸೂರ್ಯನಾರಾಯಣ ರಾವ್ (ವರ್ತೂರು).—ಮಾನ್ಯ ಅಧ್ಯಕ್ಷರೆ, ನಾಲ್ಕು ದಿವಸಗಳಿಂದ ರಾಜ್ಯದಲ್ಲಿ ರೈತರ ಚಳುವಳಿ ನಡೆಯುತ್ತಿದೆ.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೆ, ನಮಗೆ ಏತಕ್ಕೆ ಅವಕಾಶ ಕೊಡುತ್ತಿಲ್ಲ? ಮಣ್ಣಿನ ಮಕ್ಕಳಿಗೆ ಅವಕಾಶವೇ ಇಲ್ಲವಲ್ಲ.

ಅಧ್ಯಕ್ಷರು.—ನಾವು ಕೆಲವು ನಿಯಮಗಳ ಮೇಲೆ ಹೋಗೋಣ. ನಿಮ್ಮ ನಾಯಕರು ಮಾತ ನಾಡಿದ್ದಾರೆ. ಈಗ ಅವರನ್ನು ಕರೆದಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ವಿಧಾನಸಭೆಯಲ್ಲಿ ರೈತರ ಸಮಸ್ಯೆಗಳನ್ನು ಬಗೆ ಹರಿಸುವ ಬಗ್ಗೆ ಏನು ನಿಲುವು ತೆಗೆದುಕೊಳ್ಳುತ್ತಾರೋ ಎಂದು ಕರ್ನಾಟಕದಲ್ಲಿ ನಾಲ್ಕು ಕೋಟಿ ಜನ ನಿರೀಕ್ಷೆ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಮಾತನಾಡುವುದನ್ನು ನಾನು ಕೇಳಿದೆ. ''೨೫ನೇ ತಾರೀಖು ಮುಖ್ಯಮಂತ್ರಿಗಳು ಪ್ರಚೋದನೆ ಮಾಡಿದ್ದರಿಂದ ಚಳುವಳಿಯಾಯಿತು. ಸರ್ಕಾರವೇ ಈ ಚಳುವಳಿಗೆ ಕಾರಣ'' ಎಂದು ಹೇಳಿದ್ದಾರೆ. ನಾನು ಪತ್ರಿಕೆಯಲ್ಲಿ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂಬುದನ್ನು ಓದಿ ನೋಡಿದೆ. ಅದರಲ್ಲಿ ಅವರು ಹೀಗೆ ಹೇಳಿದ್ದಾರೆ.

> ''He has again appealed to the farmers to postpone their Rasta Roko chaluvali to enable the Government to sort out their problems and solve them effectively to the extent possible.'' ಎಂದು,

''ರಸ್ತೆ ರೋಖೊ ಚಳುವಳಿಯನ್ನು ಮುಂದಕ್ಕೆ ಹಾಕಿ. ನಾವು ಮಾತನಾಡೋಣ. ನಮ್ಮ ಕೈಯಲ್ಲಿ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೋ ಅಷ್ಟರಮಟ್ಟಿಗೆ ಸಮಸ್ಯೆಯನ್ನು ಪರಿಹಾರ ಮಾಡೋಣ'' ಎಂದು ಹೇಳಿದ್ದರೂ, ಇಲ್ಲ ನಾವು ಮುಂದುವರೆಸುತ್ತೇವೆ, ಈ ಸರ್ಕಾರವನ್ನು ಉರುಳಿಸುತ್ತೇವೆ, ಇದು ವಚನಭ್ರಷ್ಟ ಸರ್ಕಾರ ಎಂದು ಚಳುವಳಿ ಮಾಡಿದರೆ ಇಲ್ಲಿ ರೈತರ ಬಗ್ಗೆ ಕಳಕಳಿ ಇರತಕ್ಕ ಜನ ಏನು ಮಾಡಬೇಕು ? ''ಸರ್ಕಾರ ಈ ತರಹ ಹೇಳಿದೆ. ನಾವೂ ಬೇಕಾದರೆ ನಿಮ್ಮ ಜೊತೆ ಬರು ತ್ತೇವೆ. ಮಾತುಕತೆ ಮಾಡೋಣ'' ಎಂದು ವಿರೋಧ ಪಕ್ಷದವರು ಹೇಳಿಕೆ ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಆ ರೀತಿ ಹೇಳಿಕೆ ಬರಲಿಲ್ಲ. ಈ ಚಳುವಳಿಯಿಂದ ಕಾರ್ಮಿಕರಿಗೆ ನಾಗರೀಕರಿಗೆ ರೈತರಿಗೆ, ಪ್ರಯಾಣಿಕರಿಗೆ ತೊಂದರೆಯಾಗಿದೆ. ಸರ್ಕಾರದವರು ಈ ಬೇಡಿಕೆಗಳನ್ನು ಒಪ್ಪುವುದಿಲ್ಲ, ಇದು ಅನ್ಯಾಯವಾದ ಬೇಡಿಕೆಗಳು ಎಂದು ಹೇಳಿದ್ದರೆ ಅವರು ಚಳುವಳಿಯನ್ನು ಮುಂದುವರೆಸಬೇಕಾಗಿತ್ತು. ಈ ಸಮಸ್ಯೆ ನಮ್ಮ ರಾಜ್ಯದಲ್ಲೇ ಅಲ್ಲ. ಇಡೀ ದೇಶದಲ್ಲೇ ರೆಮ್ಯುನರೇಟೀವ್ ಪ್ರೈಸ್ ಬೇಕು ಎಂದು ಚಳುವಳಿ ಮಾಡುತ್ತಿದ್ದಾರೆ. ಬಿಹಾರ, ಮಹಾರಾಷ್ಟ್ರ, ತಮಿಳುನಾಡಿನಲ್ಲಿ ಎಲ್ಲ ಕಡೆ ಈ ಬೇಡಿಕೆ ಇದೆ. ಕಾಂಗ್ರೆಸ್ ಸರ್ಕಾರಗಳು ಇರುವ ರಾಜ್ಯಗಳಲ್ಲೂ ರೆಮ್ಯುನರೇಟೀವ್ ಪ್ರೈಸಸ್ ಬಗ್ಗೆ ಚಳುವಳಿ ನಡೆದಿದೆ. ನೀವು ನಿಗದಿ ಮಾಡಿರುವ ಬೆಲೆ ಕಡಿಮೆ, ರೆಮ್ಯುನರೇಟೀವ್ ಪ್ರೈಸ್ ನಿಗದಿ ಮಾಡಬೇಕು ಎಂದು ಪಂಜಾಬಿನಲ್ಲಿ ಶ್ರೀ ಎ.ಕೆ. ಗೋಪಾಲನ್

ಅವರು ಮುಖಂಡರಾಗಿರತಕ್ಕ ಅಖಿಲ ಭಾರತ ಕಿಸಾನ್ ಸಭಾದವರು ಮತ್ತು ಸಿ.ಪಿ.ಐ. ನಾಯಕತ್ವದ ರೈತ ಸಂಘಗಳವರು ಕೇಂದ್ರವನ್ನು ಕೇಳುತ್ತಿದ್ದಾರೆ. ಅಗ್ರಿಕಲ್ಚರ್ ಕಮೀಷನ್‌ರವರು ಸರಿಯಾದ ಬೆಲೆಯನ್ನು ನಿಗದಿ ಮಾಡುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಉದಾಹರಣೆಗೆ ಕಬ್ಬಿನ ಬೆಲೆ ನಿಗದಿ ಮಾಡಲು ನಾವು ಒಂದು ಸಮಿತಿ ಮಾಡುತ್ತೇವೆ. ಕಬ್ಬಿಗೆ ೨೫೦ ರೂಪಾಯಿ ಒಂದು ಟನ್ನಿಗೆ ಬೆಲೆ ಎಂದು ನಿಗದಿ ಮಾಡುತ್ತೇವೆ.

೪-೩೦ ಪಿ.ಎಂ.

ಇವತ್ತಿನ ದಿವಸ ಸಕ್ಕರೆಯ ಬೆಲೆಯನ್ನು ನಿಗದಿ ಮಾಡುವುದು ಕೇಂದ್ರ ಸರ್ಕಾರ. ಹಾಗೂ ಸಕ್ಕರೆಯನ್ನು ಕೊಂಡುಕೊಳ್ಳುವುದು ಕೇಂದ್ರಸರ್ಕಾರ. ಆದುದರಿಂದ ಈ ಬಗ್ಗೆ ೨೫೦ ರೂಪಾಯಿ ಮಾಡಿದ್ದಾರೆಂದು ಡಿಸ್ಕಷನ್ ನಡೆದಾಗ ಅದರ ಒಂದು ಅಜಿಟೇಷನ್ ಪ್ಲಾಟ್‌ಫಾರಮ್‌ನಲ್ಲಿ ಆಗುತ್ತದೆಯೇ ವಿನಃ ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲವೆಂಬುದನ್ನು ಮಾನ್ಯ ನಂಜುಂಡಸ್ವಾಮಿಯವರು ತಿಳಿದುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ, ಈ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಅಗ್ರಿಕಲ್ಚರಲ್ ಕಮಿಷನ್ ಮಾಡೋಣ, ಅದನ್ನು ಕೇಂದ್ರ ಸರ್ಕಾರ ಒಪ್ಪದೇ ಇದ್ದರೆ ಇಡೀ ರಾಜ್ಯದ ಜನ ಚಳುವಳಿ ಮಾಡಿ ಎಂದು ಹೇಳಿದರೆ ಅದು ಪ್ರಮುಖವಾಗುತ್ತದೆ. ಇಡೀ ಕಾರ್ಮಿಕ ವರ್ಗ ಇಡೀ ದೇಶದಲ್ಲಿ ರೆಮ್ಯುನರೇಟಿವ್ ಪ್ರೈಸ್‌ಗೋಸ್ಕರ ಸ್ಟ್ರೈಕ್ ಮಾಡಿದಾಗ ಇದು ದೇಶಕ್ಕೆ ಮಾಡಿದ ದ್ರೋಹ ಎಂದು ಕೇಂದ್ರ ಸರ್ಕಾರ ಹೇಳಿದ್ದನ್ನು ನಮ್ಮ ಮಿತ್ರರು ಮರೆಯಬಾರದು. ಆಗ ನಮ್ಮ ರಾಜ್ಯದ ಜನರನ್ನೂ ಜೈಲಿಗೆ ಹಾಕಿದರು. ಅವರ ಮೇಲೆ ಹಾಕಿದ ಕೇಸ್‌ಗಳನ್ನು ಈ ಸರ್ಕಾರ ಬಂದಮೇಲೂ ತೆಗೆದುಹಾಕಿಲ್ಲ. ಅದನ್ನು ತೆಗೆದುಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ೩೦-೩೫ ವರ್ಷಗಳಾದ ಮೇಲೆ ರೈತರು ಸರಿಯಾದಂತಹ ಬೆಲೆ ಸಿಗಬೇಕೆಂದು ಹೇಳುತ್ತಿದ್ದಾರೆ. ಬಂಡವಾಳಶಾಹಿ ವರ್ಗದವರು ಕಚ್ಚಾ ಮಾಲನ್ನು ಕಡಿಮೆ ಬೆಲೆಗೆ ಕೊಳ್ಳಬೇಕೆಂದು ಹೇಳಿರುವುದರಿಂದ ಇದು ರೈತರ ಸರ್ಕಾರವಲ್ಲ ಇದು ಬಂಡವಾಳಶಾಹಿಗಳ ಸರ್ಕಾರ, ನನ್ನ ಕಬ್ಬಿಗೆ, ನಾನು ಬೆಳೆದ ಶೇಂಗಾಕ್ಕೆ ಸರಿಯಾದ ಬೆಲೆ ಸಿಗುತ್ತಾ ಇಲ್ಲ ಎಂದು ರೈತರು ಕೂಗುತ್ತಿರುವುದನ್ನು ನಾವು ಇಡೀ ದೇಶದಲ್ಲಿ ನೋಡುತ್ತಿದ್ದೇವೆ. ನಮಗೂ ಸಹಾ ರೈತರ ಬಗ್ಗೆ ಕಾಳಜಿ ಇದೆ. ಇದರಲ್ಲಿ ಒಂದೇ ಒಂದು ಬೇಸರ ಎಂದರೆ ನಮ್ಮಲ್ಲಿ ೪೦ ಲಕ್ಷ ಜನ ಕೃಷಿ ಕಾರ್ಮಿಕರು ಇದ್ದಾರೆ, ಮಾರ್ಜಿನಲ್ ಫಾರ್ಮರ್ಸ್ ಸುಮಾರು ೩೦-೪೦ ಲಕ್ಷ ಜನ ಇದ್ದಾರೆ, ಇವರೂ ಸಹಾ ಹೊಲದಲ್ಲಿ ಕೆಲಸ ಮಾಡುತ್ತಾರೆ, ಇವರು ತಮ್ಮದೇ ಜಮೀನಿನಲ್ಲಿ ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ, ಇವರಿಗೂ ಸಹಾ ಕನಿಷ್ಟ ಕೂಲಿಯನ್ನು ನಿಗದಿ ಮಾಡಬೇಕೆಂದು ಹೇಳಿ ಸರ್ಕಾರ ಮಿನಿಮಮ್ ವೇಜ್ ಅಡ್ವೈಸರಿ ಕಮಿಟಿಯನ್ನು ಮಾಡಿತು. ಇದರಲ್ಲಿ ರೈತ ಸಂಘದ ಇಬ್ಬರು ಪ್ರತಿನಿಧಿಗಳು ಇದ್ದರು. ಶಾಸಕರಾದ ಪಿ. ರಾಮಚಂದ್ರರಾವ್ ಅವರು ಹಾಗೂ ರೈತ ಸಂಘದ ನಾಯಕರಾದ ಹೆಚ್.ಎಸ್. ರುದ್ರಪ್ಪನವರು ಇದರಲ್ಲಿ ಇದ್ದರು. ಆದರೆ ಅವರು ಸಮಿತಿ ಸಭೆಗೆ ಬರಲಿಲ್ಲ. ಕೃಷಿ ಕಾರ್ಮಿಕರಿಗೆ ನಾವು ೧೦ ರೂಪಾಯಿ ಮಿನಿಮಮ್ ವೇಜನ್ನು ನಿಗದಿ ಮಾಡಿದೆವು. ಆದರೆ ರೈತಸಂಘದ ಪ್ರತಿನಿಧಿಗಳು ಇದಕ್ಕೆ ಬರಲಿಲ್ಲ. ಇವರಿಗೆ ರಾಜ್ಯದ ೭೦ ಲಕ್ಷ ಜನರ ಬಗ್ಗೆ ಕಾಳಜಿ ಇಲ್ಲವೇ ? ಬೇರೆ ಸಂಘಗಳು ಇವೆ ಎಂದು ಹೇಳಿದರು. ಕಾರ್ಮಿಕರು ಇದ್ದ ಹಾಗೆ ಅಲ್ಲಿ ರೈತರು. ರೈತರಲ್ಲಿ ಜಮೀನುದಾರರು ಇದ್ದಾರೆ, ಲ್ಯಾಂಡ್ ಲಾರ್ಡ್ಸ್ ಇದ್ದಾರೆ. ಶ್ರೀಮಂತ ರೈತರಿದ್ದಾರೆ. ಹೀಗೆ ನೋಡಿದರೆ ಒಂದೊಂದು ಪ್ರದೇಶದಲ್ಲಿ ಒಂದೊಂದು ಸಂಘಗಳು ಇವೆ. ಆದುದರಿಂದ ಈ ರೈತ ಸಂಘಗಳು ಏನಿವೆ, ಅದು ಎಂ.ಎಸ್. ಕೃಷ್ಣನ್‌ರವರ ಮುಖಂಡತ್ವದಲ್ಲಿ ಇರತಕ್ಕಂತಹ ರೈತಸಂಘ ಆಗಿರಬಹುದು, ರಾಮಚಂದ್ರರಾವ್ ಅವರ ಅಧ್ಯಕ್ಷತೆಯಲ್ಲಿ ಇರುವ ಸಂಘ ಆಗಬಹುದು, ಅಖಿಲ ಕರ್ನಾಟಕ ಮಟ್ಟದಲ್ಲಿ ಕಳೆದ ೩೦-೪೦-೫೦ ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಂತಹ ಸಂಘಗಳು ಇರಬಹುದು. ಇವುಗಳು ಏನೂ ಜನತಾ ಸರ್ಕಾರ ಬಂದ ಮೇಲೆ ಕೃಪಾಪೋಷಿತ ಸಂಘಗಳಾಗಿ ಬಂದಂತಹವುಗಳು ಅಲ್ಲ. ಇವೂ ಕೂಡಾ ಹತ್ತಾರು ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿವೆ. ಮೊನ್ನೆತಾನೇ ೨೧ನೇ ತಾರೀಖು ೨ ಸಾವಿರ ಬಡಜನರು ಬೆಂಗಳೂರು ಜಿಲ್ಲೆಯಲ್ಲಿ ಒಂದು ಸಮಾವೇಶವನ್ನು ಮಾಡಿದರು. ಅದಕ್ಕೆ ಮಾನ್ಯ ನಜೀರ್ ಸಾಬ್ ಅವರೂ ಸಹಾ ಬಂದಿದ್ದರು. ದರ್ಖಾಸ್ತು ಜಮೀನು ತಮಗೆ ಸಿಗಬೇಕೆಂದು ಕೇಳಿದರು. ಆ ಒಂದು ರೈತರು ಈ ದಿನ ಈ ಚಳುವಳಿಯಲ್ಲಿ ಇಲ್ಲ. ಕೃಷಿ ಕಾರ್ಮಿಕರು ಈ ಚಳುವಳಿಯಲ್ಲಿ ಭಾಗವಹಿಸಿಲ್ಲ. ಇವರೂ ಕೂಡಾ ತಮ್ಮ ಬೇಡಿಕೆಗಳನ್ನು ಇಟ್ಟು ಹೋರಾಟವನ್ನು ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ಶರದ್‌ಪವಾರ್‌ರವರು ಒಂದು ಮೋರ್ಚವನ್ನು ಮಾಡಿದರು. ಅವರೂ ಕೂಡಾ ರೆಮ್ಯುನರೇಟಿವ್ ಪ್ರೈಸ್ ಬೇಕೆಂದರು. ನಾವು ಕೃಷಿ ಕಾರ್ಮಿಕರ ಬಗ್ಗೆ ಮಾತನಾಡಬೇಕಾಗುತ್ತದೆ. ಅವರು ಕೂಡ

ರೈತರಲ್ಲವೇ ? ಅವರನ್ನು ಇದರಲ್ಲಿ ಏಕೆ ಸೇರಿಸಿಲ್ಲಾ ? ಅವರಿಗೆ ೧೦ ರೂಪಾಯಿ ಕೊಟ್ಟರೆ ಅವರು ಬರುವುದಿಲ್ಲ ಆದ್ದರಿಂದ ಅವರನ್ನು ಉಪಯೋಗ ಮಾಡಿಕೊಂಡು, ಅವರನ್ನು ಏಣಿ ಮಾಡಿಕೊಂಡು ನಾವು ಏರೋಣ ಎನ್ನುವ ಭಾವನೆ ಇದೆಯೇ ? ರೆಮ್ಯುನರೇಟೀವ್ ಪ್ರೈಸ್ ಬಗ್ಗೆ ರಸ್ತೆ. ರೈಲ್ ರೋಖೋ ಮಾಡುವ ಬದಲು ಕೇಂದ್ರ ಸರ್ಕಾರದ ವಿರುದ್ಧವಾಗಿ ಹೋರಾಟ ಮಾಡಬೇಕಾಗುತ್ತದೆ. ಇವತ್ತು ಯಾರು ರೈತರನ್ನು ಬಂಧನದಲ್ಲಿ ಇಟ್ಟಿದ್ದೀರಿ ಆ ರೈತರಿಗೆ ಊಟ ಕೊಡದಿದ್ದರೆ ಅದನ್ನು ಒದಗಿಸುವ ವ್ಯವಸ್ಥೆ ಮಾಡಿ. ಈ ದಿನ ಚಳುವಳಿ ಮಾಡುವುದರ ಬಗ್ಗೆ ಸರ್ಕಾರ ಬಿಗಿ ಕ್ರಮ ಕೈಗೊಂಡರೆ ಆಗ ನೀವೇ ಕೇಳುತ್ತೀರಿ, ಏನ್ರೀ ನಮಗೆ ಚಳುವಳಿ ಮಾಡುವುದಕ್ಕೆ ಅಧಿಕಾರ ಇಲ್ಲವೇ. ಚಳುವಳಿ ಮಾಡುವುದು ನಮ್ಮ ಫಂಡಮೆಂಟಲ್ ರೈಟ್ ಎನ್ನುತ್ತೀರಿ, ಏನೂ ಮಾಡದೆ ಸುಮ್ಮನೆ ಇದ್ದರೆ ನಿಷ್ಕ್ರಿಯತೆ ಎಂದೂ ಸಹಾ ನೀವೇ ಹೇಳುತ್ತೀರಿ.. ಹಿಂದೆ ರೈತರು ಬಂದ್ ಮಾಡಿದಾಗ ವಿಧಾನಸೌಧದ ಸುತ್ತಾ ಎಲ್ಲಾ ರಸ್ತೆಗಳನ್ನು ಬಂದ್ ಮಾಡಿ, ಸುತ್ತಲೂ ಬ್ಯಾರಿಕೇಡ್ ಹಾಕಿ ಸಿ.ಆರ್.ಪಿ ಯನ್ನು ಸುತ್ತಾ ನಿಲ್ಲಿಸಿದ್ದನ್ನು ನಾವು ನೋಡಿದ್ದೇವೆ. ಆದರೆ ಇವತ್ತು ಅಂತಹ ಬಂದೋಬಸ್ತು ಇಲ್ಲ. ಚಳುವಳಿಯನ್ನು ಶಾಂತಿಯುತವಾಗಿ ಮಾಡಲಾಗುತ್ತಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಪಂಜಾಬ್‌ನಲ್ಲಿ ರೈಲನ್ನೇ ನಿಲ್ಲಿಸಿದರು.

ಶ್ರೀ ಎಂ. ಸೂರ್ಯನಾರಾಯಣರಾವ್.—ಇವತ್ತು ಏನು ಮಾಡಿದ್ದೀರಿ ? ಸಾರ್ವಜನಿಕರಿಗೆ ತೊಂದರೆ ಆಗಬಾರದು ಎಂದು ಹೇಳಿ, ನಾಗರೀಕರಿಗೆ ತೊಂದರೆ ಆಗಬಾರದು ಎಂದು ಹೇಳಿ ಪರಿಸ್ಥಿತಿ ಯನ್ನು ಇಷ್ಟಕ್ಕೆ ತಂದಿದ್ದೀರಿ. ತಾವುಗಳು ಬಂದು ಸರ್ಕಾರದ ಜೊತೆ ಮಾತುಕತೆ ನಡೆಸುವುದಕ್ಕೆ ನಾವೂ ಕೂಡ ಬೆಂಬಲವನ್ನು ಕೊಡುತ್ತೇವೆ. ಮಾತುಕತೆಯಾದ ನಂತರ ಕೇಂದ್ರ ಸರ್ಕಾರ ಏನೇನು ಸವಲತ್ತುಗಳನ್ನು ಒದಗಿಸಬೇಕೋ ಅದನ್ನು ಒದಗಿಸಿಕೊಡಬೇಕೆಂದು ನಾವು ಏಕೆ ಯುನಾನಿಮಸ್ ರೆಸಲ್ಯೂಷನ್ ಮಾಡಬಾರದು ? ಇದರಲ್ಲಿ ಏಕೆ ನಾವು ರಾಜಕೀಯ ಮಾಡಬೇಕು. ಒಟ್ಟಿನಲ್ಲಿ ಈ ಚಳುವಳಿ ನಿಲ್ಲಬೇಕು. ಇದರಿಂದ ರೈತರಿಗೆ, ನಾಗರೀಕರಿಗೆ ಬಹಳ ತೊಂದರೆಯಾಗುತ್ತಿದೆ. ಆದಷ್ಟು ರೈತರು ಇವತ್ತು ತಮ್ಮ ತಮ್ಮ ಮನೆಗಳಿಗೆ ತೆರಳಬೇಕಾಗಿದೆ. ಇದರಲ್ಲಿ ಯಾರದು ಸರಿ, ಯಾರದ್ದು ತಪ್ಪು ಎನ್ನುವ ಪ್ರಶ್ನೆ ಅಲ್ಲ. ಈ ಸಮಸ್ಯೆ ಬಗ್ಗೆ ಹರಿಯುವುದರಲ್ಲಿ ನಿಮ್ಮದೂ ಜವಾಬ್ದಾರಿ ಇದೆ. ಈಗಲೂ ಸಹಾ ಮುಖ್ಯಮಂತ್ರಿಗಳು ಕೈಜೋಡಿಸಿ ಕರೆದಿದ್ದಾರೆ. ಏನಾದರೂ ಮಾಡಿ ಇದಕ್ಕೆ ರಾಜಕೀಯ ಬಣ್ಣವನ್ನು ಕಟ್ಟಿ ತನ್ನದೇ ಆದ ಪ್ರತಿಷ್ಟೆಯನ್ನು ಜಾಸ್ತಿ ಮಾಡಿಕೊಳ್ಳಬೇಕೆಂದು ಪ್ರೊಫೆಸರ್ ನಂಜುಂಡಸ್ವಾಮಿಯವರು ತಿಳಿದುಕೊಂಡಿದ್ದಾರೆಯೇ ? ಈ ಬಗ್ಗೆ ಸರ್ಕಾರ ಏನು ಮಾಡಬೇಕಾಗುತ್ತದೆ ? ಚಳುವಳಿಯನ್ನು ಮಾಡಬೇಡಿ ಎಂದು ಸರ್ಕಾರ ಕೇಳಿಕೊಳ್ಳುತ್ತದೆ. ಇಲ್ಲಾ ಮಾಡಲೇ ಬೇಕು ಬಂದರೆ, ಶಾಂತಿಯುತವಾಗಿ ಮಾಡಿ ಎಂದು ಹೇಳುತ್ತದೆ. ಇವತ್ತು ರಸ್ತೆ ತಡೆಯೊಡ್ಡಿದವರನ್ನು ಬಂಧಿಸಿ ಅವರಿಗೆ ಊಟ ಹಾಕಲಾಗುತ್ತಿದೆ. ಅವರಿಗೆ ಊಟದ ಜೊತೆ ಮೈಸೂರು ಪಾಕ್ ಕೊಡಿ ನಾನು ಬೇಡ ಎನ್ನುವುದಿಲ್ಲ. ಆದರೆ ಅವರಿಗೆ ಕಿರುಕುಳ ಕೊಡುವುದಕ್ಕೆ ಹೋಗಬೇಡಿ ಎಂದು ನಾನು ಹೇಳುತ್ತೇನೆ. ಮುಖ್ಯಮಂತ್ರಿಗಳು ಸಮಾಲೋಚನೆಗೆ ಕರೆದಿರುವುದ ರಿಂದ ವಿರೋಧ ಪಕ್ಷದವರೂ ಸಹಾ ಅವರಿಗೆ ಅಪೀಲ್ ಮಾಡಬೇಕೆಂದು ಹೇಳುತ್ತೇನೆ. ಇನ್ನು ಮಾತುಕತೆಗೆ ಕರೆಯುವಾಗ ಎಲ್ಲ ರೈತಸಂಘದವರನ್ನೂ ಇದಕ್ಕೆ ಆಹ್ವಾನಿಸಬೇಕೆಂದು ನಾನು ಸಲಹೆ ಮಾಡಿ, ರೈತ ಸಂಘದವರು ಮಾತುಕತೆಗೆ ಒಗೊಟ್ಟು ಬಂದು ಚರ್ಚೆ ನಡೆಸಿ ನಿರ್ಧಾರ ಕೈಗೊಳ್ಳ ಬೇಕೆಂದು ಹೇಳಿ, ಹಾಗೂ ರೈತರ ಒಂದು ಧೋರಣೆಗೆ ನ್ಯಾಯ ದೊರಕಲಿ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಡಾ|| ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ರೈತರು ನ್ಯಾಯಯುತವಾದ ಬೇಡಿಕೆಗಳ ಬಗ್ಗೆ ಒತ್ತಾಯ ಮಾಡಿ ಸತ್ಯಾಗ್ರಹ ಮಾಡುತ್ತಿರುವುದರ ಬಗ್ಗೆ ಸದನದಲ್ಲಿ ಸುಮಾರು ನಾಲ್ಕೂವರೆ ಗಂಟೆ ಚರ್ಚೆಯಾಗಿ ಅನೇಕ ವಿಷಯಗಳು ಪ್ರಸ್ತಾಪ ಗೊಂಡಿವೆ. ಸಭಾನಾಯಕರು ಈ ಬಗ್ಗೆ ತಮ್ಮ ಹೇಳಿಕೆಯನ್ನು ಕೊಟ್ಟ ನಂತರ ವಿರೋಧಪಕ್ಷದ ಪ್ರಮುಖರು ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಸಣ್ಣ ರೈತರು, ಮಧ್ಯಮ ವರ್ಗದ ರೈತರು, ಕೃಷಿ ಕಾರ್ಮಿಕರು ಶೋಷಣೆಗೆ ಒಳಗಾಗಿದ್ದಾರೆ. ಅವರ ಬೆವರಿಗೆ ತಕ್ಕ ಫಲ ಅವರಿಗೆ ಸಿಗುತ್ತಾ ಇಲ್ಲ. ಆದರೆ ಒಂದು ಸಂತೋಷದ ಸಂಗತಿಯೆಂದರೆ, ಸದನದ ಎಲ್ಲಾ ಸದಸ್ಯರೂ ರೈತರ ಬಗ್ಗೆ ಸದ್ಭಾವನೆಯನ್ನು ವ್ಯಕ್ತಮಾಡಿದ್ದಾರೆ. ಈ ಅಶಕ್ತರ ಬಗ್ಗೆ ಸದನದ ಎಲ್ಲಾ ಸದಸ್ಯರೂ ಒಮ್ಮತದ ಅಭಿಪ್ರಾಯವನ್ನು ಇಟ್ಟಿದಾರೆ. ಕಳೆದ ೪ ದಿವಸಗಳಿಂದ ಸತ್ಯಾಗ್ರಹ ಶಾಂತಿಯುತವಾಗಿ ನಡೆದಿದೆ. ಆದರೂ ಸಹಾ ನಾವು ವಿಷಯವನ್ನು ಗಂಭೀರವಾಗಿ ಯೋಚನೆ ಮಾಡಬೇಕು. ಈ

ಒಂದು ರಸ್ತೆ ಹಾಗೂ ರೈಲು ತಡೆ ಸತ್ಯಾಗ್ರಹದಲ್ಲಿ ಸುಮಾರು ೨೬ ಸಾವಿರ ಜನ ಬಂಧನಕ್ಕೊಳಗಾಗಿದ್ದಾರೆ. ಅವರು ಮನೆ ಮಕ್ಕಳನ್ನು, ಕುಟುಂಬದವರನ್ನು ಬಿಟ್ಟು ದೂರವಾಗಿದ್ದಾರೆ. ಇವತ್ತು ಒಬ್ಬರು ಸಂಪಾದನೆ ಮಾಡಿ ತನ್ನ ಕುಟುಂಬವನ್ನು ಸಾಕತಕ್ಕವನು ಕೆಲಸವಿಲ್ಲದೇ ಬಂಧನದಲ್ಲಿದ್ದಾನೆ. ಈ ದಿನ ಆತ ತನ್ನ ಊರಿಗೆ ಹೋಗಿ ಜೀವನದ ದಾರಿ ನೋಡಬೇಕಾಗಿದೆ. ಇದು ಒಂದಾದರೆ, ಇನ್ನೊಂದು ಕಡೆ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ. ಹಣ್ಣು ಹಂಪಲು, ತರಕಾರಿಗಳ ಸರಬರಾಜು ನಿಂತಿದೆ. ಇದರಿಂದಾಗಿ ದೊಡ್ಡ ರೀತಿಯ ಅಸ್ತವ್ಯಸ್ತವಾಗಿದೆ. ಬಹುಶಃ ಹೊಸ ಸರ್ಕಾರ ಬಂದ ನಂತರ ಇಷ್ಟು ದೊಡ್ಡ ರೀತಿಯಲ್ಲಿ ಅಸ್ತವ್ಯಸ್ತ ವಾತಾವರಣ ಎಂದೂ ಮೂಡಿರಲಿಲ್ಲ. ಇಂತಹ ಸಂದರ್ಭ ಇರುವಾಗ ಸರ್ಕಾರ ಪದೇ ಪದೇ ರೈತರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ರೈತರಿಗೆ ರೆಮ್ಯುನರೇಟಿವ್ ಪ್ರೈಸಸ್ ಕೊಡುವ ಬಗ್ಗೆ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕೆಂದರೆ ಅವರಿಗೆ ಉತ್ತೇಜಕ ಬೆಲೆ ಸಿಗಬೇಕೆಂಬುದರ ಬಗ್ಗೆ ಹೋರಾಟ ಮಾಡಬೇಕಾಗಿದೆ. ಈ ಮುಕ್ತ ಮಾರುಕಟ್ಟೆಯಲ್ಲಿ ಬೆಂಬಲ ಬೆಲೆ ಕೊಟ್ಟು ಕೊಳ್ಳತಕ್ಕದ್ದರ ಬಗ್ಗೆ ವ್ಯಾವಹಾರಿಕವಾಗಿ ಕುಳಿತು ಮಾತನಾಡಬೇಕು. ತಮ್ಮ ಸರ್ಕಾರದಿಂದ ಆ ಕೆಲಸ ಮಾಡುವುದಕ್ಕೆ ಆಗದೇ ಇದ್ದರೆ ಈ ವಿಷಯವನ್ನು ರಾಷ್ಟ್ರಮಟ್ಟದಲ್ಲಿ ತೆಗೆದುಕೊಂಡು ಅದರ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುವುದು ಒಳ್ಳೆಯದು. ಅದರ ಬಗ್ಗೆ ಯಾರಿಗೆ ಸಜೆಸ್ಟ್ ಮಾಡಬೇಕೋ ಮಾಡಬಹುದು. ಅದರ ಬಗ್ಗೆ ಯೋಚನೆ ಮಾಡದೇ ಇದ್ದುದರಿಂದ ಈ ಪರಿಸ್ಥಿತಿ ಬಂದಿದೆ. ನಮ್ಮ ರಾಜ್ಯದಲ್ಲಿ ಪ್ರಪ್ರಥಮವಾಗಿ ರೈತರಿಗೆ ಕೊಡುಗೆ ಕೊಡುವ ರೀತಿಯಲ್ಲಿ ವರ್ತನೆ ಮಾಡಿದ್ದಾರೆ. ಇದು ಈಗ ಬಂದಿರತಕ್ಕ ದುರ್ದೈವ ಸಂಗತಿ, ಆದ್ದರಿಂದ ಸರ್ಕಾರ ತಮ್ಮ ಧೋರಣೆಯನ್ನು ಇನ್ನೊಮ್ಮೆ ರೈತರಿಗೆ ತಿಳಿಸಬೇಕಾಗುತ್ತದೆ. ರೈತರು ಸ್ವಪ್ರತಿಷ್ಠೆಗೆ ಅಂಟುಕೊಂಡಿದ್ದಾರೆಂದು ಭಾವನೆ ಇದ್ದರೆ ಅದು ನಿವಾರಣೆ ಮಾಡಬೇಕು. ರಾಜ್ಯದ ಕೆಲವು ಕಡೆಗಳಲ್ಲಿ ರೈತರು ಸ್ವಲ್ಪ ಆಸೆಯನ್ನು ಇಟ್ಟುಕೊಂಡಿದ್ದಾರೆ. ಒಂದು ಮಾತನ್ನು ತಾವು ಹೇಳಿರುವ ಬಗ್ಗೆ ಮೆಚ್ಚಿಕೊಳ್ಳಬೇಕಾಗುತ್ತದೆ. ಆಕಾಶದತ್ತ ಮುಖವನ್ನು ಮಾಡಿಕೊಂಡು ಅನಂತರ ಬೀಜ ಹಾಕಬಹುದು ಎಂದು ಸಾಕಷ್ಟು ಜನರು ರೈತರು ಕಾದುಕೊಂಡಿದ್ದಾರೆ. ನೀವು ಸಹ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯವರಿಗೆ ನೀರಾವರಿಗೆ ಬೇಕಾದಂತಹ ಸೌಲಭ್ಯಗಳನ್ನು ಮಾಡಲಿಲ್ಲ. ಆದರೂ ಅಂಥ ಜಿಲ್ಲೆಗಳಲ್ಲಿ ಯಾವ ಸತ್ಯಾಗ್ರಹ ನಡೆಯಲಿಲ್ಲ. ಮುಂದಿನ ವರ್ಷದಲ್ಲಿ ಸಣ್ಣ ನೀರಾವರಿಗೆ ಅನುಕೂಲ ಮಾಡಿಕೊಡಬಹುದು ಎಂದು ತಿಳಿದಿದ್ದೇನೆ. ನೆನ್ನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರೆಲ್ಲಾ ಸೇರಿ, ಸತ್ಯಾಗ್ರಹದ ಮೂಲ ಉದ್ದೇಶದ ಬಗ್ಗೆ ಸಹಾನುಭೂತಿ ತೋರಿಸಿ, ಮಾತುಕತೆ ಆಗುವ ವೇಳೆಯಲ್ಲಿ ಭಾರತೀಯ ರೈತ ಸಂಘ, ಯುವಕ ರೈತ ಸಂಘ ಏನು ಇದೆ ಅವರನ್ನು ಕರೆಸಬೇಕೆಂದು ಹೇಳಿದ್ದಾರೆ. ಇವೊತ್ತು ಜನತಾ ಸರ್ಕಾರ ಆಡಳಿತ ಪಕ್ಷದಲ್ಲಿದ್ದು ಸರ್ಕಾರವನ್ನು ತಮ್ಮ ಮಿತ್ರ ಪಕ್ಷಗಳ ಸಹಕಾರವನ್ನು ಪಡೆದುಕೊಂಡು ನಡೆಸುತ್ತಿದೆ. ಈ ರೀತಿ ವ್ಯಾವಹಾರಿಕವಾಗಿ ವಿಚಾರಗಳು ಬಂದಾಗ ಸರ್ಕಾರಕ್ಕೆ ಬೆಂಬಲ ಕೊಡತಕ್ಕ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಹಾಗೂ ವಿರೋಧ ಪಕ್ಷದವರನ್ನು ಸೇರಿಸಿಕೊಂಡು, ಅಂದರೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮಾತುಕತೆಗೆ ಕರೆಯತಕ್ಕ ವಾತಾವರಣ ಬರಬೇಕು. ಈಗಾಗಲೇ ನಾಲ್ಕು ದಿವಸಗಳು ಆಗಿವೆ. ಸಾರಿಗೆ ಸಂಪರ್ಕ ಅಸ್ತವ್ಯಸ್ತವಾಗಿದೆ. ಸತ್ಯಾಗ್ರಹ ನಡೆಯುವ ಸಂದರ್ಭದಲ್ಲಿ ಬಸ್ಸುಗಳನ್ನು ಓಡಿಸಿ ಘರ್ಷಣೆಯಾಗುವಂತಾದ್ದು ಬೇಡ ಎಂದು ನಿಲ್ಲಿಸಿ ಇಟ್ಟುಕೊಂಡಿದ್ದರೆ ಕಷ್ಟ. ಪ್ರತಿಯೊಂದಕ್ಕೂ ಒಂದು ಮಿತಿ ಇರುತ್ತದೆ. ರಾಜ್ಯದ ಹೆದ್ದಾರಿಗಳಲ್ಲಿ ಸಾರಿಗೆ ಸಂಪರ್ಕಕ್ಕೆ ಮುಕ್ತವಾಗಿ ಇರುವ ಹಾಗೆ ಮಾಡುವಂತಾದ್ದು ತಮ್ಮ ಜವಾಬ್ದಾರಿ ಇದೆ. ಅದರ ಬಗ್ಗೆ ಸರ್ಕಾರ ಖಂಡಿತ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ರೈತರ ಸಮಸ್ಯೆಗಳು ಏನಿವೆ ಇವು ಒಂದೇ ದಿವಸದಲ್ಲಿ ಉದ್ಭವವಾದಂಥ ಸಮಸ್ಯೆಗಳಲ್ಲ. ಹಿಂದೆ ಯಾವ ರೀತಿ ಟ್ರೀಟ್‌ಮೆಂಟ್ ಮಾಡಿದ್ದಾರೆ ಅದನ್ನು ಹೇಳಿದರೆ ಬಗೆಹರಿಸಲಿಕ್ಕೆ ಸಾಧ್ಯವಿಲ್ಲ. ಒಟ್ಟಿಗೆ ಹೇಳುವುದಾದರೆ ಸಹಾನುಭೂತಿ ಧೋರಣೆ ಇರಬೇಕು. ಅನಿವಾರ್ಯವಾಗಿ ಬಂಧಿತರಾದವರು ಏನಿದ್ದಾರೆ ಅವರನ್ನು ಒಳ್ಳೆಯ ರೀತಿಯಿಂದ ನೋಡಿಕೊಳ್ಳುವ ಕೆಲಸವಾಗಬೇಕು. ಅದು ಎಷ್ಟು ಕಠಿಣ ಎನ್ನುವುದು ಗೊತ್ತಿದೆ. ತುರ್ತು ಪರಿಸ್ಥಿತಿ ಸಮಯದಲ್ಲಿ ಒಂದೊಂದು ದಿವಸ ೪೦–೫೦ ಜನರು ಬಂಧನ ಆದಂಥ ಸಮಯದಲ್ಲಿ ಜೈಲುಗಳಲ್ಲಿ ಜಾಗ ಇಲ್ಲದೆ, ಬಳ್ಳಾರಿ ಜೈಲಿಗೆ ಕಳುಹಿಸಬೇಕಾದಂಥ ಸಮಯದಲ್ಲಿ ಸುಮಾರು ೧೨ ಗಂಟೆಗಳ ಮೇಲೆ ಟೀ ಕೊಡುವಂಥ ವ್ಯವಸ್ಥೆ ಆಯಿತು. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಸತ್ಯಾಗ್ರಹದಲ್ಲಿದ್ದವರತಕ್ಕ ರೈತರು ೪ ಗಂಟೆಗಳ ಕಾಲ ಕಾಯಬೇಕಾಯಿತು ಎಂದು ಹೇಳಿದರು. ಬಹುಶಃ ಅನ್ನ, ನೀರು ಜೊತೆ ಮಾಡಿಟ್ಟರೆ ನಮಗೆ ಅನ್ನ ಆಗಬೇಕೆಂದರೆ ಸುಮಾರು ಮೂರು ಗಂಟೆಗಳ ಕಾಲ ಬೇಕಾಗುತ್ತದೆ. ಅಷ್ಟು ಕಾಲ ಕಾಯುವಂತಾದ್ದು ಅನಿವಾರ್ಯದಿಂದ ಆಗಿರಬಹುದು.

ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ, ರೈತರ ಬಗ್ಗೆ ಹೇಳುತ್ತಾ, ತಮ್ಮ ಎಲೆಕ್ಷನ್ ಮ್ಯಾನಿಫೆಸ್ಟೋ ಸಂಗತಿಯನ್ನು ಓದಿ ಹೇಳಿದರು. ಚುನಾವಣೆಯ ಪೂರ್ವದಲ್ಲಿ ಎಷ್ಟು ಪೂರೈಸುತ್ತೇವೆಂದು ಸರಿಯಾದ ತಿಳುವಳಿಕೆ ಕೊಡದೇ ಇರಬಹುದು, ಆದರೆ ಬಹಳಷ್ಟು ನಿರೀಕ್ಷೆ ಹುಟ್ಟಿಸಿದ್ದೀರಿ. ಆದ್ದರಿಂದ, ಸರ್ಕಾರ ಅವರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಬೇಕು. ಎಲ್ಲಾ ರೈತಸಂಘ ಹಾಗೂ ಎಲ್ಲಾ ರಾಜಕೀಯ ಶಕ್ತಿಗಳ ಬೆಂಬಲದಿಂದ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಯಾವಗಲ್ (ನರಗುಂದ).—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ನಡೆಯುತ್ತಿರುವ ಚಳುವಳಿಯ ಬಗ್ಗೆ ಇವೊತ್ತು ಹಲವಾರು ರೀತಿಯ ವಿಶ್ಲೇಷಣೆಗಳು ಬಂದವು. ರೈತರ ಬೇಡಿಕೆಗಳ ಬಗ್ಗೆ, ರೈತರ ತೊಂದರೆಗಳ ಬಗ್ಗೆ, ಅವರ ಪರಿಸ್ಥಿತಿಯ ಬಗ್ಗೆ ಸರ್ಕಾರ ನಡೆಸುತ್ತಿರುವ ಮಂತ್ರಿ ಮಂಡಲಕ್ಕೆ ಕಳಕಳಿ ಇದೆ, ಅದರ ಬಗ್ಗೆ ಬೇರೆ ವಿಚಾರ ಇಲ್ಲ. ಇನ್ನೂ ಆಳವಾಗಿ ಹೋಗಿ ಹೇಳಬೇಕೆಂದರೆ, ಪ್ರಸಕ್ತ ರೈತ ಸಂಘ ಸರ್ಕಾರದ ಮುಂದಿಟ್ಟಿರುವ ೧೯ ಬೇಡಿಕೆಗಳು ಒಕ್ಕಣಿಕೆಯಾಗಿ ತಯಾರಾಗುವಾಗ ಅದರಲ್ಲಿ ನಾನು ಪಾಲ್ಗೊಂಡಿದ್ದೇನೆ. ಮೊಟ್ಟ ಮೊದಲನೆಯ ಬೇಡಿಕೆ ನರಗುಂದ, ನವಲಗುಂದ ರೈತರ ಚಳುವಳಿಯಲ್ಲಿ ಬಂಧಿತರಾದಂಥ ರೈತರನ್ನು ಬಿಡುಗಡೆ ಮಾಡುವುದು, ಅವರುಗಳ ಮೇಲೆ ಹಾಕಿದ್ದಂಥ ಕೇಸುಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದು. ಮಾನ್ಯ ಅಧ್ಯಕ್ಷರೆ, ಈ ಹಿನ್ನೆಲೆಯನ್ನು ಸ್ವಲ್ಪ ಪ್ರಸ್ತಾಪ ಮಾಡಬಯಸುತ್ತೇನೆ. ಈ ಎಲ್ಲಾ ಚಳುವಳಿಗೆ ನಾಂದಿಯಾಗಿ ಪ್ರಾರಂಭವಾದಂಥ ಹೋರಾಟ ಅಂದರೆ ರಗುಂದದ ಹೋರಾಟ. ಅದು ಒಂದು ವಿಶಿಷ್ಟವಾಗಿ ಇತ್ತು. ಆ ಒಂದು ಪ್ರದೇಶದ ಸಮಿತಿಗೆ ಮಲಪ್ರಭ ಸಮನ್ವಯ ಸಮಿತಿ ಎಂದು ಕರೆದಿದ್ದರು. ಅದರಲ್ಲಿ ಹಲವಾರು ರಾಜಕೀಯ ಪಕ್ಷಗಳಿಗೆ ಸಂಬಂಧಪಟ್ಟವರು, ಎಲ್ಲಾ ಧೋರಣೆಯನ್ನು ಹೊಂದಿದವರು, ಮತ್ತು ಒಟ್ಟಾರೆ ಅವರ ಉದ್ದೇಶ, ಗುರಿ, ಈ ದೇಶದ, ರಾಜ್ಯದ ರೈತರಿಗೆ ಒಳ್ಳೆಯದಾಗಲಿ, ಆ ಒಂದು ಪ್ರದೇಶದ ವಿಶಿಷ್ಟ ಸಮಸ್ಯೆಗಳನ್ನು ಬಗೆಹರಿಸಲು ಆಗಿದ್ದಂಥ ಒಂದು ಸಂಘಟನೆ. ಅದು ಈ ದಿವಸ ಕರ್ನಾಟಕ ರೈತ ಸಂಘದ ಹಿರಿಮೆಯಲ್ಲ. ನರಗುಂದದಲ್ಲಿ ಹುಟ್ಟು ಹಾಕಿದಂಥ ಸಂಘಟನೆಯ ಬಗ್ಗೆ, ತಾತ್ಸಾರದಿಂದ ತಮ್ಮ ವೈಯಕ್ತಿಕ ಪ್ರತಿಷ್ಠೆಯ ಸಲುವಾಗಿ ಅಳಿಸಿ ಹಾಕಿದಂಥ ಮಹಾತ್ಮರು ಇದ್ದಾರೆ. ನರಗುಂದದಲ್ಲಿ ಹುಟ್ಟು ಹಾಕಿದಂಥ ಸಂಘಟನೆಯ ಬಗ್ಗೆ, ಅಧ್ಯಕ್ಷರು ಪಾಲ್ಗೊಂಡಿದ್ದು, ಅತ್ಯಂತ ಹಿರಿಯ ಧುರೀಣರಾಗಿದ್ದು, ಅವರ ಬೆಂಬಲ ಕೂಡ ಅದಕ್ಕೆ ಇತ್ತು ಎನ್ನುವುದು ಕಂಡು ಬಂದಿತ್ತು. ಈ ಸಂದರ್ಭದಲ್ಲಿ ಈ ಸದನದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ, ಅದನ್ನು ಪ್ರಸ್ತಾಪ ಮಾಡಬಹುದೋ ಅಥವಾ ಮಾಡಬಾರದೋ ಗೊತ್ತಿಲ್ಲ. ಪ್ರೊಫೆಸರ್ ನಂಜುಂಡಸ್ವಾಮಿ ಮತ್ತು ಮಾನ್ಯ ಸುಂದರೇಶ್, ಚಳುವಳಿಯ ನಂತರ ಬಂದಾಗ ಈ ಸಂಘಟನೆ ರಾಜ್ಯ ವ್ಯಾಪ್ತಿಯಾಗಿ, ಬೃಹದಾಕಾರವಾಗಿ ಬೆಳೆಯಲಿ ಎಂದು ತಿಳಿದುಕೊಂಡು ಕ್ರಮ ಕೈಗೊಳ್ಳಲಾಯಿತು. ರಾಜ್ಯ ಸಮನ್ವಯ ಸಮಿತಿಯನ್ನು ಹುಟ್ಟು ಹಾಕಿಕೊಂಡು, ಆ ಒಂದು ಪ್ರದೇಶದಲ್ಲಿ ಚಳುವಳಿಯನ್ನು ನಡೆಸಿಕೊಂಡು ಬಂದಿರುವಾಗ, ಯಾವ ರೈತರಿಗೆ ತೊಂದರೆಯಾಗಿದೆ, ಯಾವ ರೈತರು ಸೆರೆಯಲ್ಲಿದ್ದಾರೆ, ಆ ರೈತರನ್ನೆಲ್ಲಾ ಒಂದು ರೀತಿಯಿಂದ ಬಿಡುಗಡೆ ಮಾಡಬೇಕೆಂದು ಇರುವಾಗ ಏಕಾಏಕಿಯಾಗಿ ಆ ಪ್ರದೇಶದ ರೈತರನ್ನು ಬಲಿಕೊಟ್ಟು, ಒಂದು ಸಂಧಾನ ಮಾರ್ಗವಾಗಿ ಮಾಡಿಕೊಂಡು ತಮ್ಮ ಸ್ವಾರ್ಥಕ್ಕಾಗಿ ಚಳುವಳಿ ಮಾಡಬೇಕೆಂಬ ಉದ್ದೇಶದಿಂದ ಸಂಧಾನ ನಡೆಯುತ್ತಿತ್ತು. ಆ ರೀತಿಯಾಗಿ ಶಿವಮೊಗ್ಗದ ಸಭೆಯಲ್ಲಿ ತೀರ್ಮಾನವಾದಾಗ ಏಕಾಏಕಿ ಮುಂದೆ ಹಾಕಿದರು. ಮಾನ್ಯ ಬೊಮ್ಮಾಯಿಯವರು ಕೇಳಿದರೆ ನಾವು ಬಿಡುವವರಲ್ಲ ಎಂದು ಮೊಸಳೆ ಕಣ್ಣೀರು ಸುರಿಸಿದಂಥ ವ್ಯಕ್ತಿಗಳು, ಒಂದು ಸಂಘಟನೆ ಇಲ್ಲದ ವ್ಯಕ್ತಿಗಳ ಹೆಸರಿನಲ್ಲಿ ನಡೆಯುತ್ತಾ ಬಂದಾಗ ರಾಜಕೀಯ ಮಾಡಿ ಕೊನೆಗೆ ರಾಜಕೀಯ ಸಂಬಂಧವಿಲ್ಲ ಎಂದು ಹೇಳಿದಾಗ ಮಲಪ್ರಭಾ ಸಮನ್ವಯ ಸಮಿತಿ ರಾಜ್ಯ ರೈತ ಸಮನ್ವಯ ಸಮಿತಿಯಿಂದ ಹೊರಬಿತ್ತು. ಈ ರಾಜ್ಯದ ರೈತ ಸಮುದಾಯ ಆ ಜಾಥಾದಲ್ಲಿ ಭಾಗವಹಿಸಲು ಬೆಂಗಳೂರಿಗೆ ಬಂದಿದ್ದಿತು. ಅನಂತರ ಇವರು ಬಾಡಿಗೆ ರೈತರು ಎಂದು ಕರೆಸಿಕೊಂಡಿದ್ದೂ ಆಯಿತು. ಅವರಲ್ಲಿ ಬಹಳಷ್ಟು ಜನರನ್ನು ಆಗಿನ ಸರ್ಕಾರದವರು ಬಂಧನಕ್ಕೆ ಒಳಗುಮಾಡಿ ನಂತರ ಅವರನ್ನು ಬಿಡುಗಡೆ ಮಾಡಿದ್ದೂ ಆಯಿತು. ಅನಂತರ ರಾಜ್ಯದಲ್ಲಿ ಶಾಂತ ವಾತಾವರಣ ನಿರ್ಮಾಣವಾಯಿತು. ಅವರು ರೈತರ ಜಾಥಾಕ್ಕೆ ಬಹಳ ಜನ ರೈತರು ಸಹಕಾರವನ್ನು ಕೊಡುವುದು ಬೇಡವೆಂದು ಹೇಳಿದವರೂ ಕೂಡ ಯಾರನ್ನೂ ಕೇಳದೆ ಅವತ್ತಿನ ರೈತರ ಜಾಥಾಕ್ಕೆ ಸಹಕಾರವನ್ನು ಕೊಟ್ಟರು. ಇದರ ಬಗ್ಗೆ ಹಲವಾರು ಸಾರಿ ಟೀಕೆ ಮಾಡಲಾಗಿತ್ತು. ಇವರು ಕೇವಲ ಯಾವುದೋ ಒಂದು ಸಂಧಾನಕ್ಕೋಸ್ಕರ ಬೆಂಗಳೂರಿಗೆ ಹೋಗುತ್ತಿದ್ದಾರೆ, ಚಹಾ, ಉಪ್ಪಿಟ್ಟಿಗೋಸ್ಕರ ಹೋಗುತ್ತಿದ್ದಾರೆಂದು ಹೇಳಲಾಗುತ್ತಿತ್ತು. ನಂತರ ೮೨ರ ಜುಲೈನಲ್ಲಿ ರೈತರ ಜಾಥಾಕ್ಕೆ ಬೆಂಬಲವನ್ನೇ ಕೊಡದೇ ಇದ್ದಂಥ ಜನರೂ ಕೂಡ

ನರಗುಂದ, ನವಲಗುಂದದಲ್ಲಿ ಚಳುವಳಿಯಲ್ಲಿ ತಮ್ಮ ಪ್ರಾಣವನ್ನೇ ತೆತ್ತ ರೈತರ ಸ್ಮರಣಾರ್ಥ ವೀರ ಗಲ್ಲನ್ನು ನೆಡುವುದಕ್ಕೆ ಬಂದರು. ಅದನ್ನು ಎಲ್ಲ ರಾಜಕೀಯ ಪಕ್ಷಗಳೂ ವಿರೋಧ ಮಾಡುತ್ತವೆಂದು ಹೇಳಿದರು. ಚುನಾವಣೆ ಡಿಕ್ಲೇರ್ ಆಯಿತು. ಅದರಲ್ಲಿ ರಾಜಕೀಯವಾಗಿ ಪಾಲ್ಗೊಳ್ಳಬೇಕೆಂದು ಒಂದು ಗುಂಪು ನಿರ್ಧಾರ ಮಾಡಿದಾಗ ಮಂಡ್ಯ ಮತ್ತು ಹಾಸನದ ಸಭೆಯಲ್ಲಿ ಅವರನ್ನು ನಿರ್ದಾಕ್ಷಿಣ್ಯವಾಗಿ ಕಿತ್ತು ಹಾಕಿದರು. ನನ್ನಂಥ ರೈತ ಆಕಸ್ಮಿಕವಾಗಿ ಚುನಾವಣೆಗೆ ನಿಂತಾಗ ಏನಾದರೂ ಮಾಡಿ ಇವನನ್ನು ಸೋಲಿಸಬೇಕೆಂದು ಮಾಡಿದರು. ಅದು ಮಾನ್ಯ ರೇವಣ ಸಿದ್ದಯ್ಯನವರು ಇರಲಿ ಅಥವಾ ಮಾನ್ಯ ಶಂಕ್ರಿ ಕೊಪ್ಪನವರು ಇರಲಿ, ಅಥವಾ ಬೇರೆ ಯಾರೇ ಇರಲಿ ಅವರು ರಾಜಕೀಯವಾಗಿ ಹೋರಾಟ ಮಾಡಬೇಕೆಂದು ನಿರ್ಧಾರ ಮಾಡಿದರು. ಕೆಲವು ಜನರು ಚುನಾವಣೆಗೆ ನಿಂತರು, ಇನ್ನು ಕೆಲವು ಜನರು ನಿಲ್ಲಲಿಲ್ಲ. ನಾನೂ ಕೂಡ ಒಂದು ಪಕ್ಷದ ಪ್ರತಿನಿಧಿಯಾಗಿ ಚುನಾವಣೆಗೆ ನಿಂತಾಗ ನನ್ನನ್ನು ಹೇಗಾದರೂ ಮಾಡಿ ಸೋಲಿಸಬೇಕೆಂದು ಪ್ರಯತ್ನ ನಡೆದಿತ್ತು. ಆಗ ನನಗೆ ಜ್ಞಾನೋದಯವಾಯಿತು. ಜನತಾಪಕ್ಷವೇ ಚುನಾವಣೆಯಲ್ಲಿ ಗೆಲ್ಲುತ್ತದೆಂದು ತಿಳಿದ ಮೇಲೆ ಡಿಸೆಂಬರ್ ೨೫ನೇ ತಾರೀಖು ಬಹಳಷ್ಟು ಜನರು ಆ ಕಡೆಗೆ ಜಿಗಿದರು. ಇಂಥ ವಿತ್ತಂಡವಾದ, ಇಂಥ ದ್ವಂದ್ವ ನೀತಿಯನ್ನು ಮಾಡಿಕೊಂಡು ಬಂದು ಇದಕ್ಕೆ ನೀವೇ ಕಾರಣರು ಎಂದು ಹೇಳಿದರು. ನಾನು ಹಿಂದಿನ ಸರ್ಕಾರಕ್ಕೆ ವ್ಯಂಗ್ಯವಾಗಿ ಹೇಳುತ್ತಿದ್ದೇನೆ ಎಂದು ಅಲ್ಲ. ಸುಮಾರು ೧೮೦ ಸದಸ್ಯರಿದ್ದ ಸರ್ಕಾರಕ್ಕೆ ಯಾವ ಧೈರ್ಯವೂ ಬಂದಿರಲಿಲ್ಲ. ೨೦ ಜನರ ಮೇಲೆ ಇದ್ದ ಕೊಲೆ ಕೇಸನ್ನು ಅವರು ವಾಪಸು ತೆಗೆದುಕೊಳ್ಳಲಿಲ್ಲ. ಆದರೆ ನಮ್ಮ ಸರ್ಕಾರದವರು ಮಿತ್ರ ಪಕ್ಷಗಳ ಬೆಂಬಲದಿಂದ ಒಂದೇ ದಿನದಲ್ಲಿ ಆ ಎಲ್ಲ ಮೊಕದ್ದಮೆಗಳನ್ನೂ ವಾಪಸು ತೆಗೆದುಕೊಂಡಿತು. ಇದು ಒಂದು ಪ್ರತಿಷ್ಠೆ ಎಂದು ಯಾರೂ ತಿಳಿದುಕೊಳ್ಳಬಾರದು. ರೈತರ ಎಲ್ಲ ಬೇಡಿಕೆಗಳೂ ಇಂದು ಸಂಪೂರ್ಣವಾಗಿ ಈಡೇರಿವೆ ಎಂದು ನಾನು ಹೇಳುವುದಿಲ್ಲ. ಇವತ್ತು ನಮ್ಮದೇ ಆದಂಥ ಸರ್ಕಾರವನ್ನು ರಚನೆ ಮಾಡಲು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಅದ್ದರಿಂದ ತಾವು ಈ ಸನ್ನಿವೇಶದಲ್ಲಿ ಅವರನ್ನು ಮರೆಯಬಾರದು, ಎನ್ನುವ ಮಾತನ್ನು ನಾನು ಬಹಳ ಕಳಕಳಿಯಿಂದ ತಮ್ಮಲ್ಲಿ ಹೇಳುತ್ತಿದ್ದೇನೆ. ನಮ್ಮ ರೈತ ಸಮುದಾಯಕ್ಕೆ ತಾವು ಯಾವುದೇ ರೀತಿಯಿಂದ ಕೂಡ ಹಾನಿಯನ್ನು ಉಂಟುಮಾಡುವುದಕ್ಕೆ ಪ್ರಯತ್ನ ಮಾಡಬೇಡಿ. ಈ ಸರ್ಕಾರ ನಮ್ಮ ರೈತರ ಪರವಾಗಿ ಕೆಲಸ ಮಾಡತಕ್ಕ ಸರ್ಕಾರ. ಇದರಲ್ಲಿ ನಮಗೆ ಯಾವ ಅನುಮಾನವೂ ಇಲ್ಲ. ಹಿಂದೆ ಹಲವಾರು ಘಟನೆಗಳು ಆಗಿಹೋದುವು. ನಿಪ್ಪಾಣಿಯಲ್ಲಿ ಒಂದು ಘಟನೆ ಆದಾಗ ಸುಮಾರು ೧೦ ಸಾವಿರದಷ್ಟು ಜನ ಸೇರಿದ್ದರು ಅಲ್ಲಿ ೨೫–೩೦ ಹೆಣಗಳು ಬಿದ್ದುವು. ಇದು ತಮಗೆ ಗೊತ್ತಿರಬಹುದು.

ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ಮತ್ತು ಸರ್ಕಾರದಲ್ಲಿ ಕೇಳಿಕೊಳ್ಳುವುದೇನೆಂದರೆ ನಮ್ಮ ರೈತ ಸಮುದಾಯದ ಮೇಲೆ ಹೆಚ್ಚಿನ ಕಳಕಳಿ ಇಟ್ಟುಕೊಳ್ಳಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಭೀಮಣ್ಣ ಎಸ್. ಖಂಡ್ರೆ (ಭಾಲ್ಕಿ).—ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಸುಮಾರು ಒಂದು ಸಾವಿರ ನಾಲ್ಕು ನೂರು ಜನ ರೈತರನ್ನು ಸಂಘಟನೆ ಮಾಡಿಕೊಂಡು ಹೈದರಾಬಾದ್ ಚಳುವಳಿಯಲ್ಲಿ ಭಾಗವಹಿಸಿದ್ದೆ. ಈ ವಿಚಾರವನ್ನು ನಾನು ಹೆಮ್ಮೆಯಿಂದ ಹೇಳಿಕೊಳ್ಳಬೇಕಾಗಿದೆ. ಇಲ್ಲಿ ಒಂದು ಮಾತನ್ನು ಹೇಳುವುದಾದರೆ ಯಾವ ರಾಜ್ಯದಲ್ಲೇ ಆಗಲಿ, ಯಾವ ದೇಶದಲ್ಲೇ ಆಗಲಿ ರೈತರ ಪ್ರತಿನಿಧಿಗಳು ಎಂದು ಹೇಳಿಕೊಂಡು ಲೋಕಸಭೆ ಅಥವಾ ವಿಧಾನಸಭೆಗೆ ಬಂದು ಕೂತು ಕೊಳ್ಳುತ್ತಾರೆ. ಇವತ್ತು ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡುವಾಗ ಅವರು ರೈತರಾಗಿರಬಹುದು, ಅಥವಾ ಆಗಿಲ್ಲದಿರಬಹುದು ಆದರೆ ನಾನೂ ಒಬ್ಬ ರೈತ ಎಂದು ಹೇಳಿಕೊಳ್ಳುತ್ತಿದ್ದಾರೆ. ಅದಕ್ಕೆ ಬಹಳ ಮಾನ್ಯತೆಯನ್ನು ಕೊಡುತ್ತಿದ್ದೇವೆ. ಅದು ಕಾಂಗ್ರೆಸ್ ಸರ್ಕಾರ ಇರಲಿ, ಜನತಾ ಸರ್ಕಾರ ಇರಲಿ ಅಥವಾ ಬೇರೆ ಯಾವುದೇ ಸರ್ಕಾರ ಇರಲಿ, ಇಂದಿನ ಪರಿಸ್ಥಿತಿಯಲ್ಲಿ ರೈತರು ಜೀವಂತ ಇರುವುದಕ್ಕೆ ಸಾಧ್ಯವೇ ಇಲ್ಲ. ಇದನ್ನು ಸ್ವಾತಂತ್ರ್ಯ ಬಂದಾಗಿನಿಂದಲೂ ನಾವು ನೋಡುತ್ತಿದ್ದೇವೆ. ಆದರೂ ಯಾವುದೇ ಕಾರ್ಮಿಕರಾಗಲಿ, ರೈತರಾಗಲಿ ತಮ್ಮ ತಮ್ಮ ಶಕ್ತಿಯನ್ನು ಇದಕ್ಕಾಗಿ ಒಪ್ಪಿಸಿದ್ದಾರೆ. ತಮಗೆಲ್ಲರಿಗೂ ಗೊತ್ತಿರುವಂತೆ ನರಗುಂದ, ನವಲಗುಂದ, ಬೀದರ್, ಹೀಗೆ ಯಾವುದೇ ಊರನ್ನು ತೆಗೆದುಕೊಂಡರೂ ಅಪತ್ತು ಸಾವಿರಾರು ಜನರು ಜೈಲಿಗೆ ಹೋಗಿದ್ದರು.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅದನ್ನು ಮತ್ತೆ ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ ೯೦ ಕೋಟಿ ರೂ.ಗಳ ವಿನಾಯಿತಿಯನ್ನು ರೈತರಿಗೆ ಸರ್ಕಾರ ಕೊಟ್ಟಿದೆ. ೪೫ ಕೋಟಿ ರೂ.ಗಳ ವಿನಾಯಿತಿಯನ್ನು ರೈತರಿಗೆ ಸರ್ಕಾರ ಕೊಟ್ಟಿದೆ ಎಂದು ಹೇಳಿದರು. ಅದಕ್ಕೆ ನಾನಾದರೂ ಹೇಳುತ್ತೇನೆ, ಇದು ಭಿಕ್ಷೆ ಏನೂ ಅಲ್ಲ, ನ್ಯಾಯವಾಗಿ ರೈತರಿಗೆ ಸಲ್ಲಬೇಕಾದುದನ್ನು ಇವರು ಕೊಟ್ಟಿದ್ದಾರೆ. ಈ ರೀತಿ ವಿನಾಯಿತಿಯನ್ನು ಕೊಡಬೇಕಾದ್ದು ಸರ್ಕಾರದ ಕರ್ತವ್ಯ. ಆದ್ದರಿಂದ ಅವರು ಕೊಟ್ಟಿದ್ದಾರೆ. ಇವತ್ತು ರೈತ ಏನಾಗಿದ್ದಾನೆ ಎಂದರೆ ದಿನಬೆಳಗಾದರೆ ಎತ್ತುಗಳ ಜೊತೆ ತಾನೂ ದುಡಿದು ಇವನು ಎತ್ತಿನಂತೆಯೇ ಒಂದು ರೀತಿಯ ಬಾಯಿಯಿಲ್ಲದ ಮೂಕಪ್ರಾಣಿಯಾಗಿದ್ದಾನೆ. ಸೀಲಿಂಗ್ ಲಿಮಿಟ್‌ನ್ನು ತಂದು ಒಬ್ಬರಿಗೆ ೧೦ ಎಕರೆಗಿಂತ ಹೆಚ್ಚು ಜಮೀನು ಇರಬಾರದೆಂದು ಕಾನೂನು ಮಾಡಿದ್ದೇವೆ. ಆದರೆ ದೊಡ್ಡ ದೊಡ್ಡ ವರ್ತಕರು, ದೊಡ್ಡ ದೊಡ್ಡ ಅಧಿಕಾರಿಗಳು, ಏನಿದ್ದಾರೆ ಇವರು ಕೋಟ್ಯಾಂತರ ರೂಪಾಯಿ ಸಂಪಾದನೆ ಮಾಡಿಕೊಂಡಿದ್ದಾರೆ. ಆದರೆ ಇವರ ಮೇಲೆ ನಾವು ಯಾವುದೇ ರೀತಿಯ ಸೀಲಿಂಗ್ ಲಿಮಿಟ್‌ನ್ನೂ ಹಾಕಿಲ್ಲ. ಇದು ಸರಿಯೆ ? ಕೇವಲ ರೈತರಿಗೇ ಏತಕ್ಕೆ ಈ ರೀತಿ ಸೀಲಿಂಗ್ ಲಿಮಿಟ್ ಹಾಕಿರುವುದು ? ಈ ತಾರತಮ್ಯವನ್ನು ನಾವು ಇಂದು ನೋಡುತ್ತಿದ್ದೇವೆ.

೫-೦೦ ಪಿ.ಎಂ.

ನಮ್ಮ ಮೇಲೆ ಈ ಪ್ರಕಾರವಾಗಿ ಸೀಲಿಂಗ್ ಹಾಕಿ ಭಿಕ್ಷೆ ಬೇಡುವಂತೆ ಮಾಡಿರುತ್ತೀರಿ. ನಮಗೆ ಯಾವುದೇ ಪ್ರಕಾರವಾಗಿ ಜೀವನ ಮಾಡಲಿಕ್ಕೆ ಸೌಕರ್ಯವಿಲ್ಲದೆ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ನಡೆಸುತ್ತಿದ್ದೀರಿ. ಈವತ್ತು ಪ್ರಭಾವಯುತರಾದ ಜನರು ದನಗಳ ಹಾಗೆ ಟ್ರೀಟ್ ಮಾಡುತ್ತಿರುತ್ತಾರೆ ಅರು ಲಕ್ಷ ಹಳ್ಳಿಗಳಲ್ಲಿರತಕ್ಕಂಥ ರೈತರು ಒಂದಾಗುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಏನು ಒಂದು ಕಾಲದಲ್ಲಿ ಹೇಳುತ್ತಿದ್ದೀರಿ ಅದು ಈವೊತ್ತಿನ ದಿವಸ ಸಾಧ್ಯವಾಗಿರುತ್ತದೆ. ನಲವತ್ತು ವರ್ಷಗಳಿಂದ ಸುಮ್ಮನೇ ಇದ್ದಂಥ ರೈತರು ೪-೫ ದಿವಸಗಳಲ್ಲಿ ಮೂವತ್ತು ನಲವತ್ತು ಸಾವಿರ ಜನರು ಒಂದಾಗಿ ಜೈಲಿಗೆ ಸೇರಬೇಕೆಂದರೆ ಅವರೇನು ದೊಡ್ಡ ದೊಡ್ಡ ರೈತರು ಎಂದು ತಿಳಿದುಕೊಂಡಿದ್ದಿರಾ? ಅವರೇನು ಸಾವಿರಾರು ಎಕರೆ ಭೂಮಿಯನ್ನು ಹೊಂದಿರುತ್ತಾರೆಂದು ತಿಳಿದುಕೊಂಡಿದ್ದೀರಾ. ಈವತ್ತಿನ ದಿವಸ ಹತ್ತು ಎಕರೆ ಭೂಮಿಯನ್ನು ಹೊಂದಿರತಕ್ಕಂಥ ರೈತ ಅಲ್ಪಾವಧಿ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ತೊಂದರೆಪಡುತ್ತಿರುತ್ತಾನೆ. ಮಾನ್ಯ ಕೃಷ್ಣನ್‌ರವರಿಗೆ ಹಾಗೂ ಮಾನ್ಯ ಕಾರ್ಮಿಕ ಮಂತ್ರಿಗಳಿಗೆ ಹೇಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ನಾವು ರೈತರಿಗೆ ಏನೇನು ಅನುಕೂಲಗಳನ್ನು ಕೊಡಬೇಡಿ ಎಂದು ಹೇಳುತ್ತಿಲ್ಲ. ರೈತರಿಗೆ ಏನೇನು ಸವಲತ್ತುಗಳನ್ನು ಕೊಡಬೇಕೆಂದು ಇರುತ್ತದೋ ಅದನ್ನೆಲ್ಲ ಕೊಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಭೀಮಣ್ಣ ಎಸ್.ಖಂಡ್ರೆ.—ತಾವು ಕೈಗಾರಿಕೆಗಳಲ್ಲಿ ಕೆಲಸ ಮಾಡುವವರಿಗೆ ಅನುಕೂಲತೆಗಳನ್ನು ಕೊಡಿ ಎಂದು ಹೇಳುತ್ತಿದ್ದೀರಿ. ನಾನು ಕೂಡ ಶುಗರ್ ಫ್ಯಾಕ್ಟರಿಯ ಚೇರ್ಮನ್ ಆಗಿದ್ದೇನೆ ಶುಗರ್ ಫ್ಯಾಕ್ಟರಿಯಲ್ಲಿ ಯಾವುದೇ ಕಾರ್ಮಿಕನನ್ನು ತೆಗೆದುಕೊಂಡರೂ ಹದಿನೈದು ರೂಪಾಯಿಗಳಿಗಿಂತ ಕಡಿಮೆ ಇಲ್ಲದೆ ಇರುತ್ತಾನೆ. ಅಲ್ಲಿ ಕಾರ್ಮಿಕರು ಹದಿನೈದು ರೂಪಾಯಿಗಳಿಂದ ೪೦ ರೂಪಾಯಿಗಳವರೆಗೆ ಒಂದು ದಿವಸಕ್ಕೆ ಕೂಲಿಯನ್ನು ಸಂಪಾದನೆ ಮಾಡುತ್ತಿರುತ್ತಾರೆ. ಸರ್ಕಾರದ ನಿಯಮದ ಪ್ರಕಾರ ಅವರು ಕೂಲಿಯನ್ನು ತೆಗೆದುಕೊಳ್ಳುತ್ತಿರುತ್ತಾರೆ. ಆದರೆ ಹಳ್ಳಿಗಳಲ್ಲಿ ನಾಲ್ಕು ಎಕರೆ ಭೂಮಿಯನ್ನು ಹೊಂದಿರತಕ್ಕಂಥ ಮನುಷ್ಯ ಕೂಡ ಆಳುಗಳನ್ನು ಇಟ್ಟುಕೊಳ್ಳಬೇಕಾಗಿರುತ್ತದೆ. ಅವನು ಕೂಡ ಹತ್ತು ರೂಪಾಯಿನಿಂದ ಇಪ್ಪತ್ತು ರೂಪಾಯಿಗಳವರೆಗೆ ಕೂಲಿಯನ್ನು ಕೊಡಬೇಕಾಗುತ್ತದೆ. ಹತ್ತು-ಇಪ್ಪತ್ತು ರೂಪಾಯಿಗಳನ್ನು ಕೊಡಬೇಕಾದರೆ ಅವನ ಹತ್ತಿರ ಏನು ಇದೆ. ಎಂದು ವಿಚಾರ ಮಾಡಿರುತ್ತೀರಾ? ಈವತ್ತಿನ ದಿವಸ ದೊಡ್ಡ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕನೇ ಆಗಲಿ, ಚಿಕ್ಕ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕನೇ ಆಗಲಿ ಸುಮಾರು ಐನೂರು ರೂಪಾಯಿಗಳಿಂದ ಆರನೂರು ರೂಪಾಯಿಗಳವರೆಗೆ ಸಂಬಳವನ್ನು ತೆಗೆದುಕೊಳ್ಳುತ್ತಿರುತ್ತಾನೆ. ಆದರೆ ೧೦-೨೦ ಎಕರೆ ಭೂಮಿಯನ್ನು ಇಟ್ಟುಕೊಂಡಿರತಕ್ಕಂಥ ರೈತ ತಿಂಗಳಿಗೆ ಇನ್ನೂರು ರೂಪಾಯಿಗಳ ಆದಾಯವನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಅದಕ್ಕೆ ನಾನು ಮೊದಲಿನಿಂದಲೂ ಒಂದು ಮಾತನ್ನು ಹೇಳುತ್ತಿದ್ದೆ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿ ಎಂದು. ಅವಾಗಿನಿಂದ ಡಿಮ್ಯಾಂಡ್ ಮಾಡುತ್ತಲೇ ಇದ್ದೇನೆ. ಇಂಡಸ್ಟ್ರಿಯಲ್ ವರ್ಕರ್‌ಗೆ ಯಾವ ಪ್ರಕಾರವಾಗಿ ದಿನಗೂಲಿಯನ್ನು ನಿಗದಿ ಮಾಡಿ ಕೊಡುತ್ತಿದ್ದೀರಿ, ಅದೇ

ಪ್ರಕಾರವಾಗಿ ರೈತರಿಗೂ ಕೊಡಬೇಕೆಂದು ಹೇಳುತ್ತಿದ್ದೇನೆ. ನಾವು ಈವತ್ತಿನ ದಿವಸ ಯಾವ ಪರಿಸ್ಥಿತಿಯಲ್ಲಿದ್ದೇವೆಂದರೆ ನಮ್ಮ ದೇಶದಲ್ಲಿ ೮೦ ಪರ್ಸೆಂಟ್ ಜನರು ಬಡರೈತರೇ ಇದ್ದಾರೆ. ಅವರು ಯಾವ ಮಟ್ಟಕ್ಕೆ ಹೋಗಿದ್ದಾರೆಂದರೆ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗಿ ಸಂಘಟನೆ ಮಾಡತಕ್ಕಂಥ ಪರಿಸ್ಥಿತಿಗೆ ಮುಟ್ಟಿದ್ದಾರೆ. ಹಿಂದೆ ಇದು ಸಾಧ್ಯವಿರಲಿಲ್ಲ. ಮೂವತ್ತು ನಲವತ್ತು ಸಾವಿರ ಜನರು ನಾಲ್ಕು ದಿವಸಗಳಲ್ಲಿ ಈ ಪ್ರಕಾರವಾಗಿ ಸಂಘಟನೆಯಾಗಿದ್ದಾರೆ ಎಂದರೆ ಅವರ ಪರಿಸ್ಥಿತಿ ಯಾವ ಪ್ರಕಾರವಾಗಿದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ೨೩ನೇ ತಾರೀಖು ಹೇಳಿದ ಮಾತನ್ನು ಕೇಳಿದ್ದೇವೆ. ಅವರು ಈವತ್ತು ಹೇಳುತ್ತಿರತಕ್ಕಂಥ ಮಾತನ್ನೂ ಕೂಡ ಕೇಳುತ್ತಿದ್ದೇವೆ. ಎಷ್ಟು ವ್ಯತ್ಯಾಸವಿದೆ. ಅವರ ಭಾಷಣದಲ್ಲಿ ಅಂದು ಅವರು ಎಷ್ಟು ಹೆಮ್ಮೆಯ ಮಾತನ್ನು ಆಡಿದ್ದರೋ ಇಂದು ಅಷ್ಟೇ ಕಮಾಂಡ್ ಮಾಡುವಂತಹ ಮಾತನ್ನು ಆಡಿದ್ದಾರೆ. ಯಾರು ನಮ್ಮ ಮುಂದೆ ಬರುತ್ತಾರೆ ನೋಡೋಣ ನಾವು ಅವರನ್ನು ಹಿಡಿದು ಹಾಕುತ್ತೇವೆ, ನಮ್ಮಲ್ಲಿ ಅಷ್ಟು ಶಕ್ತಿ ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ಈವತ್ತಿನ ದಿವಸ ೩೦-೪೦ ಸಾವಿರ ಜನ ಜೈಲಿಗೆ ಹೋಗುತ್ತಿರಬೇಕಾದರೆ ನಮ್ಮ ಡಿಮ್ಯಾಂಡನ್ನು ಈಗಲಾದರೂ ಒಪ್ಪಿಕೊಳ್ಳಿ ಎಂದು ಅವರು ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರವಾಗಿ ಹೇಳುತ್ತಿದ್ದೇನೆ, ಇಂದು ಇವರು ತಮ್ಮ ಸ್ವಯಂ ಶಕ್ತಿಯನ್ನು ಪ್ರದರ್ಶನ ಮಾಡಿದ್ದಾರೆ ಆ ಸ್ವಯಂ ಶಕ್ತಿಯು ಪ್ರದರ್ಶನ ಮಾಡಿದ್ದರಿಂದಲೇ ಈವತ್ತು ತಾವು ಬಗ್ಗಿದ್ದು ಇಲ್ಲದಿದ್ದರೆ ತಾವು ಬಗುತ್ತಿರಲಿಲ್ಲ. ಈವತ್ತು ನಾನು ಹೇಳುತ್ತಿದ್ದೇನೆ, ರೈತ ಸಂಘ ಏನು ಇದೆ, ಆ ರೈತ ಸಂಘದ ಮೆಂಬರ್ ನಾನು ಆಗಿಲ್ಲ. ರೈತರು ಯಾರೇ ಬರಲಿ...

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಖಂಡ್ರೆಯವರೇ ಬಂದರೆ ಬಹಳ ಒಳ್ಳೆಯದು.

ಶ್ರೀ ಭೀಮಣ್ಣ ಎಸ್. ಖಂಡ್ರೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರನ್ನು ಸುಮ್ಮನೆ ಕುಳಿತುಕೊಳ್ಳುವಂತೆ ತಾವು ಹೇಳಿದರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ. ನಮ್ಮಲ್ಲಿ ಎರಡು ರೈತ ಸಂಘಗಳು ಇದೆ. ಯಾವುದು ಎನ್ನುವುದು ತಮಗೂ ಗೊತ್ತಿದೆ. ಕೃಷಿ ರೈತ ಸಂಘ ಏನು ಇದೆ ಅದರ 'ಇನ್‌ಚಾರ್ಜ್' ನಾನು ಇದ್ದೇನೆ. ಮತ್ತೊಂದು ಸಂಘದಲ್ಲಿ ಜನತಾ ಪಾರ್ಟಿ ಇದೆ, ಹಾಗೂ ಸಿ.ಪಿ.ಐ. ಇದೆ. ರೈತಸಂಘದ ಹೆಸರಿನಲ್ಲಿ ಜನತಾ ಪಾರ್ಟಿಯವರು ಬೀದರ್ ಶುಗರ್ ಫ್ಯಾಕ್ಟರಿ ಏನು ಇದೆ ಅಲ್ಲಿ ಬಂದು ಗಲಾಟೆ ಮಾಡಿರುತ್ತಾರೆ. ಇದು ಯಾವ ಅನ್ನಿಸ್ಟರ್ ಪ್ರಾಪರ್ಟಿಯೂ ಅಲ್ಲ. ರೈತ ಸಂಘದ ಹೆಸರಿನಲ್ಲಿ ಗಲಾಟೆ ಮಾಡಿರುತ್ತಾರೆ. ಸ್ವಾಮಿ, ಒಂದು ಮಾತನ್ನು ಹೇಳುತ್ತೇನೆ, ೧೯೫೯ರಲ್ಲಿಯೇ ಪಂಚಾಯತಿ ರಾಜ್ಯವೆಂದು ಇತ್ತು. ಆಗ ಸರಪಂಚ್‌ಗೆ ಒಬ್ಬ ಸೆಕ್ರೆಟರಿ, ನಾನು ಬರುತ್ತಿದ್ದೇನೆ ಎಂಬ ಪ್ರೋಗ್ರಾಮ್ ಕಳುಹಿಸಿದ. ಆತನಿಗೆ ಏನು ಅಧಿಕಾರ ಇದೆ ಎನ್ನುವುದು ಸರಪಂಚ್‌ಗೆ ಗೊತ್ತಿರಲಿಲ್ಲ. ರೈಲ್ವೇ ಸ್ಟೇಷನ್‌ತನಕ ಹೋಗಿ ಆತನ ಬಿಡ್ಡಿಂಗ್ ಮತ್ತು ಸೂಟ್‌ಕೇಸ್ ಎಲ್ಲವನ್ನು 'ತೆಗೆದುಕೊಂಡು ಬಂದ' ಪಂಚಾಯಿತಿಗೆ ಬಂದಮೇಲೆ ಸರಪಂಚ್ ಎಲ್ಲಿ ಎಂದು ಕೇಳಿದ. ಅವನು ನಾನೇ ಸರಪಂಚ್ ಎಂದು ಹೇಳಿದ. ಈ ರೀತಿ ಸೆಕ್ರೆಟರಿಗೆ ಏನು ಅಧಿಕಾರ ಇದೆ ಎನ್ನುವುದು ಸರಪಂಚ್‌ಗೆ ಗೊತ್ತಿಲ್ಲ. ಆ ಕಾಲ ಹೋಯಿತು. ಈವತ್ತು ರೈತರು ಸಂಘಟನೆಯಾಗಿ ಬೀದಿಗೆ ಇಳಿದಿದ್ದಾರೆ. ನಾನು ಒಂದು ಮಾತನ್ನು ಹೇಳುತ್ತಿದ್ದೇನೆ, ಅವರು ಏನು ಬೇಡಿಕೆಯನ್ನು ಇಟ್ಟಿದ್ದಾರೆ, ಅವೆಲ್ಲವೂ ಸರಿಯಾಗಿದೆ. ಅವೆಲ್ಲವನ್ನು ಈಡೇರಿಸಲೇಬೇಕು. ನಾನು ಆವಾಗಿನಿಂದಲೂ ಹೇಳುತ್ತಲೇ ಇದ್ದೇನೆ. ಸರ್ಕಾರದ ವಿರುದ್ಧ ಮಾತನಾಡುತ್ತಲೇ ಇದ್ದೇನೆ. ಈವತ್ತಿನ ದಿವಸ ಊರೊಳಗೆ ಬರಬೇಕಾದರೆ ಅವರು ಯಾವುದೇ ಪಾರ್ಟಿಯವರು ಇರಲಿ, ಯಾರೇ ಬರಲಿ ನಮ್ಮಿಂದ ಪರ್ಮಿಷನ್ ತೆಗೆದುಕೊಂಡು ಬರಬೇಕು ಎನ್ನುವ ಮಟ್ಟಕ್ಕೆ ಪರಿಸ್ಥಿತಿ ಬಂದಿದೆ. ಈವತ್ತಿನ ದಿವಸ ರೈತರ ಸಂಘವನ್ನು ಒಡೆದು ತಿರುವು ಮಾಡಿದ್ದೀರಿ. ಇದು ತಪ್ಪು. ಎಲ್ಲಿ ತಪ್ಪಿದೆಯೋ ಅಲ್ಲಿ ತಪ್ಪು ಇದೆ ಎಂದು ಹೇಳುತ್ತೇನೆ, ಎಲ್ಲಿ ತಪ್ಪು ಇಲ್ಲವೋ ಅಲ್ಲಿ ತಪ್ಪು ಇಲ್ಲವೆಂದು ಹೇಳುತ್ತೇನೆ. ಈವತ್ತು ನಮ್ಮ ರಾಜ್ಯದಲ್ಲಿ ರೈತರು ಏನು ಡಿಮ್ಯಾಂಡ್‌ಗಳನ್ನು ಇಟ್ಟಿರುತ್ತಾರೆ ಅದು ಅಂಥ ದೊಡ್ಡ ಡಿಮ್ಯಾಂಡ್‌ಗಳಲ್ಲ. ಅವರೇನು ನಿಮ್ಮ ರಾಜ್ಯವನ್ನು ಬೇಡುತ್ತಿಲ್ಲ. ನಿಮ್ಮ ಅಧಿಕಾರವನ್ನು ಬೇಡುತ್ತಿಲ್ಲ. ಅವರು ಬೇಡುತ್ತಿರುವುದು ಅಗ್ರಿಕಲ್ಚರ್ ಕಮಿಷನ್ ಮಾಡಬೇಕೆಂದು. ನೀವು ಹೋಗಿ, ನಾವು ಮಾಡುತ್ತೇವೆಂದು ೨೫ನೇ ಮತ್ತು ೨೬ನೇ ತಾರೀಖು ಹೇಳಿದಿರಿ. ಜಿಲ್ಲಾ ಬಂಧಿ ಏತಕ್ಕೆ ಮಾಡುತ್ತಿದ್ದೀರಿ? ರೈತ ಬೆಳೆಸಿದ ಮಾಲನ್ನು ತನ್ನ ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ತೆಗೆದುಕೊಂಡು ಹೋದರೆ ೧೦ ರೂಪಾಯಿ ಅವನಿಗೆ ಜಾಸ್ತಿ ಬರುತ್ತದೆ. ಒಂದು ಸ್ಟೇಟ್‌ನಿಂದ ಮತ್ತೊಂದು ಸ್ಟೇಟ್‌ಗೆ ಕೊಂಡು ಹೋಗಲು ಕೇಳುತ್ತಿಲ್ಲ ಮಹಾರಾಷ್ಟ್ರಕ್ಕೆ ಅಥವಾ ಆಂಧ್ರಕ್ಕೆ ತೆಗೆದುಕೊಂಡು ಹೋಗಲು ಅವರು ಕೇಳುತ್ತಿಲ್ಲ, ಒಂದು ಡಿಸ್ಟ್ರಿಕ್‌ನಿಂದ ಮತ್ತೊಂದು ಡಿಸ್ಟ್ರಿಕ್ಟ್‌ಗೆ ಆಹಾರ ಧಾನ್ಯಗಳನ್ನು ಕೊಂಡುಹೋಗಲು ಅವರು ಕೇಳುತ್ತಿದ್ದಾರೆ, ಇದು ರೈತರ ಡಿಮ್ಯಾಂಡ್. ಇದಕ್ಕೆ ನಮ್ಮ ಸಂಪೂರ್ಣವಾದ ಬೆಂಬಲ ಇದೆ. ಇಂಥ ಸಮಸ್ಯೆಗಳು ಇರುವಾಗ ರೈತರು ಸುಮ್ಮನೆ ಕುಳಿತುಕೊಳ್ಳಲಿಕ್ಕೆ ಸಾಧ್ಯವಾಗುವುದಿಲ್ಲ. ಅವರು

ಈವತ್ತು ಸಂಘಟಿತರಾಗಿದ್ದಾರೆ. ಆದ್ದರಿಂದ ರೈತರ ಡಿಮ್ಯಾಂಡ್ ಏನು ಇದೆ ಅದನ್ನು ಒಪ್ಪಿದ್ದೇವೆಂದು ತಾವು ಹೇಳಬೇಕು. ಅವರು ಇಂದು ಜಾಗೃತರಾಗಿದ್ದಾರೆ. ಅವರಲ್ಲಿ ದೊಡ್ಡ ಶಕ್ತಿ ಇದೆ, ಹಿಂದೆ ೯೦ ಭಾಗದ ಜನರು ರೈತರು ಏನು ಇದ್ದರು ಅವರು ವಿಧಿಯಿಲ್ಲದೆ ಬೀದಿಗೆ ಇಳಿಯದೆ ಸುಮ್ಮನೆ ಕುಳಿತ್ತಿದ್ದರು. ಆದರೆ ಈವತ್ತು ಅವರು ಜಾಗೃತರಾಗಿದ್ದಾರೆ. ಅವರು ಕೇಳುತ್ತಿರುವುದು ಭಿಕ್ಷೆಯಲ್ಲವೆಂದು ತಾವು ತಿಳಿದುಕೊಳ್ಳಬೇಕು.

ಮುಖ್ಯಮಂತ್ರಿಯವರ ಹೇಳಿಕೆ

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸುಮಾರು ೫ ಗಂಟೆಗಳಿಗೂ ಹೆಚ್ಚು ಕಾಲ ಕಳೆದ ನಾಲ್ಕು ದಿವಸಗಳಿಂದ ನಮ್ಮ ರಾಜ್ಯದಲ್ಲಿ ನಡೆದ ರೈತರ ಚಳುವಳಿ ವಿಚಾರದಲ್ಲಿ ಇಲ್ಲಿ ಚರ್ಚೆಯಾಗಿದೆ. ಮಾನ್ಯ ಸದಸ್ಯರು ಈ ಬಗ್ಗೆ ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ ಹಾಗೂ ಟೀಕೆಗಳನ್ನು ಸಹ ಮಾಡಿದ್ದಾರೆ. ಅವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ. ಈ ಮೊದಲು ನನ್ನ ಮನಸ್ಸಿನಲ್ಲಿ ಏನು ಭಯವಿತ್ತು, ಅದು ದುರ್ದೈವದಿಂದ ಸತ್ಯವಾಗುತ್ತಿರುವಂತೆ ಕಾಣುತ್ತಿದೆ. ಈ ಚಳುವಳಿಯ ಕಾರಣದಿಂದಾಗಿ ಕಳೆದ ೪ ದಿನಗಳಲ್ಲಿ ಏನೇನು ನಡೆದಿದೆ ಎಂಬ ಬಗ್ಗೆ ನಾನು ಈ ಸದನಕ್ಕೆ ಅಂಕಿ ಅಂಶಗಳನ್ನು ಒದಗಿಸಿದ್ದೇನೆ. ಚಳುವಳಿಯ ಮೊದಲನೆಯ ದಿವಸ ಎಷ್ಟು ಜನ ಸತ್ಯಾಗ್ರಹಿಗಳು ಬಂಧನಕ್ಕೆ ಒಳಗಾಗಲು ಮುಂದೆ ಬಂದರೋ ಅದರ ಅರ್ಧದಷ್ಟು ಮಾತ್ರ ಎರಡನೆಯ ದಿವಸ ಮುಂದೆ ಬಂದರು. ಮೂರನೆಯ ದಿವಸ ಎರಡನೇಯ ದಿವಸದ ಅರ್ಧದಷ್ಟು ಜನರೂ ಸಹ ಬರಲಿಲ್ಲ. ನಾಲ್ಕನೇಯ ದಿವಸ ಇದರ ಅರ್ಧದಷ್ಟೂ ಸಹ ಇರಲಿಲ್ಲ. ಇಂದು ನಮ್ಮ ಇಡೀ ರಾಜ್ಯದಲ್ಲಿ ಬಂಧಿತರಾದವರ ಸಂಖ್ಯೆ ಕೇವಲ ೧೨೩. ಇದನ್ನು ಸತ್ಯಾಗ್ರಹಿಗಳು ಎಂದು ಕರೆಯಬೇಕೋ ಏನೋ ನನಗೆ ಗೊತ್ತಿಲ್ಲ. ಈ ಮೊದಲೇ ಹೇಳಿದಂತೆ ನನ್ನ ಎರಡನೇ ಭಯ ದುರ್ದೈವದಿಂದ ಸತ್ಯವಾಗಿ ಕಾಣುತ್ತಿದೆ. ನಮ್ಮ ರೈತ ಸಂಘದ ಚಳುವಳಿಯ ಕರೆಗೆ ಅವರು ನಿರೀಕ್ಷೆ ಮಾಡಿದ ಪ್ರಮಾಣದಲ್ಲಿ ಜನರ ಒಂದು ಪ್ರೋತ್ಸಾಹ ಸಿಗದಿದ್ದರೆ ಕೆಲವು ಕಾರ್ಯಕರ್ತರು ಹತಾಶೆಗೊಳ್ಳುವುದು ಸಾಧ್ಯವಿದೆ ಮತ್ತು ಆ ರೀತಿ ಹತಾಶಗೊಂಡಾಗ ಅವರ ಕೈಯಿಂದ ಏನೇನು ಘಟನೆಗಳಾಗಬಹುದೋ ಎಂಬುದನ್ನು ಊಹೆ ಮಾಡುವುದೂ ಕಷ್ಟ ಎಂದು ನಾನು ಹೇಳಿದ್ದೆ. ಅದಕ್ಕೆ ದುರ್ದೈವದಿಂದ ಇವೊತ್ತು ಸಾಕಷ್ಟು ಸೂಚನೆಗಳು ಸಿಕ್ಕಿವೆ. ಮೊದಲನೆಯ ಘಟನೆ ಎಂದರೆ, ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ಎಂಬ ಊರಿನ ಮುಖ್ಯ ರಸ್ತೆಯ ಮೇಲೆ ಒಂದು ದೊಡ್ಡ ಮರವನ್ನು ಕಡಿದು ಹಾಕಿ ರೈತ ಸಂಘದವರು ಎಂದು ಹೇಳುವವರು ವಾಹನ ಸಂಚಾರಕ್ಕೆ ಅಡ್ಡಿ ಮಾಡಿದ್ದಾರೆ. ಎರಡನೇಯದಾಗಿ ಬೆಂಗಳೂರಿನ ಹತ್ತಿರ ಇರುವ ಬಿಡದಿಯಲ್ಲಿ ತಹಶೀಲ್ದಾರರ ಕಛೇರಿಯ ಮುಂದೆ ಇದ್ದಂಥ ಒಂದು ಜೀಪನ್ನು ರೈತ ಸಂಘದವರು ಎಂದು ಹೇಳಿಕೊಳ್ಳುವವರು ಬೆಂಕಿ ಹಾಕಿ ಸುಟ್ಟು ಹಾಕಿದ್ದಾರೆ. ಮೂರನೆಯದಾಗಿ ಶೃಂಗೇರಿ ಬಳಿ ಇರತಕ್ಕಂಥ ನೆಲ್ಲೂರು ಎಂಬ ಹಳ್ಳಿಯ ಹತ್ತಿರ ಆಗುಂಬೆಯಿಂದ ಬರುತ್ತಿದ್ದ ಬಸ್ಸನ್ನು ರೈತ ಸಂಘದವರು ಎಂದು ಹೇಳಿಕೊಳ್ಳುವ ೫೦ ಜನರು ನಿಲ್ಲಿಸಿ, ಆ ಬಸ್‌ಗೆ ಬೆಂಕಿ ಹಾಕಿದ್ದಾರೆ. ಇನ್ನೊಂದು ಅತ್ಯಂತ ದುರ್ದೈವದ ಸಂಗತಿ ಎಂದರೆ, ಇಂದು ಮಧ್ಯಾಹ್ನ ಎರಡೂವರೆ ಮತ್ತು ಮೂರು ಗಂಟೆಯ ಸಮಯದಲ್ಲಿ ಮೈಸೂರಿನಿಂದ ಬೆಂಗಳೂರಿಗೆ ಬರುತ್ತಿದ್ದ ರಾಜಾಸ್ಥಾನದ ಪ್ರವಾಸಿಗರ ಬಸ್‌ನ್ನು ಬಿಡದಿ ಬಳಿ ನಿಲ್ಲಿಸಿ ರೈತರು ಎಂದು ಹೇಳಿಕೊಳ್ಳುವವರು ಆ ಬಸ್‌ಗೆ ಕಲ್ಲೊಡೆದಿದ್ದಾರೆ. ಆ ಬಸ್‌ನ ಗಾಜುಗಳನ್ನೆಲ್ಲಾ ಒಡೆದು ಹಾಕಿದ್ದಾರೆ. ಇದರಿಂದ ಆ ಬಸ್‌ನಲ್ಲಿದ್ದ ಕೆಲವರಿಗೆ ಗಾಯಗಳಾಗಿವೆ. ಅನಂತರ ಆ ಪ್ರಯಾಣಿಕರ ಹತ್ತಿರ ಇರುವಂತಹ ದುಡ್ಡನ್ನು ಕೊಡಬೇಕೆಂದು ಹೇಳಿ ಸುಮಾರು ೬೦ ಸಾವಿರ ರೂಪಾಯಿಗಳನ್ನು ದೋಚಿಕೊಂಡು ಹೋಗಿದ್ದಾರೆ. ಈ ಬಸ್‌ನಲ್ಲಿದ್ದ ೫೧ ಜನ ಪ್ರಯಾಣಿಕರ ಪೈಕಿ ೨೩ ಜನ ಮಹಿಳೆಯರು ಹಾಗೂ ಅನೇಕ ಮಕ್ಕಳಿದ್ದರು. ಈ ಬಸ್‌ಗೆ ಬೆಂಕಿ ಹಾಕುವ ಪ್ರಯತ್ನವೂ ಸಹ ನಡೆದಾಗ ಅದನ್ನು ಹೇಗೋ ತಪ್ಪಿಸಿಕೊಂಡು ಆ ಬಸ್‌ನ ಡ್ರೈವರ್ ಬೆಂಗಳೂರಿಗೆ ಬಂದಿದ್ದಾನೆ. ನಮ್ಮ ರಾಜ್ಯದ ಬೇರೆ ಬೇರೆ ಭಾಗಗಳಿಂದ ಮೈಸೂರಿನ ಹೆಸರನ್ನು ಮತ್ತು ಕರ್ನಾಟಕದ ಹೆಸರನ್ನು ಕೇಳಿಕೊಂಡು ಇಲ್ಲಿಗೆ ಬರುತ್ತಾರೆ. ನಮ್ಮ ರಾಜ್ಯದ ಹೆಸರಿಗೆ ಒಳ್ಳೆಯ ಕೀರ್ತಿ ಇದೆ. ಇದರ ಜೊತೆಗೆ ನಮ್ಮ ರಾಜ್ಯದಲ್ಲಿರುವ ಅನೇಕ ಐತಿಹಾಸಿಕ ಸ್ಥಳಗಳನ್ನು ನೋಡಲು ಹಾಗೂ ಮೈಸೂರು ನಗರದಲ್ಲಿರುವ ಅರಮನೆ, ಬೃಂದಾವನ ಹಾಗೂ ಇನ್ನಿತರ ಸ್ಥಳಗಳನ್ನು ನೋಡಲು ಪ್ರವಾಸಿಗರು ಬರುತ್ತಾರೆ. ಇಂತಹ ಜನರನ್ನು ಕೂಡ ಇವೊತ್ತು ನಮ್ಮ ಒಂದು ಸಂಸ್ಕೃತಿಗೆ ವಿರುದ್ಧವಾಗಿ ಹಿಂಸೆಗೊಳಪಡಿಸುವುದು ಹಾಗೂ ಅವರನ್ನು ದೋಚುವುದು ನಡೆದಿದೆ. ಈ ಒಂದು ಚಳುವಳಿಯ ಹಿನ್ನೆಲೆಯಲ್ಲಿ